ಕೆ.ಎಂ.ಎಫ್.

ಲಕ್ಷಾಂತರ ಗ್ರಾಹಕರ ನಂದಿನಿ ಮೆಚ್ಚುಗೆಯ ಬ್ರಾಂಡ್

ಕರ್ನಾಟಕ ಸಹಕಾರಿ ಹಾಲು ಉತ್ಪಾದಕರ ಮಹಾಮಂಡಳಿ ನಿಯಮಿತ.
ಬೆಂಗಳೂರು - 560 029



2019-20ನೇ ಸಾಲಿನ ಲೆಕ್ಕ ಪರಿಶೋಧನಾ ವರದಿ

S.R. & M.R. ASSOCIATES

Chartered Accountants

ಗೆ,

ವ್ಯವಸ್ಥಾಪಕ ನಿರ್ದೇಶಕರು

ಕರ್ನಾಟಕ ಸಹಕಾರಿ ಹಾಲು ಉತ್ಪಾದಕರ ಮಹಾಮಂಡಳಿ ನಿಯಮಿತ

ಕಹಾಮ ಸಂಕೀರ್ಣ, ಡಾ: ಎಂ.ಹೆಚ್. ಮರೀಗೌಡ ರಸ್ತೆ,

ಬೆಂಗಳೂರು–560029

ಮಾನ್ಯರೇ,

ವಿಷಯ: 2019–20 ನೇ ಸಾಲಿನ ಲೆಕ್ಕ ಪರಿಶೋಧನಾ ವರದಿಯನ್ನು ಸಲ್ಲಿಸುವ ಕುರಿತು.

ಉಲ್ಲೇಖ: 1) ಆದೇಶ ಸಂಖ್ಯೆ: ಕಹಾಮ/ವಿತ್ತ/ಲೆಪ/478ಎ/2019–20 ದಿನಾಂಕ: 19.10.2019

2) C-27/02/2013-12:45:39

****

ಕರ್ನಾಟಕ ಸಹಕಾರಿ ಸಂಘಗಳ (ತಿದ್ದುಪಡಿ) ಕಾಯ್ದೆ 2012 ರ ಕಲಂ 63 (1) ರ ಅನ್ವಯ ತಮ್ಮ ಸಂಘದ ಸನ್ 2019–20 ನೇ ಸಾಲಿನ ಲೆಕ್ಕ ಪರಿಶೋಧನೆ ಕುರಿತು ತಾವು ನಮ್ಮನ್ನು ಲೆಕ್ಕ ಪರಿಶೋಧಕರು ಎಂದು ಉಲ್ಲೇಖ (1) ರ ಪತ್ರದ ಪ್ರಕಾರ ನಿಯುಕ್ತಿಗೊಳಿಸಿದ್ದು, ಉಲ್ಲೇಖ (2) ರ ಆದೇಶದನ್ವಯ ನಮಗೆ ಕರ್ನಾಟಕ ಸಹಕಾರಿ ಸಂಘಗಳ (ತಿದ್ದುಪಡಿ) ಕಾಯ್ದೆ 2012 ರ ಕಲಂ 63 (1) ರಲ್ಲಿ ಪ್ರದತ್ತವಾದ ಅಧಿಕಾರದಿಂದ ತಮ್ಮ ಸಂಘದ ಸನ್ 2019–20ನೇ ಸಾಲಿನ ಅಂತಿಮ ಲೆಕ್ಕ ಪರಿಶೋಧನೆ ಪೂರೈಸಿ ಕರ್ನಾಟಕ ಸಹಕಾರಿ ಸಂಘಗಳ (ತಿದ್ದುಪಡಿ) ಕಾಯ್ದೆ 2012 ರ ಕಲಂ 63 (8) ರಲ್ಲಿ ಪ್ರದತ್ತವಾದ ಅಧಿಕಾರದಿಂದ ತಮ್ಮ ಸಂಘದ ಸನ್ 2019–20ನೇ ಸಾಲಿನ ಅಂತಿಮ ಲೆಕ್ಕ ಪರಿಶೋಧನಾ ವರದಿಯನ್ನು ಮುಂದಿನ ಕ್ರಮಕ್ಕಾಗಿ ಲಗತ್ತಿಸಿ ಸಲ್ಲಿಸಲಾಗಿದೆ.

ಕರ್ನಾಟಕ ಸಹಕಾರಿ ಸಂಘಗಳ (ತಿದ್ದುಪಡಿ) ಕಾಯ್ದೆ 2012 ರ ಕಲಂ 63 (1) ರನ್ವಯ ಸದರಿ ಲೆಕ್ಕ ಪರಿಶೋಧನಾ ವರದಿಯನ್ನು ಮುಂಬರುವ ಸಂಘದ ವಾರ್ಷಿಕ ಮಹಾಸಭೆಯಲ್ಲಿ ಮಂಡಿಸಿ, ಅದರಲ್ಲಿರುವ ನ್ಯೂನ್ಯತೆಗಳ ಬಗ್ಗೆ ಅನುಸರಣಾ ಕ್ರಮ ಕೈಕೊಂಡು, ಕೈಕೊಂಡ ಕ್ರಮದ ಅನುಪಾಲನಾ ವರದಿಯನ್ನು ಸಂಘದ ವಾರ್ಷಿಕ ಮಹಾಸಭೆ ಜರುಗಿದ 30 ದಿನಗಳೊಳಗಾಗಿ ಸಹಕಾರ ಇಲಾಖೆಗೆ ಹಾಗೂ ಸಹಕಾರ ಸಂಘಗಳ ಲೆಕ್ಕ ಪರಿಶೋಧನಾ ಇಲಾಖೆಗೆ ಸಲ್ಲಿಸುವುದು.

ತಮ್ಮ ವಿಶ್ವಾಸಿ,

ಸ್ಥಳ: ಬೆಂಗಳೂರು

ದಿನಾಂಕ: 28.10.2020

ಮೆ: ಎಸ್. ಆರ್. & ಎಮ್. ಆರ್. ಅಸೋಸಿಯೇಟ್ಸ್.

ಸನ್ನದು ಲೆಕ್ಕಪರಿಶೋಧಕರು

ಸಂಸ್ಥೆ ನೋಂದಣಿ ಸಂಖ್ಯೆ: 008094S

S.R. & M.R. ASSOCIATES CHARTERED ACCOUNTANTS BANGALORE

ಸಿಎ ಎಸ್. ಆರ್. ರಘುನಾಥ

ಪಾಲುದಾರರು

ಸದಸ್ಯತ್ವ ಸಂಖ್ಯೆ: 205503

UDIN:20205503AAAAFL4965

ಪ್ರತಿಗಳನ್ನು ಗೌರವಪೂರ್ವಕವಾಗಿ ಸಲ್ಲಿಸಿದೆ.

1) ನಿರ್ದೇಶಕರು, ಸಹಕಾರಿ ಲೆಕ್ಕಪರಿಶೋಧನಾ ಇಲಾಖೆ, ಶಂಕರ ಮಠ ರಸ್ತೆ, ಬೆಂಗಳೂರು
2) ಸಹಕಾರ ಸಂಘಗಳ ನಿಬಂಧಕರು, ನಂ.1, ಅಲಿ ಆಸ್ಕರ್ ರಸ್ತೆ, ಬೆಂಗಳೂರು
3) ಸಹಕಾರ ಸಂಘಗಳ ಅಪರ ನಿಬಂಧಕರು (ಕೈ ಮತ್ತು ಹೈ), ಅಲಿ ಆಸ್ಕರ್ ರಸ್ತೆ, ಬೆಂಗಳೂರು
4) ಉಪ ನಿರ್ದೇಶಕರು, ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಇಲಾಖೆ, ಬಹು ಮಹಡಿಗಳ ಕಟ್ಟಡ, ಬೆಂಗಳೂರು
5) ನಿರ್ದೇಶಕರು, ರಾಷ್ಟ್ರೀಯ ಹೈನು ಅಭಿವೃದ್ಧಿ ಮಂಡಳಿ, ಬೆಂಗಳೂರು
6) ಕಛೇರಿ ಪ್ರತಿ

No. 2885, 14th Main Road, 'E' Block, 2nd Stage, Rajajinagar, Bengaluru - 560 010.

Phone : +91 80 - 4853 2940, 99000 23151 | E-mail : auditors@srmr.co.in

S.R. & M.R. ASSOCIATES
Chartered Accountants

ಗೆ,
ಸದಸ್ಯರು,
ಕರ್ನಾಟಕ ಸಹಕಾರಿ ಹಾಲು ಉತ್ಪಾದಕರ ಮಹಾಮಂಡಳಿ ನಿಯಮಿತ,
ಕಹಾಮ ಸಂಕೀರ್ಣ, ಡಾ: ಎಂ.ಎಚ್.ಮರೀಗೌಡ ರಸ್ತೆ,
ಬೆಂಗಳೂರು–560029

ಸ್ವಾಯತ್ತ ಲೆಕ್ಕ ಪರಿಶೋಧಕರ ವರದಿ

ಅಭಿಪ್ರಾಯ:

ನಾವು ಕರ್ನಾಟಕ ಸಹಕಾರಿ ಹಾಲು ಉತ್ಪಾದಕರ ಮಹಾಮಂಡಳಿ ನಿಯಮಿತ., ಇದರ ದಿನಾಂಕ:31.03.2020 ರಲ್ಲಿ ಇದ್ದಂತಹ ಆಸ್ತಿ–ಹೊಣೆ ಪಟ್ಟಿ ಹಾಗೂ ಸದರಿ ದಿನಾಂಕದಂದು ಅಂತ್ಯಗೊಂಡ ವರ್ಷದ ಲಾಭ ಮತ್ತು ನಷ್ಟ ಲೆಕ್ಕ ಹಾಗೂ ಪ್ರಮುಖ ಲೆಕ್ಕನಿರ್ವಹಣಾ ನೀತಿಗಳ ಸಾರಾಂಶಗಳನ್ನೊಳಗೊಂಡ ಹಾಗೂ ಆರ್ಥಿಕ ತ:ಖ್ತೆಗಳಿಗೆ ಸಂಬಂಧಿಸಿದ ಅನುಬಂಧಗಳು/ ಕುಳುವಾರುಗಳ/ಹಾಗೂ ಮತ್ತಿತರ ವಿವರಣಾತ್ಮಕ ಮಾಹಿತಿಗಳನ್ನು ಒಳಗೊಂಡಿರುವ ಆರ್ಥಿಕ ತ:ಖ್ತೆಗಳನ್ನು ಲೆಕ್ಕ ಪರಿಶೋಧನೆ ಮಾಡಿರುತ್ತೇವೆ.

ಈ ವರದಿಯೊಂದಿಗೆ ಅಡಕಗೊಳಿಸಲಾಗಿರುವ ಸಂಸ್ಥೆಯ ಆರ್ಥಿಕ ತ:ಖ್ತೆಗಳನ್ನು ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಅನ್ವಯ ಎಲ್ಲಾ ಪ್ರಮುಖ ಅಂಶಗಳೊಂದಿಗೆ ಸಿದ್ಧಪಡಿಸಲಾಗಿದೆ ಎಂದು ಅಭಿಪ್ರಾಯ ಪಡುತ್ತೇವೆ.

ಅಭಿಪ್ರಾಯಕ್ಕಾಗಿ ಆಧಾರ:

ಲೆಕ್ಕಪರಿಶೋಧನೆಯ ಪ್ರಮಾಣಕಗಳ ಅನ್ವಯ ನಾವು ನಮ್ಮ ಲೆಕ್ಕಪರಿಶೋಧನೆಯನ್ನು ನಿರ್ವಹಿಸಿದ್ದೇವೆ. ಪ್ರಮಾಣಕಗಳಡಿಯಲ್ಲಿ ನಮ್ಮ ಮತ್ತಷ್ಟು ಹೊಣೆಗಾರಿಕೆಗಳನ್ನು ಈ ವರದಿಯ **"ಆರ್ಥಿಕ ತ:ಖ್ತೆಗಳ ಲೆಕ್ಕಪರಿಶೋಧನೆಯಲ್ಲಿ ಲೆಕ್ಕಪರಿಶೋಧಕರ ಹೊಣೆಗಾರಿಕೆಗಳು"** ಶೀರ್ಷಿಕೆಯಡಿಯಲ್ಲಿ ವಿವರಿಸಲಾಗಿದೆ. ಆರ್ಥಿಕ ತ:ಖ್ತೆಗಳ ಲೆಕ್ಕಪರಿಶೋಧನೆಗೆ ಸಂಬಂಧಿಸಿದಂತೆ, ಸಂಬಂಧಪಟ್ಟ ನೈತಿಕ ಅಗತ್ಯತೆಗೆ ಅನುಗುಣವಾಗಿ ಲೆಕ್ಕಪರಿಶೋಧನೆ ಕೈಗೊಂಡಿರುವ ಸಂಸ್ಥೆಯೊಂದಿಗೆ ನಾವು ಸ್ವಾಯತ್ತತೆಯನ್ನು ಕಾಪಾಡಿಕೊಂಡಿರುತ್ತೇವೆ ಮತ್ತು ಅಂತಹ ಅಗತ್ಯತೆಗಳ ಅನ್ವಯ ನಮ್ಮ ಇತರೆ ಹೊಣೆಗಾರಿಕೆಗಳನ್ನು ಪೂರೈಸಿರುತ್ತೇವೆ. ನಮ್ಮ ಅಭಿಪ್ರಾಯ ವ್ಯಕ್ತಪಡಿಸಲು ನಾವು ಪಡೆದಿರುವ ಲೆಕ್ಕಪರಿಶೋಧನಾ ಪುರಾವೆಗಳು ಸಾಕಷ್ಟು ಮತ್ತು ಯುಕ್ತವಾದ ಆಧಾರವನ್ನು ಒದಗಿಸುತ್ತವೆಯೆಂದು ನಾವು ನಂಬಿರುತ್ತೇವೆ.

ಆರ್ಥಿಕ ತ:ಖ್ತೆಗಳ ಬಗ್ಗೆ ಆಡಳಿತ ಮಂಡಳಿ ಮತ್ತು ನಿರ್ವಹಣೆ ವಹಿಸಿಕೊಂಡವರ ಜವಾಬ್ದಾರಿಗಳು:

ಆರ್ಥಿಕ ತ:ಖ್ತೆಗಳನ್ನು ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಅನ್ವಯ ಸಿದ್ದಪಡಿಸುವುದು ಮತ್ತು ವಂಚನೆ ಅಥವಾ ದೋಷದ ದೆಸೆಯಿಂದಾಗುವ ಗುರುತರವಾದ ತಪ್ಪು ಹೇಳಿಕೆಗಳಿಂದ ಮುಕ್ತವಾಗಿರುವಂತೆ ಆರ್ಥಿಕ ತ:ಖ್ತೆಗಳನ್ನು ಸಿದ್ದಪಡಿಸಲು ಅಗತ್ಯವಾದ ಆಂತರಿಕ ಹತೋಟಿಯನ್ನು ನಿರ್ಧರಿಸುವುದು ಆಡಳಿತ ಮಂಡಳಿಯ ಹೊಣೆಗಾರಿಕೆಯಾಗಿರುತ್ತದೆ.

S.R. & M.R. ASSOCIATES CHARTERED ACCOUNTANTS BANGALORE

No. 2885, 14th Main Road, 'E' Block, 2nd Stage, Rajajinagar, Bengaluru - 560 010.
Phone : +91 80 - 4853 2940, 99000 23151 | E-mail : auditors@srmr.co.in

ಆರ್ಥಿಕ ತ:ಖ್ತೆಗಳನ್ನು ಸಿದ್ಧಗೊಳಿಸುವಾಗ ಸಂಸ್ಥೆಯ ಕಾರ್ಯಾಚರಣೆಯನ್ನು ಮುಂದುವರೆಸುವ ಸಾಮರ್ಥ್ಯದ ಬಗ್ಗೆ ನಿರ್ಣಯಿಸಿ, ಸಂಸ್ಥೆಯನ್ನು ವಿಸರ್ಜಿಸುವ ಇರಾದೆ ಅಥವಾ ಕಾರ್ಯಾಚರಣೆಯನ್ನು ಸ್ಥಗಿತಗೊಳಿಸುವ ಅಥವಾ ಆ ರೀತಿ ಮಾಡಲು ಇವುಗಳನ್ನು ಬಿಟ್ಟು ವಾಸ್ತವಿಕವಾಗಿ ಅನ್ಯಮಾರ್ಗವಿಲ್ಲದೇ ಇರುವಂತಹ ಸಂದರ್ಭಗಳನ್ನು ಹೊರತುಪಡಿಸಿ ಸಂಸ್ಥೆಯು ಕ್ರಿಯಾಶೀಲವಾಗಿ ಮುಂದುವರೆಯುವ ವಿಷಯಗಳನ್ನು ಬಹಿರಂಗಗೊಳಿಸುವುದು ಮತ್ತು ಕ್ರಿಯಾಶೀಲವಾಗಿ ಮುಂದುವರೆಯುವ ಆಧಾರದಲ್ಲಿ ಲೆಕ್ಕಪತ್ರಗಳನ್ನು ಸಿದ್ಧಗೊಳಿಸುವುದು ಆಡಳಿತ ಮಂಡಳಿಯ ಹೊಣೆಗಾರಿಕೆಯಾಗಿರುತ್ತದೆ.

ಆರ್ಥಿಕ ತ:ಖ್ತೆಗಳ ವರದಿಯನ್ನು ಸಿದ್ಧಪಡಿಸುವ ಪ್ರಕ್ರಿಯೆಗಳ ಮೇಲ್ವಿಚಾರಣೆಯು ಸಂಸ್ಥೆಯ ಆಡಳಿತ ಮಂಡಳಿಯ ಹೊಣೆಗಾರಿಕೆಯಾಗಿರುತ್ತದೆ.

ಆರ್ಥಿಕ ತ:ಖ್ತೆಗಳ ಲೆಕ್ಕ ಪರಿಶೋಧನೆಯಲ್ಲಿ ಲೆಕ್ಕ ಪರಿಶೋಧಕರ ಜವಾಬ್ದಾರಿ:

ಆರ್ಥಿಕ ತ:ಖ್ತೆಗಳು ಸಂಪೂರ್ಣವಾಗಿ, ವಂಚನೆ ಮತ್ತು ದೋಷದ ದೆಸೆಯಿಂದಾಗಿ, ಗುರುತರವಾದ ತಪ್ಪು ಹೇಳಿಕೆಗಳಿಂದ ಮುಕ್ತವಾಗಿವೆಯೇ ಎಂಬ ಬಗ್ಗೆ ಯುಕ್ತವಾದ ಭರವಸೆ ಪಡೆಯುವುದು ನಮ್ಮ ಉದ್ದೇಶವಾಗಿರುತ್ತದೆ. ಯುಕ್ತವಾದ ಭರವಸೆಯು ಉನ್ನತಮಟ್ಟದ ಭರವಸೆಯಾಗಿದ್ದರೂ ಸಹ ಲೆಕ್ಕಪರಿಶೋಧನಾ ಪ್ರಮಾಣಕಗಳ ಅನುಸಾರವಾಗಿ ಕೈಗೊಂಡ ಲೆಕ್ಕಪರಿಶೋಧನೆಯು ಗುರುತರವಾದ ತಪ್ಪು ಹೇಳಿಕೆಗಳಿದ್ದರೂ ಅವುಗಳನ್ನು ಪತ್ತೆ ಮಾಡುತ್ತದೆ ಎಂದು ಯಾವುದೇ ಸಂದರ್ಭಗಳಲ್ಲು ಖಾತರಿ ನೀಡಲು ಸಾಧ್ಯವಿರುವುದಿಲ್ಲ. ಗುರುತರವಾದ ತಪ್ಪು ಹೇಳಿಕೆಗಳು ವಂಚನೆ ಅಥವಾ ದೋಷಗಳಿಂದ ಉದ್ಭವಿಸಬಹುದಾದರೂ, ಬಳಕೆದಾರರು ಸದರಿ ಆರ್ಥಿಕ ತ:ಖ್ತೆಗಳ ಆಧಾರದ ಮೇಲೆ ತೆಗೆದುಕೊಳ್ಳುವ ಆರ್ಥಿಕ ನಿರ್ಧಾರಗಳಲ್ಲಿ ಬಿಡಿಯಾಗಿ ಅಥವಾ ಒಟ್ಟಾರೆಯಾಗಿ ತಕ್ಕಮಟ್ಟಿಗೆ ಪ್ರಭಾವ ಬೀರುವ ನಿರೀಕ್ಷೆಯಿದ್ದಲ್ಲಿ ಮಾತ್ರ ಅಂತಹ ತಪ್ಪು ಹೇಳಿಕೆಗಳನ್ನು ಗುರುತರವಾದದ್ದು ಎಂದು ಪರಿಗಣಿಸಲಾಗುತ್ತದೆ.

ಲೆಕ್ಕಪರಿಶೋಧನೆಯ ಭಾಗವಾಗಿ, ಲೆಕ್ಕಪರಿಶೋಧನೆ ಪ್ರಮಾಣಕಗಳ ಅನ್ವಯ, ನಾವು ವೃತ್ತಿಪರ ತೀರ್ಮಾನಗಳನ್ನು ತೆಗೆದುಕೊಂಡಿದ್ದೇವೆ ಹಾಗೂ ವೃತ್ತಿಪರ ಮನೋಭಾವವನ್ನು ಲೆಕ್ಕಪರಿಶೋಧನೆಯುದ್ದಕ್ಕೂ ಇರಿಸಿಕೊಂಡಿದ್ದೇವೆ.

- ನಾವು ವಂಚನೆ ಅಥವಾ ದೋಷದ ದೆಸೆಯಿಂದ ಉಂಟಾಗಬಹುದಾದ ಗುರುತರ ತಪ್ಪು ಹೇಳಿಕೆಗಳ ಅಪಾಯದ ಪರಿಣಾಮಗಳನ್ನು ಗುರುತಿಸುವುದು ಮತ್ತು ನಿರ್ಧರಿಸುವುದನ್ನು ಒಳಗೊಂಡಂತೆ ಯುಕ್ತ ಕಾರ್ಯವಿಧಾನವನ್ನು ನಾವು ಆಯ್ಕೆ ಮಾಡಿ ಕಾರ್ಯಗತಗೊಳಿಸಿರುತ್ತೇವೆ. ಹಾಗೂ ನಮ್ಮ ಅಭಿಪ್ರಾಯಗಳಿಗೆ ಆಧಾರ ಒದಗಿಸುವ ಸಾಕಷ್ಟು ಮತ್ತು ಯುಕ್ತವಾದ ಪುರಾವೆಗಳನ್ನು ಪಡೆದಿರುತ್ತೇವೆ. ವಂಚನೆಯಿಂದ ಉಂಟಾಗಬಹುದಾದ ಗುರುತರವಾದ ತಪ್ಪುಹೇಳಿಕೆಗಳನ್ನು ಪತ್ತೆ ಮಾಡದಿರುವುದು, ದೋಷದ ದೆಸೆಯಿಂದ ಉಂಟಾಗಬಹುದಾದ ಗುರುತರವಾದ ತಪ್ಪು ಹೇಳಿಕೆಗಳನ್ನು ಪತ್ತೆ ಮಾಡದಿರುವುದಕ್ಕಿಂತ ಹೆಚ್ಚಿನ ಅಪಾಯವನ್ನು ಉಂಟುಮಾಡುತ್ತದೆ. ಏಕೆಂದರೆ, ವಂಚನೆಯು ಒಳಸಂಚು, ಸುಳ್ಳು ದಾಖಲೆ, ಉದ್ದೇಶಪೂರ್ವಕ ಕರ್ತವ್ಯಲೋಪ, ತಪ್ಪಾಗಿ ನಿರೂಪಿಸುವಿಕೆ ಅಥವಾ ಅಂತರಿಕ ಹತೋಟಿಯ ಅತಿಕ್ರಮಣಗಳನ್ನು ಒಳಗೊಂಡಿರಬಹುದಾಗಿರುತ್ತದೆ.
- ನಾವು ಲೆಕ್ಕಪರಿಶೋಧನೆಗೆ ಸಂಬಂಧಿಸಿದಂತೆ, ಸಂಸ್ಥೆಯ ಆಂತರಿಕ ಹತೋಟಿಯ ಗುಣಮಟ್ಟವನ್ನು ಪರಿಗಣಿಸಿ ಸಂದರ್ಭೋಚಿತವಾಗಿ ಯುಕ್ತ ಲೆಕ್ಕಪರಿಶೋಧನೆಯ ಕಾರ್ಯವಿಧಾನವನ್ನು ಅಳವಡಿಸಿಕೊಳ್ಳಲು ಸಂಸ್ಥೆಯ ಆಂತರಿಕ ಹತೋಟಿಯ ಬಗ್ಗೆ ಮಾಹಿತಿಯನ್ನು ಪಡೆದಿರುತ್ತೇವೆಯೇ ಹೊರತು ಸಂಸ್ಥೆಯ ಪರಿಣಾಮಕಾರಿಯಾದ ಆಂತರಿಕ ಹತೋಟಿಯ ಬಗ್ಗೆ ಅಭಿಪ್ರಾಯ ವ್ಯಕ್ತಪಡಿಸುವ ಉದ್ದೇಶವಿರುವುದಿಲ್ಲ.

S.R. & M.R. ASSOCIATES CHARTERED ACCOUNTANTS BANGALORE

- ಆಡಳಿತ ಮಂಡಳಿಯು ಬಳಸಿರುವ ಲೆಕ್ಕನೀತಿಗಳ ಔಚಿತ್ಯತೆಯ ಮೌಲ್ಯಮಾಪನ ಮತ್ತು ಲೆಕ್ಕಾಚಾರದ ಅಂದಾಜುಗಳ ಸಮರ್ಪಕತೆ ಹಾಗೂ ಸಂಬಂಧಪಟ್ಟ ವಿಷಯಗಳ ಬಹಿರಂಗಗೊಳಿಸುವಿಕೆ ಬಗ್ಗೆ ನಾವು ಮೌಲ್ಯಮಾಪನ ಮಾಡಿರುತ್ತೇವೆ.
- ಆಡಳಿತಮಂಡಳಿಯು ಕ್ರಿಯಾಶೀಲ ಸಂಸ್ಥೆಯಾಗಿ ಮುಂದುವರೆಯುವ ಆಧಾರದಲ್ಲಿ ಸಿದ್ಧಗೊಳಿಸಿರುವ ಲೆಕ್ಕಾಚಾರಗಳ ಸಮರ್ಪಕತೆ ಮತ್ತು ಲೆಕ್ಕಪರಿಶೋಧನಾ ಪುರಾವೆಗಳನ್ನು ಆಧರಿಸಿ, ಸಂದೇಹ ಬೀರಬಹುದಾದ ಯಾವುದಾದರೂ ಪ್ರಮುಖ ಘಟನೆಗಳು ಅಥವಾ ವಿದ್ಯಮಾನಗಳಿಂದ ಸಂಸ್ಥೆಯ ಕಾರ್ಯಾಚರಣೆಯ ಸಾಮರ್ಥ್ಯದ ಮೇಲೆ ಇರಬಹುದಾದ ಗಣನೀಯ ಅನಿಶ್ಚಿತ ಸ್ಥಿತಿಗತಿಗಳ ಬಗ್ಗೆ ನಾವು ತೀರ್ಮಾನಿಸಿರುತ್ತೇವೆ. ಗಣನೀಯವಾದ ಅನಿಶ್ಚಿತತೆಯೊಂದು ಇದೆಯೆಂದು ನಾವು ತೀರ್ಮಾನಿಸಿದಲ್ಲಿ, ಆರ್ಥಿಕ ತ:ಖ್ತೆಗಳಲ್ಲಿ ಅವುಗಳಿಗೆ ಸಂಬಂಧಿಸಿದ ವಿಷಯಗಳನ್ನು ಬಹಿರಂಗಗೊಳಿಸಿರುವ ಬಗ್ಗೆ ಗಮನ ಸೆಳೆಯಬೇಕಾಗಿರುತ್ತದೆ ಅಥವಾ ಒಂದು ವೇಳೆ ಸಾಕಷ್ಟು ಪ್ರಮಾಣದಲ್ಲಿ ವಿಷಯವನ್ನು ಬಹಿರಂಗಗೊಳಿಸದೇ ಇರುವ ಪಕ್ಷದಲ್ಲಿ ನಮ್ಮ ಅಭಿಪ್ರಾಯವನ್ನು ಮಾರ್ಪಾಡುಗೊಳಿಸಬೇಕಾಗಿರುತ್ತದೆ. ನಮ್ಮ ತೀರ್ಮಾನಗಳು ನಮ್ಮ ಲೆಕ್ಕಪರಿಶೋಧನಾ ವರದಿಯ ದಿನಾಂಕದವರೆಗೆ ಪಡೆದಿರುವ ಲೆಕ್ಕಪರಿಶೋಧನಾ ಪುರಾವೆಗಳನ್ನು ಆಧರಿಸಿವೆ. ಹಾಗಿದ್ದರೂ, ಭವಿಷ್ಯದ ಘಟನೆಗಳು ಅಥವಾ ವಿದ್ಯಮಾನಗಳು ಸಂಸ್ಥೆಯ ಕಾರ್ಯಾಚರಣೆಯನ್ನು ಸ್ಥಗಿತಗೊಳಿಸಲು ಕಾರಣವಾಗಬಹುದು.
- ನಮ್ಮ ಲೆಕ್ಕಪರಿಶೋಧನೆಯಲ್ಲಿ ಗುರುತಿಸಿರುವ ಮಹತ್ವದ ಆಂತರಿಕ ಹತೋಟಿಗಳಲ್ಲಿನ ನ್ಯೂನತೆಗಳು ಏನಾದರೂ ಇದ್ದಲ್ಲಿ ಅವುಗಳನ್ನು ಒಳಗೊಂಡಂತೆ ಲೆಕ್ಕಪರಿಶೋಧನೆಯ ಯೋಜಿತ ವ್ಯಾಪ್ತಿ ಸಮಯ ಮತ್ತು ಲೆಕ್ಕಪರಿಶೋಧನೆಯಲ್ಲಿ ಗುರುತಿಸಿರುವ ಮಹತ್ವದ ಅಂಶಗಳ ಬಗ್ಗೆ ಹಾಗೂ ಇತರೆ ವಿಚಾರಗಳ ಬಗ್ಗೆ ಆಡಳಿತ ಮಂಡಳಿಗೆ ತಿಳಿಸಿರುತ್ತೇವೆ.

ಸ್ಥಳ: ಬೆಂಗಳೂರು
ದಿನಾಂಕ: 28.10.2020

ಮೆ: ಎಸ್.ಆರ್. & ಎಮ್. ಆರ್. ಅಸೋಸಿಯೇಟ್ಸ್.
ಸನ್ನದು ಲೆಕ್ಕಪರಿಶೋಧಕರು
ಸಂಸ್ಥೆ ನೋಂದಣಿ ಸಂಖ್ಯೆ: 008094S

S.R. & M.R. ASSOCIATES CHARTERED ACCOUNTANTS BANGALORE

ಸಿಎ ಎಸ್.ಆರ್. ರಘುನಾಥ
ಪಾಲುದಾರರು
ಸದಸ್ಯತ್ವ ಸಂಖ್ಯೆ: 205503
UDIN:20205503AAAAFL4965

ಪರಿವಿಡಿ

ಕ್ರ.ಸಂ	ವಿವರ	ಪುಟ ಸಂಖ್ಯೆ
01	ಲೆಕ್ಕಪರಿಶೋಧನಾ ವರದಿ	1-39
02	ಲೆಕ್ಕಪರಿಶೋಧಕರ ವರ್ಗೀಕರಣ ತಃಖ್ತೆ	40
03	ಕಾರ್ಯಕಾರಿ ಮಂಡಳಿಯವರ ದೃಢೀಕರಣ ಪತ್ರ	41-42
04	ಲೆಕ್ಕಪರಿಶೋಧನಾ ದೃಢೀಕರಣ ಪತ್ರ	43
05	ಅಕೌಂಟಿಂಗ್ ಪಾಲಿಸಿಗಳು ಮತ್ತು ಟಿಪ್ಪಣಿಗಳು	44-45
06	**ಆರ್ಥಿಕ ತಃಖ್ತೆಗಳು**	
	ಆಸ್ತಿ-ಜವಾಬ್ದಾರಿ ಪಟ್ಟಿ	46-47
	ಉತ್ಪಾದನಾ ಮತ್ತು ವ್ಯಾಪಾರ ತಃಖ್ತೆ	48
	ಲಾಭ-ನಷ್ಟ ತಃಖ್ತೆ	49
	ಲಾಭ ಹಂಚಿಕೆ ವಿಲೇವಾರಿ ತಃಖ್ತೆ	50
	ಆಸ್ತಿ-ಜವಾಬ್ದಾರಿ ಪಟ್ಟಿಯ ಅನುಸೂಚಿಗಳು	51-66
	ಉತ್ಪಾದನಾ ವ್ಯಾಪಾರ ಮತ್ತು ಲಾಭ-ನಷ್ಟ ತಃಖ್ತೆಯ ಅನುಸೂಚಿಗಳು	
	ಜಮಾ ಮತ್ತು ಖರ್ಚು ತಃಖ್ತೆ	67-83
	ಸವಕಳಿ ತಃಖ್ತೆ	84-92
07	ಮಹಾಮಂಡಳಿಯ ಸಮಸ್ತ ಮಾಹಿತಿ ತಃಖ್ತೆ (A-Z Schedules)	93-148
08	ಬ್ಯಾಂಕ್ ಲೆಕ್ಕ ಸಮನ್ವಯ ಪಟ್ಟಿಗಳು	149-226
09	ಕಾನೂನು ಅಭಿಪ್ರಾಯ ವರದಿ	227-232
10	ಹಿಂದಿನ ವರ್ಷದ (2018-19) ಆರ್ಥಿಕ ತಃಖ್ತೆಗಳು	233-237

ಕರ್ನಾಟಕ ಸಹಕಾರಿ ಹಾಲು ಉತ್ಪಾದಕರ ಮಹಾಮಂಡಳಿ ನಿಯಮಿತ, ಬೆಂಗಳೂರು

ಇದರ 2019–20 ನೇ ಸಾಲಿನ ಲೆಕ್ಕ ಪರಿಶೋಧನಾ ವರದಿ

1.0 ಪ್ರಸ್ತಾವನೆ:

ಕರ್ನಾಟಕ ಸಹಕಾರಿ ಹಾಲು ಉತ್ಪಾದಕರ ಮಹಾಮಂಡಳಿ ನಿಯಮಿತ, ಬೆಂಗಳೂರು ಇದರ 2019–20 ನೇ ಸಾಲಿನ ಲೆಕ್ಕ ಪರಿಶೋಧನಾ ವರದಿಯನ್ನು ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಸಹಕಾರಿ ಹಾಲು ಉತ್ಪಾದಕರ ಮಹಾಮಂಡಳಿ ನಿಯಮಿತ, ಬೆಂಗಳೂರು ಇವರ ನೇಮಕಾತಿ ಆದೇಶ ಸಂಖ್ಯೆ: ಕಹಾಮ/ವಿತ್ತ/ಲೆಪ/478ಎ/2019–20 ದಿನಾಂಕ: 19.10.2019 ರಂತೆ, ದಿನಾಂಕ: 01.04.2019 ರಿಂದ ದಿನಾಂಕ: 31.03.2020 ರವರೆಗೆ ಲೆಕ್ಕ ಪರಿಶೋಧನೆಯನ್ನು ಕೈಗೊಂಡು ವರದಿ ಸಲ್ಲಿಸಲಾಗಿದೆ.

1	ಸಂಸ್ಥೆಯ ಹೆಸರು	ಕರ್ನಾಟಕ ಸಹಕಾರಿ ಹಾಲು ಉತ್ಪಾದಕರ ಮಹಾಮಂಡಳಿ ನಿಯಮಿತ, ಡಾ:ಎಂ.ಹೆಚ್.ಮರೀಗೌಡ ರಸ್ತೆ, ಕಹಾಮ ಸಂಕೀರ್ಣ, ಬೆಂಗಳೂರು–560029
2	ಸಂಸ್ಥೆಯ ನೋಂದಣಿ ಸಂಖ್ಯೆ ಮತ್ತು ದಿನಾಂಕ	ಸಹಕಾರ ಸಂಘಗಳ ಅಪರ ನಿಬಂಧಕರು (ಬಳಕೆ ಮತ್ತು ಮಾರಾಟ) ಇವರ ಪತ್ರ ಸಂಖ್ಯೆ: DAY/JOG/100:81: 92:82-83 ರಂದು ದಿನಾಂಕ: 10.01.1983 ರಂದು ನೊಂದಾಯಿಸಲ್ಪಟ್ಟಿದ್ದು, ದಿನಾಂಕ: 01.05.1984 ರಿಂದ ಕಾರ್ಯಾರಂಭ ಮಾಡಿರುತ್ತದೆ.
3	ಹಿಂದಿನ ಸಾಲಿನ ಲೆಕ್ಕಪರಿಶೋಧನೆ ನಡೆಸಿದವರ ಹೆಸರು ಮತ್ತು ಹುದ್ದೆ	ಮೆ: ಎಂ.ವಿ.ರೆಡ್ಡಿ ಅಂಡ್ ಅಸೋಸಿಯೇಟ್ಸ್, ಸನ್ನದು ಲೆಕ್ಕ ಪರಿಶೋಧಕರು, ಬೆಂಗಳೂರು.
4	ಪ್ರಸಕ್ತ ಸಾಲಿನ ಲೆಕ್ಕಪರಿಶೋಧನೆ ನಡೆಸಿದವರ ಹೆಸರು ಮತ್ತು ಹುದ್ದೆ	ಮೆ: ಎಸ್.ಆರ್. ಅಂಡ್ ಎಂ. ಆರ್ ಅಸೋಸಿಯೇಟ್ಸ್ ಸನ್ನದು ಲೆಕ್ಕ ಪರಿಶೋಧಕರು, ಬೆಂಗಳೂರು.
5	ಲೆಕ್ಕಪರಿಶೋಧನಾ ಅವಧಿ	ದಿನಾಂಕ: 01.04.2019 ರಿಂದ 31.03.2020
6	ಲೆಕ್ಕಪರಿಶೋಧನಾ ವೇಳೆಯಲ್ಲಿ ಪರಿಶೀಲಿಸಿದ ಪ್ರಮುಖ ಪುಸ್ತಕಗಳ ವಿವರ	1)ನಗದು ಪುಸ್ತಕ 2)ಬ್ಯಾಂಕ್ ಪುಸ್ತಕ 3)ಲೆಡ್ಜರ್ ಪುಸ್ತಕ 4)ದಾಸ್ತಾನು ಪುಸ್ತಕಗಳು 5)ಸಂಬಂಧಪಟ್ಟ ಇತರೆ ರಿಜಿಸ್ಟರ್‌ಗಳು ಮತ್ತು ಕಡತಗಳು 6)ರುಜು ದಾಖಲಾತಿ ವೋಚರ್‌ಗಳು
7	ಸಂಸ್ಥೆಯ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಹೆಸರು ಹಾಗೂ ಹುದ್ದೆ ಮತ್ತು ಅವಧಿ	ಶ್ರೀ ರಾಕೇಶ್ ಸಿಂಗ್. ಭಾ.ಆ.ಸೇ ವ್ಯವಸ್ಥಾಪಕ ನಿರ್ದೇಶಕರು ದಿನಾಂಕ: 01.04.2019 ರಿಂದ 05.08.2019 ಶ್ರೀ. ಬಿ.ಸಿ.ಸತೀಶ್ ಕೆ.ಸಿ.ಎಸ್ ವ್ಯವಸ್ಥಾಪಕ ನಿರ್ದೇಶಕರು ದಿನಾಂಕ: 06.08.2019 ರಿಂದ 31.03.2020

S.R. & M.R. ASSOCIATES CHARTERED ACCOUNTANTS BANGALORE

8	ಸಂಸ್ಥೆಯ ಅಧ್ಯಕ್ಷರ ಹೆಸರು ಹಾಗೂ ಅವಧಿ	ಶ್ರೀ ಬಾಲಚಂದ್ರ ಲ. ಜಾರಕಿಹೊಳಿ. ದಿನಾಂಕ: 31.08.2019 ರಿಂದ 31.03.2020
9	ಲೆಕ್ಕಪರಿಶೋಧನೆಗೆ ಲೆಕ್ಕಪುಸ್ತಕಗಳನ್ನು ಹಾಜರುಪಡಿಸಿದವರ ಹೆಸರು ಮತ್ತು ಹುದ್ದೆ	ಶ್ರೀ. ರಮೇಶ್ ಬಿ. ಕೊಣ್ಣೂರು ನಿರ್ದೇಶಕರು (ವಿತ್ತ) ಕಹಾಮ ಬೆಂಗಳೂರು ಹಾಗೂ ಅಧೀನ ಸಿಬ್ಬಂದಿಗಳು
10	ಆರ್ಥಿಕ ತ:ಖ್ತೆಗಳನ್ನು ಸಲ್ಲಿಸಿದ ದಿನಾಂಕ	ದಿನಾಂಕ: 26.06.2020
11	ಲೆಕ್ಕಪರಿಶೋಧನಾ ವರ್ಗೀಕರಣ ಹಿಂದಿನ ಸಾಲಿಗೆ ಪ್ರಸಕ್ತ ಸಾಲಿಗೆ	 " ಎ " ವರ್ಗೀಕರಣ " ಎ " ವರ್ಗೀಕರಣ

2.0 ಸಂಸ್ಥೆಯ ಕಾರ್ಯವ್ಯಾಪ್ತಿ :

ಕರ್ನಾಟಕ ಸಹಕಾರಿ ಹಾಲು ಉತ್ಪಾದಕರ ಮಹಾಮಂಡಳಿ ನಿಯಮಿತ ಬೆಂಗಳೂರು ಇದರ ಸ್ಥಾಪನೆಯ ಹಿನ್ನಲೆ ನೋಂದಣಿ, ಕಾರ್ಯವ್ಯಾಪ್ತಿ ಮತ್ತು ಉದ್ದೇಶಗಳು:

ರಾಷ್ಟ್ರೀಯ ಹೈನು ಅಭಿವೃದ್ಧಿ ಮಂಡಳಿ ಹಾಗೂ ವಿಶ್ವ ಬ್ಯಾಂಕಿನಿಂದ ಆರ್ಥಿಕ ನೆರವು ಪಡೆಯುವುದರೊಂದಿಗೆ 'ಕರ್ನಾಟಕ ಡೇರಿ ಅಭಿವೃದ್ಧಿ ನಿಗಮ' ಸ್ಥಾಪನೆಯಾಗಿ ರಾಷ್ಟ್ರೀಯ ಹೈನು ಅಭಿವೃದ್ಧಿ ಮಂಡಳಿಯ ಸಲಹೆಯನ್ನು ಪಡೆದು ಕರ್ನಾಟಕ ರಾಜ್ಯದಲ್ಲಿ "ಕ್ಷೀರಧಾರೆ" ಯೋಜನೆ ಜಾರಿಗೊಳಿಸಿದ್ದು, ಹೈನುಗಾರಿಕಾ ಚಟುವಟಿಕೆಗಳನ್ನು ವಿಸ್ತರಿಸಲು ಗುಜರಾತ್ ರಾಜ್ಯದ "ಆನಂದ್" ಅಮುಲ್ ಡೇರಿ ಮಾದರಿಯಲ್ಲಿಯೇ ಸಹಕಾರಿ ಕ್ಷೇತ್ರದ ರಾಜ್ಯದ ಸಂಸ್ಥೆ ಸ್ಥಾಪಿಸಲು ಕರ್ನಾಟಕ ಸರ್ಕಾರವು ಆದೇಶ ಸಂಖ್ಯೆ.AAH/193/KDDC/78 ದಿನಾಂಕ: 06.11.1982 ರಲ್ಲಿ ಈ ಬಗ್ಗೆ ರೂಪು ರೇಷೆಗಳನ್ನು ಪ್ರಕಟಿಸಿ, ಕೈಗಾರಿಕಾ ನಿಯಮದಡಿ ನೋಂದಣಿಯಾಗಿದ್ದ ಕೆಡಿಡಿಸಿಯನ್ನು ವಿಸರ್ಜಿಸಿ ಕರ್ನಾಟಕ ಹಾಲು ಉತ್ಪಾದಕರ ಮಹಾಮಂಡಳಿಯನ್ನು (ಕಹಾಮ) ರಚಿಸಲು ಅವಕಾಶ ಕಲ್ಪಿಸಲಾಯಿತು. ಕರ್ನಾಟಕ ರಾಜ್ಯ ಸಹಕಾರ ಸಂಘಗಳ ನಿಬಂಧಕರು ಈ ಸಂಸ್ಥೆಯನ್ನು ದಿನಾಂಕ:10.01.1983 ರಂದು ನೋಂದಣಿ ಮಾಡಿದ್ದು, ದಿನಾಂಕ: 30.04.1984 ರಲ್ಲಿ ಕೆ.ಡಿ.ಡಿ.ಸಿ. ಸ್ವಾಧೀನದಲ್ಲಿದ್ದ ಎಲ್ಲಾ ಆಸ್ತಿಗಳು ಕರ್ನಾಟಕ ಹಾಲು ಉತ್ಪಾದಕರ ಮಹಾಮಂಡಳಿ ಸ್ವಾಧೀನಕ್ಕೆ ವರ್ಗಾವಣೆಯಾಗಿದ್ದು, ದಿನಾಂಕ: 01.05.1984 ರಿಂದ ಈ ಸಂಸ್ಥೆ ಕಾರ್ಯನಿರ್ವಹಿಸಲು ಪ್ರಾರಂಭ ಮಾಡಿರುತ್ತದೆ.

ಡೆಂಪೋ ಡೇರಿ ಉದ್ದಿಮೆಯ ಆಡಳಿತವನ್ನು ದಿನಾಂಕ: 15.07.1993 ರಿಂದ BIFR ವಹಿಸಿಕೊಂಡಿದ್ದು ನಂತರ ಸರ್ಕಾರ ಆದೇಶ ಸಂಖ್ಯೆ: AHF/61/KDC/91 ಬೆಂಗಳೂರು ದಿನಾಂಕ: 30.03.1995 ರಲ್ಲಿ ರೂ. 985 ಲಕ್ಷಗಳಿಗೆ ಮಹಾಮಂಡಳವು ಡೆಂಪೋ ಡೇರಿ ಉದ್ದಿಮೆಯನ್ನು ಖರೀದಿಸಿರುತ್ತದೆ.

ಈ ಸಂಸ್ಥೆಯ ಕಾರ್ಯ ವ್ಯಾಪ್ತಿ ಕರ್ನಾಟಕ ರಾಜ್ಯಕ್ಕೆ ಸೀಮಿತವಾಗಿದ್ದು, ಉಪನಿಯಮ 3.3.25 ರಂತೆ ಹೊರ ರಾಜ್ಯ ಮತ್ತು ಹೊರ ದೇಶಗಳಲ್ಲಿ ವ್ಯಾಪಾರ ಕೈಗೊಳ್ಳಬಹುದಾಗಿರುತ್ತದೆ.

S.R. & M.R. ASSOCIATES CHARTERED ACCOUNTANTS BANGALORE

2.0 (ಎ) ಮಹಾಮಂಡಳಿಯ ಘಟಕ/ಮಳಿಗೆ/ತರಬೇತಿ ಕೇಂದ್ರಗಳ ಹೆಸರು ಉದ್ದೇಶ ಮತ್ತು ಪ್ರಾರಂಭಗೊಂಡ ದಿನಾಂಕ.

ದಿನಾಂಕ: 31.03.2020 ಕ್ಕೆ ಕಹಾಮದಲ್ಲಿ ಒಟ್ಟು 16 ಘಟಕಗಳು 4 ತರಬೇತಿ ಕೇಂದ್ರಗಳು ಮತ್ತು 16 ಮಾರಾಟ ಮಳಿಗೆಗಳು ಇದ್ದು ವಿವರ ಈ ಕೆಳಕಂಡಂತಿದೆ.

ಕ್ರಮ ಸಂಖ್ಯೆ	ಘಟಕ/ಮಾರಾಟ ಮಳಿಗೆಗಳ ಹೆಸರು ಮತ್ತು ಸ್ಥಳ	ಉದ್ದೇಶ	ಪ್ರಾರಂಭಗೊಂಡ ದಿನಾಂಕ
1	ಪಶು ಆಹಾರ ಘಟಕ ರಾಜಾನುಕುಂಟೆ, ಬೆಂಗಳೂರು	ಪಶು ಆಹಾರ ಉತ್ಪಾದನೆ/ಮಾರಾಟ	01.09.1983
2	ಪಶು ಆಹಾರ ಘಟಕ ಗುಬ್ಬಿ ತುಮಕೂರು ಜಿಲ್ಲೆ	ಪಶು ಆಹಾರ ಉತ್ಪಾದನೆ/ಮಾರಾಟ ಮತ್ತು ಖನಿಜ ಮಿಶ್ರಣ ಉತ್ಪಾದನೆ ಮತ್ತು ಮಾರಾಟ	10.01.1983
3	ಪಶು ಆಹಾರ ಘಟಕ ರಾಯಾಪುರ, ಧಾರವಾಡ ಜಿಲ್ಲೆ	ಪಶು ಆಹಾರ ಉತ್ಪಾದನೆ/ಮಾರಾಟ	09.12.1990
4	ಪಶು ಆಹಾರ ಘಟಕ, ಹಾಸನ ಹಾಸನ ಜಿಲ್ಲೆ	ಪಶು ಆಹಾರ ಉತ್ಪಾದನೆ/ಮಾರಾಟ	03.09.1998
5	ಪಶು ಆಹಾರ ಘಟಕ, ಶಿಕಾರಿಪುರ, ಶಿವಮೊಗ್ಗ ಜಿಲ್ಲೆ	ಪಶು ಆಹಾರ ಉತ್ಪಾದನೆ/ಮಾರಾಟ	21.12.2013
6	ಮದರ್ ಡೇರಿ, ಯಲಹಂಕ ಬೆಂಗಳೂರು	ಹಾಲು ಮತ್ತು ಹಾಲು ಉತ್ಪನ್ನಗಳ ಸಂಸ್ಕರಣೆ ಹಾಗೂ ಮಾರಾಟ	07.12.1984
7	ನಂದಿನಿ ವೀರ್ಯಾಣು ಕೇಂದ್ರ ಹೆಸರಘಟ್ಟ	ಪಶು ವೀರ್ಯಾಣು ಉತ್ಪಾದನೆ ಮತ್ತು ಮಾರಾಟ	ಜನವರಿ 1984
8	ನಂದಿನಿ ಹಾಲು ಉತ್ಪನ್ನ ಘಟಕ ಬೆಂಗಳೂರು	ಹಾಲಿನ ವಿವಿಧ ಉತ್ಪನ್ನಗಳ ತಯಾರಿಕೆ ಮತ್ತು ಮಾರಾಟ	01.09.1988
9	ಪೌಚ್ ಫಿಲಂ ಘಟಕ, ಮುನ್ನೇಕೊಳಾಲ, ಬೆಂಗಳೂರು	ಪೌಚ್ ಫಿಲಂ ಉತ್ಪಾದನೆ ಮತ್ತು ಮಾರಾಟ	02.02.1988
10	ನಂದಿನಿ ಹೈಟೆಕ್ ಪ್ರಾಡಕ್ಟ್ ಪ್ಲಾಂಟ್ ಚನ್ನರಾಯಪಟ್ಟಣ	ಹಾಲಿನ ಪುಡಿ ಪರಿವರ್ತನೆ ಮತ್ತು ಬೆಣ್ಣೆ ಉತ್ಪನ್ನ ತಯಾರಿಕಾ ಘಟಕ	01.09.2008
11	ನಂದಿನಿ ಹೈಟೆಕ್ ಮೆಗಾ ಹಾಲಿನ ಪುಡಿ ಘಟಕ, ಕನ್ನಮಂಗಲ, ರಾಮನಗರ	ಹಾಲಿನ ಪುಡಿ ಪರಿವರ್ತನೆ ಮತ್ತು ಬೆಣ್ಣೆ ಉತ್ಪನ್ನ ತಯಾರಿಕಾ ಘಟಕ	26.02.2020
12	ಐಸ್ ಕ್ರೀಂ ಪ್ಲಾಂಟ್, ಬಳ್ಳಾರಿ	ಐಸ್ ಕ್ರೀಂ ಉತ್ಪಾದನಾ ಘಟಕ	26.09.2013
13	ಕೇಂದ್ರೀಯ ತರಬೇತಿ ಸಂಸ್ಥೆ, ಬೆಂಗಳೂರು	ಹಾಲು ಉತ್ಪಾದಕರ ಸಹಕಾರ ಸಂಘಗಳ ಸದಸ್ಯರುಗಳಿಗೆ ವಿವಿಧ ತರಬೇತಿ ನೀಡುವುದು	01.01.1985

S.R. & M.R. ASSOCIATES CHARTERED ACCOUNTANTS BANGALORE

14	ತರಬೇತಿ ಸಂಸ್ಥೆ, ಮೈಸೂರು	ಹಾಲು ಉತ್ಪಾದಕರ ಸಹಕಾರ ಸಂಘಗಳ ಸದಸ್ಯರುಗಳಿಗೆ ವಿವಿಧ ತರಬೇತಿ ನೀಡುವುದು	25.01.1985
15	ತರಬೇತಿ ಸಂಸ್ಥೆ, ಧಾರವಾಡ	ಹಾಲು ಉತ್ಪಾದಕರ ಸಹಕಾರ ಸಂಘಗಳ ಸದಸ್ಯರುಗಳಿಗೆ ವಿವಿಧ ತರಬೇತಿ ನೀಡುವುದು.	01.02.1985
16	ತರಬೇತಿ ಸಂಸ್ಥೆ, ಕಲಬುರ್ಗಿ.	ಹಾಲು ಉತ್ಪಾದಕರ ಸಹಕಾರ ಸಂಘಗಳ ಸದಸ್ಯರುಗಳಿಗೆ ವಿವಿಧ ತರಬೇತಿ ನೀಡುವುದು.	01.02.2020
17	ಬೆಂಗಳೂರು ಮಾರಾಟ ಮಳಿಗೆ	ಹಾಲಿನ ವಿವಿಧ ಉತ್ಪನ್ನಗಳ ಮಾರಾಟ	1989–90
18	ಮೈಸೂರು ಮಾರಾಟ ಮಳಿಗೆ	ಹಾಲಿನ ವಿವಿಧ ಉತ್ಪನ್ನಗಳ ಮಾರಾಟ	01.06.2010
19	ಮಂಗಳೂರು ಮಾರಾಟ ಮಳಿಗೆ	ಹಾಲಿನ ವಿವಿಧ ಉತ್ಪನ್ನಗಳ ಮಾರಾಟ	01.09.2001
20	ಹುಬ್ಬಳ್ಳಿ ಮಾರಾಟ ಮಳಿಗೆ	ಹಾಲಿನ ವಿವಿಧ ಉತ್ಪನ್ನಗಳ ಮಾರಾಟ	01.09.1995
21	ಗುಲ್ಬರ್ಗಾ ಮಾರಾಟ ಮಳಿಗೆ	ಹಾಲಿನ ವಿವಿಧ ಉತ್ಪನ್ನಗಳ ಮಾರಾಟ	16.04.2009
22	ಬಳ್ಳಾರಿ ಮಾರಾಟ ಮಳಿಗೆ	ಹಾಲಿನ ವಿವಿಧ ಉತ್ಪನ್ನಗಳ ಮಾರಾಟ	10.04.2012
23	ಶಿವಮೊಗ್ಗ ಮಾರಾಟ ಮಳಿಗೆ	ಹಾಲಿನ ವಿವಿಧ ಉತ್ಪನ್ನಗಳ ಮಾರಾಟ	02.06.2014
24	ಹಾಸನ ಮಾರಾಟ ಮಳಿಗೆ	ಹಾಲಿನ ವಿವಿಧ ಉತ್ಪನ್ನಗಳ ಮಾರಾಟ	06.04.2015
25	ತುಮಕೂರು ಮಾರಾಟ ಮಳಿಗೆ	ಹಾಲಿನ ವಿವಿಧ ಉತ್ಪನ್ನಗಳ ಮಾರಾಟ	04.06.2015
26	ದಾವಣಗೆರೆ ಮಾರಾಟ ಮಳಿಗೆ	ಹಾಲಿನ ವಿವಿಧ ಉತ್ಪನ್ನಗಳ ಮಾರಾಟ	06.08.2018
27	ಹೈದರಾಬಾದ್ ಮಾರಾಟ ಮಳಿಗೆ	ಹಾಲಿನ ವಿವಿಧ ಉತ್ಪನ್ನಗಳ ಮಾರಾಟ	02.03.2013
28	ವಿಜಯವಾಡ ಮಾರಾಟ ಮಳಿಗೆ	ಹಾಲಿನ ವಿವಿಧ ಉತ್ಪನ್ನಗಳ ಮಾರಾಟ	16.08.2013
29	ತಿರುಪತಿ ಮಾರಾಟ ಮಳಿಗೆ	ಹಾಲಿನ ವಿವಿಧ ಉತ್ಪನ್ನಗಳ ಮಾರಾಟ	20.12.2000
30	ಕಣ್ಣೂರು ಮಾರಾಟ ಮಳಿಗೆ	ಹಾಲಿನ ವಿವಿಧ ಉತ್ಪನ್ನಗಳ ಮಾರಾಟ	2006
31	ಚೆನ್ನೈ ಮಾರಾಟ ಮಳಿಗೆ	ಹಾಲಿನ ವಿವಿಧ ಉತ್ಪನ್ನಗಳ ಮಾರಾಟ	18.04.2014
32	ತಿರುಚಿ ಮಾರಾಟ ಮಳಿಗೆ	ಹಾಲಿನ ವಿವಿಧ ಉತ್ಪನ್ನಗಳ ಮಾರಾಟ	08.05.2014
33	ಕೊಟ್ಟಾಯಂ (ಕಣ್ಣೂರು ಮಾರಾಟ ಮಳಿಗೆಯ ಶಾಖೆ)	ಹಾಲಿನ ವಿವಿಧ ಉತ್ಪನ್ನಗಳ ಮಾರಾಟ	01.11.2017

3.0 ಸಂಸ್ಥೆಯ ಪ್ರಮುಖ ಉದ್ದೇಶಗಳು :–

ಕರ್ನಾಟಕ ಹಾಲು ಮಹಾಮಮಂಡಳದ ಅನುಮೋದಿತ ಉಪನಿಯಮ 3 ರನ್ವಯ ಮಹಾಮಂಡಳವು ರಾಜ್ಯದ ಡೇರಿ ಉದ್ಯಮದಲ್ಲಿ ಹಾಲು ಮತ್ತು ಹಾಲು ಉತ್ಪನ್ನಗಳ ಉತ್ಪಾದನೆ, ಶೇಖರಣೆ ಹಾಗೂ ಮಾರಾಟಕ್ಕೆ ಸಂಬಂಧಿಸಿದ ಚಟುವಟಿಕೆ ಮತ್ತು ರಾಜ್ಯದ ರೈತರ ಸರ್ವತೋಮುಖ ಅಭಿವೃದ್ಧಿಗಾಗಿ ಕೃಷಿ ಹಾಗೂ ತೋಟಗಾರಿಕೆ ಉತ್ಪಾದನೆ ಹೆಚ್ಚಳ ಮಾಡುವ ಮೂಲ ಉದ್ದೇಶ ಹೊಂದಿರುತ್ತದೆ. ಈ ಸಂಬಂಧ ಉಪ ನಿಯಮದಲ್ಲಿ ಪಟ್ಟಿ ಮಾಡಿರುವಂತೆ 26 ವಿವಿಧ ಉದ್ದೇಶಗಳಿದ್ದು ಮಹಾಮಂಡಳವು ಎಲ್ಲಾ ಉದ್ದೇಶಗಳನ್ನು ಕಾರ್ಯಗತಗೊಳಿಸಿದೆ.

S.R. & M.R. ASSOCIATES CHARTERED ACCOUNTANTS BANGALORE

4.0 ಹಿಂದಿನ ಸಾಲಿನಲ್ಲಿನ ನ್ಯೂನ್ಯತೆಗಳು ಪ್ರಸಕ್ತ ಸಾಲಿಗೂ ಮುಂದುವರಿದಿರುವ ಬಗ್ಗೆ ವಿವರಗಳು:-

ಕ್ರ. ಸಂ	ಕಂಡಿಕೆ ಸಂಖ್ಯೆ	ವರದಿ ಪುಟ ಸಂಖ್ಯೆ	ನ್ಯೂನ್ಯತೆಗಳ ಸಂಕ್ಷಿಪ್ತ
02	14.0	13	ವಿವಿಧ ನಿಧಿಗಳ ವಿನಿಯೋಗದ ಬಗ್ಗೆ ಉಪನಿಯಮಗಳು ರಚಿಸಿರುವುದಿಲ್ಲ.

5.0 ಸಂಸ್ಥೆಯಲ್ಲಿ ಅನುಮೋದಿತ ಮೂಲ ಉಪನಿಯಮದ ಪ್ರತಿ ಹಾಗೂ ಸಹಕಾರ ಸಂಘಗಳ ಕಾಯಿದೆ ಪುಸ್ತಕ ಹಾಜರಿರುವ ಬಗ್ಗೆ :

ಲಭ್ಯವಿರುತ್ತದೆ

6.0 ಸಹಕಾರ ಸಂಘಗಳ ಕಾಯ್ದೆ, ಬೈಲಾ, ಅಧೀನ ನಿಯಮ ಹಾಗೂ ಇತರೆ ಕಾನೂನು ಸುತ್ತೋಲೆಗಳ ಪಾಲನೆಯಾಗದಿರುವ ಬಗ್ಗೆ :

ಮಹಾಮಂಡಳಿಯಲ್ಲಿ ಸಹಕಾರ ಸಂಘಗಳ ಕಾಯ್ದೆ, ಬೈಲಾ, ಅಧೀನ ನಿಯಮ ಹಾಗೂ ಇತರೆ ಕಾನೂನು ಸುತ್ತೋಲೆಗಳ ಪಾಲನೆಯಲ್ಲಿ ಗಂಭೀರವಾದ ಉಲ್ಲಂಘನೆ ಗಮನಕ್ಕೆ ಬಂದಿರುವುದಿಲ್ಲ.

7.0 ಆಡಳಿತ ಮಂಡಳಿಯ ಸದಸ್ಯರ ವಿವರ :

2019-20 ನೇ ಸಾಲಿನ ಆಡಳಿತ ಮಂಡಳಿ ಸದಸ್ಯರ ವಿವರ :-

1) ಶ್ರೀ ಬಾಲಚಂದ್ರ ಲ. ಜಾರಕಿಹೊಳಿ, ಅಧ್ಯಕ್ಷರು, ಕರ್ನಾಟಕ ಹಾಲು ಮಹಾಮಂಡಳಿ
2) ಶ್ರೀ. ಹೆಚ್.ಡಿ.ರೇವಣ್ಣ, ಹಾಸನ ಹಾಲು ಒಕ್ಕೂಟದ ಅಧ್ಯಕ್ಷರು ಮತ್ತು ಕಹಾಮ ನಿರ್ದೇಶಕರು
3) ಶ್ರೀ. ಎಲ್.ಬಿ.ಪಿ. ಭೀಮಾ ನಾಯ್ಕ, ರಾಯಚೂರು- ಬಳ್ಳಾರಿ ಹಾಲು ಒಕ್ಕೂಟದ ನಿರ್ದೇಶಕರು
4) ಶ್ರೀ. ಹನುಮಂತಗೌಡ ಜಿ ಹಿರೇಗೌಡ್ರು, ಧಾರವಾಡ ಹಾಲು ಒಕ್ಕೂಟದ ನಿರ್ದೇಶಕರು
5) ಶ್ರೀ. ಕಾಪು ದಿವಾಕರ ಶೆಟ್ಟಿ, ದಕ್ಷಿಣ ಕನ್ನಡ ಹಾಲು ಒಕ್ಕೂಟದ ನಿರ್ದೇಶಕರು
6) ಶ್ರೀ. ಮಾರುತಿ ಖಾಶಂಪೂರ, ಕಲಬುರ್ಗಿ-ಬೀದರ್ ಹಾಲು ಒಕ್ಕೂಟದ ನಿರ್ದೇಶಕರು
7) ಶ್ರೀ. ಎಮ್.ನಂಜುಂಡ ಸ್ವಾಮಿ, ಚಾಮರಾಜನಗರ ಹಾಲು ಒಕ್ಕೂಟದ ನಿರ್ದೇಶಕರು
8) ಶ್ರೀ. ಶ್ರೀನಿವಾಸ್ ಆರ್, ಕೋಲಾರ-ಚಿಕ್ಕಬಳ್ಳಾಪುರ ಹಾಲು ಒಕ್ಕೂಟದ ನಿರ್ದೇಶಕರು
9) ಶ್ರೀ. ಸಿ. ವೀರಭದ್ರ ಬಾಬು, ಶಿವಮೊಗ್ಗ ಹಾಲು ಒಕ್ಕೂಟದ ನಿರ್ದೇಶಕರು
10) ಶ್ರೀ. ಆನಂದ ಕುಮಾರ್, ಬೆಂಗಳೂರು ಹಾಲು ಒಕ್ಕೂಟದ ನಿರ್ದೇಶಕರು
11) ಶ್ರೀ. ಕೆ.ಎಸ್.ಕುಮಾರ್, ಮೈಸೂರು ಹಾಲು ಒಕ್ಕೂಟದ ನಿರ್ದೇಶಕರು
12) ಶ್ರೀ. ಅಮರನಾಥ ರ ಜಾರಕಿಹೊಳಿ, ಬೆಳಗಾವಿ ಹಾಲು ಒಕ್ಕೂಟದ ನಿರ್ದೇಶಕರು
13) ಶ್ರೀ. ಶ್ರೀಶೈಲ ಭೀ ಪಾಟೀಲ, ವಿಜಯಪುರ ಹಾಲು ಒಕ್ಕೂಟದ ನಿರ್ದೇಶಕರು
14) ಸಹಕಾರ ಸಂಘಗಳ ನಿಬಂಧಕರು, ಕರ್ನಾಟಕ ರಾಜ್ಯ.
15) ಸರ್ಕಾರದ ಕಾರ್ಯದರ್ಶಿಗಳು, ಪಶು ಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ
16) ಪ್ರಾಂತೀಯ ಮುಖ್ಯಸ್ಥರು, ರಾಷ್ಟ್ರೀಯ ಹೈನು ಅಭಿವೃದ್ಧಿ ಮಂಡಳಿ, ಬೆಂಗಳೂರು
17) ಶ್ರೀ. ಬಿ.ಸಿ.ಸತೀಶ್ ಕೆ.ಸಿ.ಎಸ್, ವ್ಯವಸ್ಥಾಪಕ ನಿರ್ದೇಶಕರು

S.R. & M.R. ASSOCIATES CHARTERED ACCOUNTANTS BANGALORE

8.0 ಸಭೆಗಳ ವಿವರ :

ಎ	ಕಾರ್ಯಕಾರಿ ಮಂಡಳಿ ಸಭೆಗಳ ಸಂಖ್ಯೆ	2019–20ನೇ ಸಾಲಿನಲ್ಲಿ 06 ಸಭೆಗಳು ನಡೆದಿರುತ್ತವೆ.
ಬಿ	ಸರ್ವ ಸದಸ್ಯರ ಸಭೆ	ದಿನಾಂಕ: 23.09.2019

2019–20 ನೇ ಸಾಲಿನಲ್ಲಿ ನಡೆದಿರುವ ಕಾರ್ಯಕಾರಿ ಮಂಡಳಿ ಸಭೆಗಳ ನಡವಳಿಗಳನ್ನು ಪರಿಶೀಲನೆಗೆ ಹಾಜರುಪಡಿಸಿದ್ದು, ಪರಿಶೀಲಿಸಲಾಗಿದೆ.

9.0 ಸದಸ್ಯತ್ವ – (ಮೂರು ವರ್ಷಗಳ ತುಲನಾತ್ಮಕ ವಿವರಣೆ)

ಕ್ರ.ಸಂ	ವಿವರ	ವರ್ಷ 2017–18	ವರ್ಷ 2018–19	ವರ್ಷ 2019–20
1	ಪ್ರಾರಂಭದಲ್ಲಿದ್ದ ಸದಸ್ಯರು	14	14	14
2	ಪ್ರಸಕ್ತ ಸಾಲಿಗೆ ಸೇರಿದವರು	–	–	–
3	ಪ್ರಸಕ್ತ ಸಾಲಿಗೆ ಬಿಟ್ಟವರು	–	–	–
4	ಸಾಲಾ ಖೈರಿಗೆ ಉಳಿದ ಸದಸ್ಯರು	14	14	14

ಉಪನಿಯಮ 5.1 ರನ್ವಯ ಮಹಾಮಂಡಳದ ಸದಸ್ಯತ್ವವು ಈ ಕೆಳಕಂಡ ವರ್ಗಕ್ಕೆ ಸೀಮಿತವಾಗಿರುತ್ತದೆ.

1) ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಒಕ್ಕೂಟಗಳು
2) ನಾಮ ಮಾತ್ರ ಸದಸ್ಯರು (ಬಿಡಿ ಕಂಟ್ರಾಕ್ಟರುಗಳು, ಮಾರಾಟ ಏಜಂಟರುಗಳು ಹಾಗೂ ಕಂಪನಿಗಳು ಇತ್ಯಾದಿ)

ಉಪನಿಯಮ 5.2.1 ರಂತೆ ಪ್ರತಿ ಷೇರಿನ ಮೌಲ್ಯ ರೂ. 1,000.00 ಆಗಿರುತ್ತದೆ.

ದಿನಾಂಕ: 31.03.2020 ರ ಅಂತ್ಯಕ್ಕೆ 14 ಜಿಲ್ಲಾ ಹಾಲು ಉತ್ಪಾದಕರ ಸಹಕಾರ ಸಂಘಗಳ ಒಟ್ಟು ಷೇರು ಬಂಡವಾಳ ರೂ.62,21,70,000/– ಗಳಿದ್ದು ವಿವರ ಈ ಕೆಳಗಿನಂತಿದೆ.

ಮೊತ್ತ ರೂ.ಗಳಲ್ಲಿ

01	ಬೆಂಗಳೂರು ಜಿಲ್ಲಾ ಹಾಲು ಒಕ್ಕೂಟ	14,88,15,000-00
02	ಬೆಳಗಾವಿ ಜಿಲ್ಲಾ ಹಾಲು ಒಕ್ಕೂಟ	1,30,41,000-00
03	ರಾಯಚೂರು–ಬಳ್ಳಾರಿ ಜಿಲ್ಲಾ ಹಾಲು ಒಕ್ಕೂಟ	1,25,51,000-00
04	ವಿಜಾಪುರ ಜಿಲ್ಲಾ ಹಾಲು ಒಕ್ಕೂಟ	2,04,95,000-00
05	ದಕ್ಷಿಣ ಕನ್ನಡ ಜಿಲ್ಲಾ ಹಾಲು ಒಕ್ಕೂಟ	5,60,11,000-00
06	ಧಾರವಾಡ ಜಿಲ್ಲಾ ಹಾಲು ಒಕ್ಕೂಟ	4,07,48,000-00
07	ಕಲಬುರ್ಗಿ ಜಿಲ್ಲಾ ಹಾಲು ಒಕ್ಕೂಟ	39,81,000-00
08	ಹಾಸನ ಜಿಲ್ಲಾ ಹಾಲು ಒಕ್ಕೂಟ	5,03,35000-00
09	ಕೋಲಾರ ಜಿಲ್ಲಾ ಹಾಲು ಒಕ್ಕೂಟ	9,08,28,000-00
10	ಮಂಡ್ಯ ಜಿಲ್ಲಾ ಹಾಲು ಒಕ್ಕೂಟ	5,77,16,000-00
11	ಮೈಸೂರು ಜಿಲ್ಲಾ ಹಾಲು ಒಕ್ಕೂಟ	3,35,54,000-00

S.R. & M.R. ASSOCIATES CHARTERED ACCOUNTANTS BANGALORE

12	ಶಿವಮೊಗ್ಗ ಜಿಲ್ಲಾ ಹಾಲು ಒಕ್ಕೂಟ	3,43,74,000-00
13	ತುಮಕೂರು ಜಿಲ್ಲಾ ಹಾಲು ಒಕ್ಕೂಟ	4,25,03,000-00
14	ಚಾಮರಾಜ ನಗರ ಜಿಲ್ಲಾ ಹಾಲು ಒಕ್ಕೂಟ	1,72,18,000-00
	ಒಟ್ಟು	**62,21,70,000-00**

10.0 ಸದಸ್ಯತ್ವದ ಬಗ್ಗೆ ವಿಮರ್ಶೆ :

ಪ್ರಸಕ್ತ ಸಾಲಿನಲ್ಲಿ ಷೇರು ಬಂಡವಾಳ ರೂ.12,26,44,000/- ರಷ್ಟು ಹೆಚ್ಚಳವಾಗಿರುತ್ತದೆ. ಈ ಹೆಚ್ಚಳವು 2018-19 ನೇ ಸಾಲಿಗೆ ಸದಸ್ಯರುಗಳಿಗೆ ನೀಡಿದ ಬೋನಸ್ ಮೊಬಲಗಿನಿಂದ ಶೇಕಡ 25 ರಷ್ಟು ವರ್ಗಾವಣೆ ಮೂಲಕ ರೂ.1,37,10,000/- ಗಳ ಮೊಬಲಗು 2019-20 ನೇ ಸಾಲಿನಲ್ಲಿ ಹಾಲು ಶೇಖರಣೆ ಮೇಲೆ ಸ್ವೀಕರಿಸಿದ ಷೇರು ಹಣ ರೂ.10,89,34,000/- ಷೇರು ಬಂಡವಾಳಕ್ಕೆ ವರ್ಗಾಯಿಸಲಾಗಿದೆ.

11.0 ಪಾವತಿಯಾದ ಷೇರು ಬಂಡವಾಳದ ವಿವರ :

ಇತ್ತೀಚಿನ ಕಾಯ್ದೆ ತಿದ್ದುಪಡಿಯಂತೆ ಸಂಸ್ಥೆಯ ವ್ಯವಹಾರಕ್ಕೆ ತಕ್ಕಂತೆ ಷೇರು ಬಂಡವಾಳವನ್ನು ನಿರ್ಧರಿಸುವ ಅಧಿಕಾರ ಸರ್ವಸದಸ್ಯರಿಗೆ ಇರುತ್ತದೆ. ಆದರೆ ಇದುವರೆವಿಗೂ ಅಧಿಕೃತ ಷೇರು ಬಂಡವಾಳದ ಮಿತಿಯನ್ನು ತಿರ್ಮಾನಿಸಿರುವುದಿಲ್ಲ.

12.0 ಷೇರು ಬಂಡವಾಳದ ಬಗ್ಗೆ ವಿಮರ್ಶೆ :

ಈ ಮೇಲಿನ ತ:ಖ್ತೆಯಲ್ಲಿ ತೋರಿಸಿರುವಂತೆ ಒಕ್ಕೂಟಗಳಿಂದ ಪಡೆದಿರುವ ಷೇರು ಬಂಡವಾಳವನ್ನು ಹೊರತುಪಡಿಸಿ, ಇತರರಿಂದ ಷೇರು ಬಂಡವಾಳ ಬಂದಿರುವುದಿಲ್ಲ. ದಿನಾಂಕ:31.03.2020 ರ ಅಂತ್ಯಕ್ಕೆ ಷೇರು ಕುಳುವಾರು ಲಭ್ಯವಿದ್ದು ತಾಳೆ ಇರುತ್ತದೆ. ಷೇರು ವಹಿ ನಿರ್ವಹಿಸಿರುತ್ತಾರೆ. 2019-20 ನೇ ಸಾಲಿನಿಂದ ಜಮೆ ಆದ ಮೊಬಲಗಿಗೆ ಷೇರು ಪ್ರಮಾಣ ಪತ್ರ ನೀಡಲಾಗಿದೆ.

ಷೇರು ಅಮಾನತ್ತು ಖಾತೆಯಲ್ಲಿ ರೂ.7,710.48 ಗಳಿದ್ದು, ಸಂಬಂಧಪಟ್ಟ ಒಕ್ಕೂಟಗಳಿಂದ ಪೂರ್ತಿ ಹಣ ಪಡೆದು ಷೇರು ಮೊಬಲಗು ಖಾತೆಗೆ ವರ್ಗಾಯಿಸಲು ಸೂಚಿಸಿದೆ.

13.0 ಆಪದ್ಧನ ನಿಧಿ :-

ದಿನಾಂಕ: 31.03.2020 ರ ಅಂತ್ಯಕ್ಕೆ ಆಪದ್ಧನ ನಿದಿಯಲ್ಲಿ ಒಟ್ಟು ರೂ.**443,29,90,569-33** ಗಳ ಮೊಬಲಗು ಇದ್ದು, ವಿವರಗಳು ಕೆಳಕಂಡಂತೆ ಇರುತ್ತದೆ.

ವಿವರಗಳು	ಮೊತ್ತ ರೂ.ಗಳಲ್ಲಿ
(1) 2018-19 ನೇ ಸಾಲಿನ ನಿವ್ವಳ ಲಾಭ ವಿಲೇವಾರಿಯಿಂದ	410,42,59,385-16
(2) ಆಪದ್ಧನ ನಿಧಿ (ಇತರೇ ಸಂಗ್ರಹದಿಂದ)	32,82,06,738-93
(3) ನಾಮಮಾತ್ರ ಸದಸ್ಯರಿಂದ ಸ್ವೀಕರಿಸಿದ ಹಣ	5,24,445-24
ಒಟ್ಟು	**443,29,90,569-33**

S.R. & M.R. ASSOCIATES CHARTERED ACCOUNTANTS BANGALORE

ಹಿಂದಿನ ಸಾಲಿನವರೆಗೂ ಆಪದ್ಧನ ನಿಧಿ (ಇತರೇ ಸಂಗ್ರಹದಿಂದ) ರೂ.30,45,34,353-48 ಇದ್ದು, ವರದಿ ಸಾಲಿನ ನಿವ್ವಳ ಲಾಭದ ವಿಲೇವಾರಿಯಲ್ಲಿ ಹಂಚಿಕೆಯಾದ ಆಪದ್ಧನ ನಿಧಿಯ ಮೊಬಲಗು ರೂ.2,20,37,481-00 ಗಳ ಸೇರಿಸಿ, ಸಾಲಾಂತ್ಯಕ್ಕೆ ರೂ.32,82,06,738-93 ನಿಧಿ ಇರುತ್ತದೆ. ಇದಕ್ಕೆ ಸಂಬಂಧಿಸಿದಂತೆ ರೂ.22,22,64,671-96 ನಿಶ್ಚಿತ ಠೇವಣಿ ಮಾಡಿದ್ದು ಸದರಿ ಠೇವಣಿಯನ್ನು ಉಪಯೋಗಿಸಿಕೊಳ್ಳಬೇಕಾದ ಸಂದರ್ಭದಲ್ಲಿ ಸಹಕಾರ ಸಂಘಗಳ ನಿಬಂಧಕರ ಅನುಮತಿ ಪಡೆಯುವುದು ಹಾಗೂ ಉಳಿದ ಮೊತ್ತವನ್ನು ನಿಶ್ಚಿತ ಠೇವಣಿ ಮಾಡಲು ಸೂಚಿಸಿದೆ.

14.0 ಬಂಡವಾಳದ ಮೀಸಲು ನಿಧಿ (ಕ್ಯಾಪಿಟಲ್ ರಿಸರ್ವ್) :

ದಿನಾಂಕ:31.03.2020 ರ ಅಂತ್ಯಕ್ಕೆ ಸಂಸ್ಥೆಯಲ್ಲಿ ಸರಕಾರ, ಎನ್.ಡಿ.ಡಿ.ಬಿ ಮತ್ತು ಆರ್.ಕೆ.ವಿ.ವೈ ರವರಿಂದ ಪಡೆದ ಅನುದಾನದ ಒಟ್ಟು ಮೊಬಲಗು **ರೂ.124,26,93,618-45** ಗಳಿದ್ದು ವಿವರಗಳು ಕೆಳಕಂಡಂತೆ ಇರುತ್ತದೆ.

01	ರಾಜ್ಯ ಸರ್ಕಾರದಿಂದ ಮೂಲಭೂತ ಸೌಕರ್ಯಕ್ಕಾಗಿ ಪಡೆದ ಅನುದಾನ	27,48,58,481-94
02	ಕ್ಯಾಪಿಟಲ್ ಆಸ್ತಿಗಳಿಗಾಗಿ ಪಡೆದ ಅನುದಾನ	69,31,36,432-43
03	ಕ್ಯಾಪಿಟಲ್ ಆಸ್ತಿಗಳಿಗಾಗಿ ಎನ್.ಎಂ.ಪಿ.ಗೆ ರಾಜ್ಯ ಸರ್ಕಾರ ನೀಡಿದ ಅನುದಾನ	2,52,77,337-69
04	ಡೆಂಪೋ ಡೇರಿ ಖರೀದಿಗಾಗಿ (ಅ) ರಾಜ್ಯ ಸರ್ಕಾರದ ಅನುದಾನ (ಆ) ಎನ್.ಡಿ.ಡಿ.ಬಿ ಅನುದಾನ	 1,20,00,000-00 1,75,65,000-00
05	ಎನ್.ಡಿ.ಡಿ.ಬಿ ಅನುದಾನ	2,31,97,930-53
06	ಎನ್.ಡಿ.ಪಿ ಪ್ರಾಜೆಕ್ಟ್‌ಗೆ ಅನುದಾನ (ನಂದಿನಿ ವೀರ್ಯಾಣು ಕೇಂದ್ರ)	5,31,62,120-86
07	ಆರ್ ಕೆ ವಿ ವೈ ನಿಂದ ರಾಮನಗರ ಪೌಡರ್ ಪ್ಲಾಂಟಿಗೆ ನೀಡಿದ ಅನುದಾನ	9,42,44,480-00
08	ಕ್ಯಾಪಿಟಲ್ ಆಸ್ತಿಗಳಿಗಾಗಿ ಪಡೆದ ಅನುದಾನ – ಸ್ಟೆಪ್	1-00
09	ಪೀಳಿಗೆ ಪರೀಕ್ಷಾ ಯೋಜನೆ ಕಾರ್ಪಸ್ ನಿಧಿ	4,92,51,834-00
	ಒಟ್ಟು ರೂ.	**124,26,93,618-45**

ಕ್ರ.ಸಂ 2 ರ ಪ್ರಕಾರ ಕ್ಯಾಪಿಟಲ್ ಆಸ್ತಿಗಳಿಗಾಗಿ ಪಡೆದ ಘಟಕಾವಾರು ಅನುದಾನ ವಿವರಗಳು:

ಘಟಕಗಳು	ಮೊತ್ತ ರೂ.ಗಳಲ್ಲಿ
ಎ) ಕೇಂದ್ರೀಯ ತರಬೇತಿ ಸಂಸ್ಥೆ	6,15,12,851-10
ಬಿ) ನಂದಿನಿ ವೀರ್ಯಾಣು ಕೇಂದ್ರ	3,44,01,249-57
ಸಿ) ಪಶು ಆಹಾರ ಘಟಕ ಧಾರವಾಡ	68,36,231-24
ಡಿ) ಪಶು ಆಹಾರ ಘಟಕ ರಾಜಾನುಕುಂಟೆ	3,44,566-00
ಇ) ಪಶು ಆಹಾರ ಘಟಕ ಹಾಸನ	2,31,76,240-40

S.R. & M.R. ASSOCIATES CHARTERED ACCOUNTANTS BANGALORE

ಎಫ್) ರಾಜ್ಯ ಸರ್ಕಾರದ ಅನುದಾನ (ಶಿಕಾರಿಪುರ ಪಶು ಆಹಾರ ಕಾರ್ಖಾನೆ)	46,99,46,934-00
ಜಿ) ನಂದಿನಿ ವೀರ್ಯಾಣು ಕೇಂದ್ರ	3,20,38,338-96
ಹೆಚ್) ಪಶು ಆಹಾರ ಘಟಕ, ರಾಜಾನುಕುಂಟೆ	3,02,876-00
ಐ) ಪಶು ಆಹಾರ ಘಟಕ, ಗುಬ್ಬಿ	3,67,206-35
ಜೆ) ಕೇಂದ್ರ ಕಛೇರಿ	2,11,09,162-70
ಕೆ) ನಂದಿನಿ ಉತ್ಪನ್ನ ಘಟಕ	4,31,00,776.11
ಒಟ್ಟು	**69,31,36,432-03**

ಕ್ರ.ಸಂ 5 ರ ಪ್ರಕಾರ ಎನ್.ಡಿ.ಡಿ.ಬಿ.ಯಿಂದ ಬಂದ ಅನುದಾನ ಕೆಳಕಂಡ ಘಟಕಗಳಿಗೆ ಸಂಬಂಧಿಸಿದಾಗಿದ್ದು, ದಿನಾಂಕ: 31.03.2020 ರ ಅಂತ್ಯಕ್ಕೆ ಇರುವ ಮೊಬಲಗನ್ನು ಈ ಕೆಳಗಿನಂತೆ ವಿವರಿಸಿದೆ.

ಘಟಕಗಳು	ಮೊತ್ತ ರೂ.ಗಳಲ್ಲಿ
1. ನಂದಿನಿ ವೀರ್ಯಾಣು ಕೇಂದ್ರ	39,52,392-00
2. ಪಶು ಆಹಾರ ಘಟಕ, ರಾಜಾನುಕುಂಟೆ	23,73,541-00
3. ಪಶು ಆಹಾರ ಘಟಕ, ಗುಬ್ಬಿ	1,950-00
4. ಕಹಾಮ ಪೀಳಿಗೆ ಪರೀಕ್ಷಾ ಯೋಜನೆ	1,68,70,047-53
ಒಟ್ಟು	**2,31,97,930-53**

15.0 ಗುರುತಿಸಿಕೊಂಡ ನಿಧಿಗಳು (EAR MARKED FUNDS) :

ದಿನಾಂಕ: 31.03.2020 ಕ್ಕೆ ಗುರುತಿಸಿಕೊಂಡ ನಿಧಿಗಳಡಿಯಲ್ಲಿ **ರೂ.228,56,94,235-51** ಇದ್ದು ವಿವರ ಈ ಕೆಳಕಂಡಂತೆ ಇರುತ್ತದೆ.

		ಮೊತ್ತ ರೂ.ಗಳಲ್ಲಿ
1	ಕೃತಕ ಗರ್ಭಧಾರಣಾ ಮೂಲಭೂತ ಸೌಕರ್ಯ ಕಾರ್ಪಸ್ ಸ್ಕೀಂ	1,79,48,730-55
2	ಕಟ್ಟಡ ನಿಧಿ	42,82,94,649-95
3	ಹೋಕು ಬಾಕು ನಿಧಿ	10,47,32,369-33
4	ಸಹಕಾರ ಪ್ರಚಾರ ನಿಧಿ	24,92,01,320-67
5	ಸಂಶೋಧನೆ ಮತ್ತು ಅಭಿವೃದ್ಧಿ ನಿಧಿ	18,92,96,482-70
6	ವ್ಯಾಪಾರ ಏರಿಳಿತ ನಿಧಿ	50,39,07,205-94
7	ಸಂಶೋಧನೆ ಮತ್ತು ಅಭಿವೃದ್ಧಿ ನಿಧಿ (ಒಕ್ಕೂಟಗಳು)	3,59,39,373-24
8	ಮ್ಯಾಗಜೈನ್ ಫಂಡ್	61,59,637-73
9	ದತ್ತಿ ನಿಧಿ	14,50,63,525-08
10	ಒಕ್ಕೂಟಗಳ ಅಭಿವೃದ್ಧಿ ನಿಧಿ	29,01,27,049-16
11	ಮೂಲಭೂತ ಸೌಕರ್ಯ ನಿಧಿ	31,50,23,891-16
	ಒಟ್ಟು ರೂ.	**228,56,94,235-51**

S.R. & M.R. ASSOCIATES CHARTERED ACCOUNTANTS BANGALORE

ಕ್ರಮ ಸಂಖ್ಯೆ. 1 ಮತ್ತು 8 ರ ನಿಧಿಗಳನ್ನು ಹೊರತುಪಡಿಸಿ ಉಳಿದ ಎಲ್ಲಾ ನಿಧಿಗಳು 2018-19 ನೇ ಸಾಲಿನ ನಿವ್ವಳ ಲಾಭದಿಂದ ವರ್ಗಾವಣೆಯಾದ ಮೊಬಲಗು ಆಗಿರುತ್ತದೆ.

ಕ್ರಮ ಸಂಖ್ಯೆ 01 ಕ್ಕೆ ಸಂಬಂಧಪಟ್ಟಂತೆ ವಿವಿಧ ಒಕ್ಕೂಟಗಳು ಮಾರಾಟ ಮಾಡಿದ ದ್ರವಸಾರಜನಕದ ಪರಿಮಾಣದ ಮೇಲೆ ಪ್ರತಿ ಲೀಟರಿಗೆ ರೂ. 1/- ರಂತೆ ಈ ನಿಧಿಗೆ ಕಹಾಮವು ಜಮಾ ಪಡೆದಿರುವ ಮೊಬಲಾಗಿರುತ್ತದೆ.

ಕ್ರಮ ಸಂಖ್ಯೆ. 8 ಕ್ಕೆ ಸಂಬಂಧಿಸಿದಂತೆ ಕಹಾಮದಿಂದ ಬಿಡುಗಡೆ ಮಾಡಲಾಗುತ್ತಿರುವ ಕ್ಷೀರ ಸಾಗರ ಪತ್ರಿಕೆಗೆ ಪಾವತಿಸಿದ ವಂತಿಗೆಗೆ ಸಂಬಂಧಿಸಿದಾಗಿದ್ದು, ವರದಿ ಸಾಲಿನಲ್ಲಿ ಇದರ ಬಾಬ್ತು **ರೂ.31,500/-** ಜಮೆಯಾಗಿದ್ದು, ಈ ನಿಧಿಗೆ ವರ್ಗಾಯಿಸಲಾಗಿದೆ.

ಮೇಲ್ಕಂಡ ನಿಧಿಗಳ ವಿನಿಯೋಗದ ಬಗ್ಗೆ ಯಾವುದೇ ಉಪ ನಿಯಮಗಳನ್ನು ರಚಿಸಿಕೊಂಡಿರುವುದಿಲ್ಲ. ಈ ಬಗ್ಗೆ ಕ್ರಮ ಕೈಗೊಳ್ಳಲು ಸೂಚಿಸಿದೆ.

16.0 ಠೇವಣಿಗಳು (DEPOSITS) :

ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ: ಎಹೆಚ್ ಎಫ್/22/ಕೆಡಿಡಿಸಿ/95 ದಿನಾಂಕ: 01.02.2000 ರಲ್ಲಿ ದಿನಾಂಕ: 30.04.1984 ಕ್ಕೆ ಕೆ.ಡಿ.ಡಿ.ಸಿ ಹೊಂದಿದ್ದ ಆಸ್ತಿಗಳ ಪುಸ್ತಕದ ಮೌಲ್ಯವನ್ನು ರೂ.3,36,98,445.85 ಗಳಿಗೆ ನಿರ್ಧರಿಸಿ (ಆ ದಿನಾಂಕಕ್ಕೆ ಕೆ.ಡಿ.ಡಿ.ಸಿ ಜವಾಬ್ದಾರಿಯಲ್ಲಿದ್ದ ಭಾರತ ಸರ್ಕಾರ ಮತ್ತು ಕರ್ನಾಟಕ ಸರ್ಕಾರದ ಷೇರು ಬಂಡವಾಳ ರೂ.598.00 ಲಕ್ಷಗಳಲ್ಲಿ ದಿನಾಂಕ: 30.06.1998 ಕ್ಕೆ ಇದ್ದಂತಹ ನಷ್ಟ ರೂ.2,61,01,554.15 ಗಳನ್ನು ಕಳೆದು ಉಳಿದಿರುವ ಮೊತ್ತ ರೂ.3,36,86,971.47 ಗಳನ್ನು ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರದ ಅನುಮತಿ ಬರುವವರೆಗೆ ಠೇವಣಿ ಎಂದು ಪರಿಗಣಿಸಲು ಆದೇಶಿಸಲಾಗಿತ್ತು) ರಾಜ್ಯ ಸರ್ಕಾರದ ಆದೇಶ ಸಂಖ್ಯೆ: ಎಹೆಚ್ಎಫ್/22/ಕೆಡಿಡಿಸಿ/95 ದಿನಾಂಕ:01.02.2009 ರ ಅನ್ವಯ ನಿಗದಿತ ಮೊಬಲಗನ್ನು ಮೂಲಭೂತ ಸೌಕರ್ಯ ನಿಧಿಗೆ ವರ್ಗಾವಣೆ ಮಾಡಿದ್ದು ಉಳಿಕೆ ರೂ.1,68,43,485-93 ಗಳು ದಿನಾಂಕ: 31.03.2009 ರಿಂದ ಠೇವಣಿಯಾಗಿ ಮುಂದುವರೆದಿದೆ.

ಭಾರತ ಸರ್ಕಾರದ (ಕೆ.ಡಿ.ಡಿ.ಸಿ ನಲ್ಲಿರುವ ಪಾಲು ಬಂಡವಾಳ) ರೂ.1,68,43,485-93 ಇದ್ದು, ಈ ಮೊಬಲಗು ದಿನಾಂಕ: 31.03.2020 ರ ಅಂತ್ಯಕ್ಕೆ ಹಿಂದಿನ ಸಾಲುಗಳಿಂದ ವರದಿ ಸಾಲಿಗೂ ಹಾಗೆಯೇ ಮುಂದುವರೆದಿರುತ್ತದೆ. ಈ ಸಂಬಂಧ ಪತ್ರ ವ್ಯವಹಾರ ನಡೆದಿದ್ದು, ಭಾರತ ಸರ್ಕಾರದ ಪತ್ರ ಸಂಖ್ಯೆ: FNO. 20.2/2020 DP (E No. 17259) ದಿನಾಂಕ: 14.09.2020 ರಲ್ಲಿ KDDC ಷೇರುಧನ ರೂ.168.43 ಲಕ್ಷಗಳನ್ನು ಅನುದಾನವಾಗಿ ಪರಿವರ್ತಿಸುವ ಬಗ್ಗೆ ಕರ್ನಾಟಕ ಸರ್ಕಾರದ ಶಿಫಾರಸ್ಸಿನೊಂದಿಗೆ ಸಲ್ಲಿಸುವಂತೆ ತಿಳಿಸಿರುವುದರಿಂದ ಕಹಾಮ ಪತ್ರಸಂಖ್ಯೆ: ಕಹಾಮ/ವಿತ್ತ/2698-3:2020-21 ದಿನಾಂಕ: 25.09.2020 ರ ಮೂಲಕ ಭಾರತ ಸರ್ಕಾರದ ಷೇರು ಬಂಡವಾಳವನ್ನು ಅನುದಾನವಾಗಿ ಪರಿವರ್ತಿಸಲು ಶಿಫಾರಸ್ಸು ಮಾಡುವಂತೆ ಕರ್ನಾಟಕ ಸರ್ಕಾರಕ್ಕೆ ಪತ್ರ ಬರೆಯಲಾಗಿದೆ.

S.R. & M.R. ASSOCIATES CHARTERED ACCOUNTANTS BANGALORE

17.0 ಭದ್ರತಾ ಸಾಲಗಳು :

ದಿನಾಂಕ: 31.03.2020 ರ ಅಂತ್ಯಕ್ಕೆ ಕಹಾಮವು ಪಾವತಿಸಬೇಕಾದ ಸಾಲದ ವಿವರ ಈ ಕೆಳಗಿನಂತಿದೆ.

ಅ) ಎನ್.ಡಿ.ಡಿ.ಬಿ ಯಿಂದ ಪಡೆದ ಸಾಲ :

01	ಎನ್.ಹೆಚ್.ಪಿ.ಪಿ 30 ಮೆ.ಟನ್ ಪೌಡರ್ ಘಟಕಕ್ಕೆ– ಡಿ.ಐ.ಡಿ.ಎಫ್ (New plant)	28,31,95,900-00
02	ಎನ್.ಹೆಚ್.ಪಿ.ಪಿ (Old plant)	40,91,125-00
03	ಪಶು ಆಹಾರ ಘಟಕ, ಹಾಸನ 300 ಮೆ:ಟನ್	8,50,47,750-00
04	ರಾಮನಗರ ಪೌಡರ ಪ್ಲಾಂಟ್ ಘಟಕಕ್ಕೆ– ಡಿ.ಐ.ಡಿ.ಎಫ್	166,04,34,000-00
	ಒಟ್ಟು ರೂ.	**203,27,68,775-00**

ಆ) ಇತರೇ :

01	ಟೆಟ್ರಾ ಪ್ಯಾಕ್ ಇಂಡಿಯಾ ಲಿಮಿಟೆಡ್., (ಮದರ್ ಡೇರಿ)	4,41,39,176-00
	ಒಟ್ಟು ರೂ.	**4,41,39,176-00**

ಮೇಲ್ಕಂಡ ಸಾಲಗಳಿಗೆ ಎನ್.ಡಿ.ಡಿ.ಬಿ ಯಿಂದ ದಿನಾಂಕ: 31.03.2020 ರ ಅಂತ್ಯಕ್ಕೆ ದೃಢೀಕರಣ ಪತ್ರ ಪಡೆದಿದ್ದು ತಾಳೆ ಇರುತ್ತದೆ. ಈ ದೃಢೀಕರಣ ಪತ್ರಗಳು ಸಂಬಂಧಿಸಿದ ಘಟಕಗಳಲ್ಲಿ ಲಭ್ಯವಿದ್ದು ಲೆಕ್ಕಪರಿಶೋಧನಾ ವೇಳೆಯಲ್ಲಿ ಪರಿಶೀಲಿಸಲಾಗಿದೆ.

ಮೆ: ಟೆಟ್ರಾ ಪ್ಯಾಕ್ ಇಂಡಿಯಾ ಲಿಮಿಟೆಡ್ ರವರಿಂದ ಮದರ್ ಡೇರಿ ಯು.ಹೆಚ್.ಟಿ. ಪ್ಯಾಕಿಂಗ್ ಯಂತ್ರ ಸ್ಥಾಪನೆಗಾಗಿ ಸಾಲ ಪಡೆದಿದ್ದು ಸಾಲಾಂತ್ಯಕ್ಕೆ ರೂ.4,41,39,176-00 ಬಾಕಿ ಇದ್ದು, ಮೆ: ಟೆಟ್ರಾ ಪ್ಯಾಕ್ ಇವರಿಂದ ದೃಢೀಕರಣ ಪಡೆಯಲಾಗಿರುತ್ತದೆ.

ಮೇಲ್ಕಂಡ ಸಾಲಗಳ ಲೆಕ್ಕಗಳು ಆಯಾ ಘಟಕಗಳಲ್ಲಿಯೆ ನಿರ್ವಹಿಸಲಾಗುತ್ತಿದೆ.

18.0 ಚಾಲ್ತಿ ಜವಾಬ್ದಾರಿಗಳು :

2019–20 ನೇ ಸಾಲಿನ ಅಂತ್ಯಕ್ಕೆ ಪಾವತಿಸಬೇಕಾದ ಬಾಕಿ/ಜವಾಬ್ದಾರಿಗಳು ಒಟ್ಟು ಮೊತ್ತ ರೂ.1661,70,55,972-15 ಇರುತ್ತದೆ. ವಿವರಗಳು ಲೆಕ್ಕಪತ್ರದ ಅನುಸೂಚಿ–12 ರಲ್ಲಿ ವಿತರಿಸಿದೆ.

18.1 ಸಂಡ್ರಿ ಕ್ರೆಡಿಟಾರ್ಸ್ :

ದಿನಾಂಕ:31.03.2020 ರ ಅಂತ್ಯಕ್ಕೆ ಸಂಡ್ರಿ ಕ್ರೆಡಿಟಾರ್ಸ್ ಖಾತೆಯಲ್ಲಿ ರೂ.422,89,92,418-40 ಇರುತ್ತದೆ. ಕಹಾಮದ ಕೇಂದ್ರ ಕಛೇರಿ ಮತ್ತು ಘಟಕಗಳು ಅವರ ಖರೀದಿಗೆ ಮತ್ತು ಪಡೆದಿರುವ ಸೇವೆಗೆ ಪಾವತಿ ಮಾಡಬೇಕಾದ ಮೊಬಲಗು ಇದಾಗಿರುತ್ತದೆ. ರೂ.252,14,73,240-05 ಗಳ ಮೊಬಲಗು ಕೇಂದ್ರ ಕಛೇರಿಗೆ ಸಂಬಂಧಿಸಿದ್ದು, ಉಳಿದ ಮೊಬಲಗು ಘಟಕಗಳಿಗೆ ಸಂಬಂಧಿಸಿದ್ದಾಗಿದೆ, ಕೇಂದ್ರ ಕಛೇರಿಗೆ ಸಂಬಂಧಿಸಿದ ಮೊಬಲಗಿನಲ್ಲಿ ರೂ.9,17,26,004-00 ಗಳ ಮೊಬಲಗು ಸಗಟು ಹಾಲು ಖರೀದಿಗೆ ಸಂಬಂಧಿಸಿದ್ದು, ರೂ.210,11,46,070-76 ಕ್ಷೀರಭಾಗ್ಯ ಯೋಜನೆಗೆ ಸಂಬಂಧಿಸಿದ್ದು ಹಾಗೂ ರೂ.29,45,22,726-05 ಹಾಲು ಒಕ್ಕೂಟಗಳಿಗೆ ಸಂಬಂಧಿಸಿದ್ದು, ಉಳಿದ ಮೊಬಲಗು ಇತರೇ ಕೆಲಸಗಳಿಗೆ ಸಂಬಂಧಿಸಿದೆ.

S.R. & M.R. ASSOCIATES CHARTERED ACCOUNTANTS BANGALORE

ರಾಯಚೂರು–ಬಳ್ಳಾರಿ ಡೇರಿ ನಿರ್ಮಾಣಕ್ಕೆ ಸಂಬಂಧಿಸಿದಂತೆ 2009–10 ನೇ ಸಾಲಿನಲ್ಲಿ ಶ್ರೀ ಡಿ.ಎಸ್. ಸಿದ್ದಣ್ಣ, ಗುತ್ತಿಗೆದಾರರು ಇವರಿಗೆ ರೂ.78,12,881-00 ಗಳನ್ನು ಕಹಾಮ ವತಿಯಿಂದ ಪಾವತಿ ಮಾಡಿ ಒಕ್ಕೂಟದ ಲೆಕ್ಕಕ್ಕೆ ಖರ್ಚು ಹಾಕಲಾಗಿದೆ. ಆದರೆ ಒಕ್ಕೂಟದಲ್ಲಿ ಸೂಕ್ತ ಲೆಕ್ಕ ಹೊಂದಾಣಿಕೆಯಾಗಿರುವುದಿಲ್ಲವಾದ್ದರಿಂದ ಇದರ ಬಗ್ಗೆ ಸೂಕ್ತ ಕ್ರಮವಿಡುವುದು.

18.2 ಇತರೇ ಜವಾಬ್ದಾರಿಗಳು :

ಇತರೇ ಜವಾಬ್ದಾರಿಗಳ ಅಡಿ, ಪಾವತಿಸಬೇಕಾದ ಮೊಬಲಗು **ರೂ.89,37,70,659-80** ಇದ್ದು ವಿವರಗಳು ಕೆಳಕಂಡಂತೆ ಇರುತ್ತದೆ.

01	ಬೋನಸ್/ಎಕ್ಸ್‌ಗ್ರೇಷಿಯಾ ಪಾವತಿಗೆ ಬಾಕಿ	95,32,361-75
02	ಪಾವತಿಸಬೇಕಾದ ಜವಾಬ್ದಾರಿಗಳು (Outstanding Liabilities)	67,49,12,134-11
03	ಭವಿಷ್ಯ ನಿಧಿ ವಂತಿಕೆ ಮತ್ತು ಇತರೆ ಪಾವತಿಗೆ ಬಾಕಿ	3,92,895-00
04	ಉಪಧನ ಪಾವತಿ ಬಾಕಿ	46,27,455-00
05	ಪ್ರಾಜೆಕ್ಟ್ ಅಕೌಂಟ್ ಬ್ಯಾಂಕ್ ಖಾತೆಯಲ್ಲಿ ಬಡ್ಡಿ ಬಂದಿದ್ದು	37,23,813-00
06	Invest Karnataka 2016 KMF PPP Project	21,758-00
07	ಜಿ.ಎಸ್.ಟಿ ಪಾವತಿಗೆ ಬಾಕಿ	13,23,558-80
08	ಇತರೇ ಜವಾಬ್ದಾರಿಗಳು	17,55,33,272-81
09	GSLIS ಪಾವತಿಗೆ ಬಾಕಿ	4,20,747-88
10	TDS ಪಾವತಿಗೆ ಬಾಕಿ	11,64,153-15
11	ಗುರುತಿಸಲಾಗದ ಸ್ವೀಕೃತಿ	43,923-30
12	MADB ಸಾಲದ ಮೇಲಿನ ಬಡ್ಡಿ	2,20,74,587-00
	ಒಟ್ಟು ರೂ.	**89,37,70,659-80**

ಕ್ರಮ ಸಂಖ್ಯೆ 2 ರಲ್ಲಿ ಪಾವತಿಗೆ ಬಾಕಿಯಿರುವ ಮೊಬಲಗು ರೂ.67,49,12,134-11 ಇದ್ದು, ಈ ಮೊಬಲಗು ದಿನಾಂಕ: 31.03.2020 ಕ್ಕೆ ಪಾವತಿಗೆ ಬಾಕಿ ಇರುತ್ತದೆ. ಈ ಮೊಬಲಗು ಲಾಭ ನಷ್ಟದ ಖಾತೆಯಲ್ಲಿ ಸೂಕ್ತ ಅವಕಾಶ ಮಾಡಲಾಗಿದೆ.

ಕ್ರಮ ಸಂಖ್ಯೆ 5 ರಲ್ಲಿ ವಿವರಿಸಿದ ಮೊಬಲಗು, ವಿವಿಧ ಒಕ್ಕೂಟಗಳು ತಮಗೆ ಬೇಕಾದ ಪ್ರಾಜೆಕ್ಟ್ ನಿರ್ಮಿಸಲು, ಕಹಾಮಗೆ ಕೋರಿ ಅವರುಗಳ ಪರವಾಗಿ ಕಹಾಮವು ಪ್ರಾಜೆಕ್ಟ್ ಕೈಗೊಳ್ಳುತ್ತಿದ್ದು, ಪ್ರಾಜೆಕ್ಟ್‌ಗೆ ಬೇಕಾದ ಮೊಬಲಗು ಸಂಬಂಧಿಸಿದ ಒಕ್ಕೂಟಗಳು ಕಹಾಮಗೆ ಪಾವತಿ ಮಾಡುತ್ತಿದ್ದು, ಕಹಾಮವು ಈ ಮೊಬಲಗು ಬ್ಯಾಂಕಿನಲ್ಲಿ ತೊಡಗಿಸಿದ್ದು, ಈ ಬ್ಯಾಂಕ್‌ನಿಂದ ಬಂದ ಬಡ್ಡಿ ಮೊಬಲಗು ಆಗಿರುತ್ತದೆ.

ಕ್ರಮ ಸಂಖ್ಯೆ 12 ರಲ್ಲಿ ವಿವರಿಸಿದ ಮೊಬಲಗು Malnad Area Development Board ನಿಂದ ಪಶು ಆಹಾರ ಘಟಕ–ಹಾಸನಕ್ಕೆ ಸಾಲ ನೀಡಿದ್ದು, ಬಡ್ಡಿ ರೂ.2,20,74,587-00 ಕ್ಕೆ ಅವಕಾಶ ಮಾಡಿಕೊಳ್ಳಲಾಗಿರುತ್ತದೆ. ಈ ಮೊಬಲಗು ಹಿಂದಿನ ವರ್ಷಗಳಿಂದ ಮುಂದುವರೆಯುತ್ತಿದೆ. ಈ ಬಡ್ಡಿಗೆ ಸಂಬಂಧಿಸಿದಂತೆ MADB ಇವರಲ್ಲಿ ಯಾವುದೇ ದಾಖಲೆಗಳಿರುವುದಿಲ್ಲ ಹಾಗೂ ಬಡ್ಡಿ ಪಾವತಿಸುವಂತೆ ಡಿಮ್ಯಾಂಡ್ ಸಹ ಇಲ್ಲದ ಕಾರಣ ಪರಿಶೀಲಿಸಿ ಲೆಕ್ಕ ಹೊಂದಾಣಿಕೆ ಮಾಡಿಕೊಳ್ಳಲು ತಿಳಿಸಿದೆ.

S.R. & M.R. ASSOCIATES CHARTERED ACCOUNTANTS BANGALORE

18.3 ಅಂತರ ಘಟಕ ಬಾಕಿ :

ಅಂತರ ಘಟಕದ ಬಾಕಿ ಕಹಾಮ ಘಟಕಗಳಿಗೆ ಪಾವತಿಸಬೇಕಾದ ಮೊಬಲಗು ರೂ.740,36,36,086-58 ಇದ್ದು, ಲೆಕ್ಕ ಸಮನ್ವಯ ಆಗಿರುತ್ತದೆ.

18.4 ಇ.ಎಂ.ಡಿ, ಎಸ್.ಡಿ ಮತ್ತು ಹಿಡಿದಿಟ್ಟ ಮೊಬಲಗು:

ಸಾಲಾಂತ್ಯಕ್ಕೆ ಹಿಂದಿರುಗಿಸಬೇಕಾದ ಇ.ಎಂ.ಡಿ, ಎಸ್.ಡಿ ಮೊತ್ತ ರೂ.50,12,28,035-99 ಮತ್ತು ಗುತ್ತಿಗೆದಾರರ ವಹಿವಾಟಿನಲ್ಲಿ ಹಿಡಿದಿಟ್ಟ ಮೊಬಲಗು ರೂ.41,05,45,956-48 ಇರುತ್ತದೆ.

18.5 ಆದಾಯ ತೆರಿಗೆ :

ಹಣಕಾಸು ವರ್ಷ 2017–18 ನೇ ಸಾಲಿಗೆ ರೂ.77,00,00,000-00 ಗಳ ಮೊಬಲಗು, 2018–19 ನೇ ಸಾಲಿಗೆ ರೂ.66,00,00,000-00 ಗಳು ಮತ್ತು 2019–20 ನೇ ಸಾಲಿಗೆ ರೂ.33,00,00,000-00 ಆದಾಯ ತೆರಿಗೆ ಪಾವತಿಗಾಗಿ ಕಾಯ್ದಿರಿಸಲಾಗಿದೆ. ಈ ಪಾವತಿಗಳು ಆಯಾ ವರ್ಷದ ಕರ ನಿರ್ಧಾರಣೆಯಾದ ನಂತರ ಹೊಂದಾಣಿಕೆಯಾಗುತ್ತದೆ.

18.6 ಸಿಬ್ಬಂದಿಗಳಿಗೆ ಪಾವತಿ ಬಾಕಿ :

ಈ ಖಾತೆಯಲ್ಲಿ ಸಿಬ್ಬಂದಿ Benevolent Fund ಗೆ ಪಾವತಿಸಬೇಕಾದ ಮೊಬಲಗು ರೂ.2,43,37,063-16 ಆಗಿದ್ದು, ಪಿಂಚಣಿ ಮತ್ತು ವೇತನ ಪಾವತಿಗೆ ರೂ.1,48,20,005-00 ಇರುತ್ತದೆ.

18.7 ಅನುದಾನಗಳು :

ಕೇಂದ್ರ ಸರ್ಕಾರದಿಂದ ದಿನಾಂಕ:31.03.2020 ಕ್ಕೆ ರೂ.**1,24,06,049-77** ಬಾಕಿ ಇರುತ್ತದೆ, ವಿವರಗಳು ಕೆಳಕಂಡಂತೆ ಇರುತ್ತದೆ.

01	ಸ್ಟೆಪ್	1,23,90,273-59
02	ಎನ್.ಎಸ್.ಎಸ್	15,776-18
	ಒಟ್ಟು ರೂ.	**1,24,06,049-77**

18.8 ಇತರೆ ಚಾಲ್ತಿ ಜವಾಬ್ದಾರಿಗಳ ವಿವರ ಈ ಕೆಳಗಿನಂತಿದೆ.

01	ವಸತಿಗೃಹ ಠೇವಣಿ	1,42,000-00
02	ಗ್ರಾಹಕರಿಂದ ಪಡೆದ ಮುಂಗಡ	10,02,106-00
03	ಲೀಸ್ ಮುಂಗಡ–ಬಮೂಲ್	3,292-00
04	ಲೀಸ್ ಮುಂಗಡ–GCMMF	39,12,230-00
05	ಲೀಸ್ ಮುಂಗಡ–MDFPL Delhi	47,43,299-00
06	ಶಾಸನಬದ್ಧ ಲೆಕ್ಕಪರಿಶೋಧನಾ ಶುಲ್ಕ	10,00,000-00
07	Gratuity with LIC GGCA ಪಾವತಿ ಬಾಕಿ	65,61,50,757-68
	ಒಟ್ಟು ರೂ.	**66,69,53,684-68**

S.R. & M.R. ASSOCIATES CHARTERED ACCOUNTANTS BANGALORE

18.9 ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಿಂದ ಪಡೆದ ಅನುದಾನಗಳು–ನೋಡಲ್ ಏಜೆನ್ಸಿ

ದಿನಾಂಕ:31.03.2020 ರ ಅಂತ್ಯಕ್ಕೆ ಕಹಾಮವು ನೋಡಲ್ ಏಜೆನ್ಸಿಯಾಗಿ ಪಡೆದ ಅನುದಾನದ ವಿವರ ಈ ಕೆಳಗಿನಂತಿದೆ.

01	ಭಾರತ ಸರ್ಕಾರದ ಅನುದಾನ	30,89,52,728-95
02	ರಾಜ್ಯ ಸರ್ಕಾರದ ಅನುದಾನ	37,33,49,428-20
03	ಸಮಾಜ ಕಲ್ಯಾಣ ಇಲಾಖೆ	30,00,000-00
04	ಅನುದಾನದ ಠೇವಣಿಗಳ ಮೇಲೆ ಬಂದ ಬಡ್ಡಿ	1,50,63,855-14
	ಒಟ್ಟು ರೂ.	**70,03,66,012-29**

ಪ್ರಸಕ್ತ ಸಾಲಿನಲ್ಲಿ ಈ ಕೆಳಕಂಡ ಅನುದಾನಗಳನ್ನು ಕಹಾಮವು ಸ್ವೀಕರಿಸಿ, ಅನುದಾನಗಳನ್ನು ಕ್ರಮವಾಗಿ ಆಯಾ ಒಕ್ಕೂಟಗಳಿಗೆ ಬಳಕೆ ಪ್ರಮಾಣ ಪತ್ರ ಪಡೆದು ವಿತರಿಸಲಾಗಿದೆ.

ಕ್ರ. ಸಂ	ವಿವರ	ಆರಂಭದ ಮೊಬಲಗು	ವರದಿ ಸಾಲಿನಲ್ಲಿ ಸರ್ಕಾರದಿಂದ ಬಿಡುಗಡೆಯಾದ ಮೊಬಲಗು	2019–20 ನೇ ಸಾಲಿನಲ್ಲಿ ಒಕ್ಕೂಟಗಳಿಗೆ ಬಿಡುಗಡೆಯಾದ ಮೊಬಲಗು	ದಿ.31.03.2020 ಕ್ಕೆ ಬಾಕಿ ಇರುವ ಮೊಬಲಗು
1)	ಕೇಂದ್ರ ಸರ್ಕಾರದಿಂದ ಅನುದಾನ	29,65,77,139-95	30,18,00,000-00	28,94,24,411-00	30,89,52,728-95
2)	ರಾಜ್ಯ ಸರ್ಕಾರದಿಂದ ಅನುದಾನ	38,90,86,262-20	18,08,00,000-00	19,65,36,834-00	37,33,49,428-20
3)	ಕರ್ನಾಟಕ ರಾಜ್ಯ ಸರ್ಕಾರ ಸಮಾಜ ಕಲ್ಯಾಣ ಇಲಾಖೆ ಮೂಲಕ	4,60,00,000-00	-	4,30,00,000-00	30,00,000-00

ದಿನಾಂಕ: 31.03.2020 ಕ್ಕೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಂದ ಬಂದಿರುವ ಅನುದಾನದಲ್ಲಿ ಬಾಕಿ ಇರುವ ಮೊಬಲಗು ರೂ.68,53,02,157-15 ಮೊಬಲಗು ಪೈಕಿ ಕಹಾಮ ಘಟಕಗಳಿಗೆ ಮತ್ತು ಒಕ್ಕೂಟಗಳಿಗೆ ರೂ.21,05,17,130-30 ಗಳು ಮುಂಗಡ ನೀಡಿದ್ದು, ಬಳಕೆ ಪ್ರಮಾಣ ಪತ್ರಗಳನ್ನು ಪಡೆದು ಆಯಾ ಅನುದಾನಗಳನ್ನು ಖೈದುಗೊಳಿಸಲು ಸೂಚಿಸಿದೆ. ಹಂಚಿಕೆಯಾಗದೆ ಇರುವ ಮೊಬಲಗು ಬ್ಯಾಂಕಿನಲ್ಲಿ ರೂ.36,24,26,242-91 ಠೇವಣಿ ರೂಪದಲ್ಲಿ ಹಾಗೂ ರೂ.11,24,23,355-64 ಉಳಿತಾಯ ಖಾತೆಯಲ್ಲಿಡಲಾಗಿದೆ.

ಸಂಡ್ರಿ ಡೆಟಾರ್ಸ್ ಖಾತೆಯಲ್ಲಿ Central Frozen Semen production and Training Institute ನಿಂದ ರೂ. 1,06,467-00 ರಷ್ಟು ಮೊಬಲಗು ಹಿಂದಿನ ಸಾಲುಗಳಿಂದ ಬರಲು ಬಾಕಿ ಇರುತ್ತದೆ. ಈ ಬಗ್ಗೆ ಶೀಘ್ರ ಕ್ರಮ ಕೈಗೊಂಡು ಲೆಕ್ಕ ಖೈದುಗೊಳಿಸಲು ಸೂಚಿಸಲಾಗಿದೆ.

ರೂ.2,03,41,277-44 ಇದ್ದು ಈ ಮೊಬಲಗು ಬಡ್ಡಿಯ ಮೇಲಿನ ಟಿ.ಡಿ.ಎಸ್ ಆಗಿದ್ದು, ಕಹಾಮದ PAN ಅಡಿಯಲ್ಲಿ ಕಟಾಯಿಸಿದ್ದು ಇದನ್ನು ಕಹಾಮ ಖಾತೆಯಲ್ಲಿ ಬರಬೇಕಾದ ಹಣವೆಂದು ತೋರಿಸಲಾಗಿದೆ.

S.R. & M.R. ASSOCIATES CHARTERED ACCOUNTANTS BANGALORE

19.0 ನಿವ್ವಳ ಲಾಭ :

ಕಹಾಮವು 2019–20 ನೇ ಸಾಲಿನಲ್ಲಿ ರೂ.124,51,92,421-31 ನಿವ್ವಳ ಲಾಭ ಗಳಿಸಿರುತ್ತದೆ. ಸಂಸ್ಥೆಯ 2019–20 ನೇ ಸಾಲಿನ ಆದಾಯ ತೆರಿಗೆ ಪಾವತಿಗಾಗಿ ರೂ.33,00,00,000-00 ಗಳ ಮೊಬಲಗು ಅವಕಾಶ ಕಲ್ಪಿಸಲಾಗಿದೆ. ಸವಕಳಿ ಬಾಬ್ತು ರೂ.36,72,15,663-64 ಗಳಷ್ಟು ಅವಕಾಶ ಮಾಡಲಾಗಿದೆ.

ವರದಿ ಸಾಲಿನಲ್ಲಿ ವಾರ್ಷಿಕ ಸರ್ವ ಸದಸ್ಯರ ಸಭೆಯಲ್ಲಿ ನಿರ್ಣಯಿಸಿದಂತೆ ಕಳೆದ ವರ್ಷಗಳ ಲಾಭಾಂಶವನ್ನು ಸಂಘದ ಉಪನಿಯಮಗಳ ಪ್ರಕಾರ ಹಂಚಿಕೆ ಮಾಡಿರುವುದನ್ನು ಪರಿಶೀಲಿಸಿ ಕ್ರಮಬದ್ಧವಾಗಿರುವುದನ್ನು ಗಮನಿಸಲಾಗಿದೆ.

20.0 (ಅ) ನಗದು ಶಿಲ್ಕು ಹಾಗೂ ಬ್ಯಾಂಕ್ ಲೆಕ್ಕ :

ದಿನಾಂಕ: 31.03.2020 ರ ಅಂತ್ಯಕ್ಕೆ ಕಹಾಮ ಮತ್ತು ಘಟಕಗಳಲ್ಲಿ ರೂ.13,24,161-00 ಗಳ ನಗದು ಶಿಲ್ಕು ಇರುತ್ತದೆ. ಸದರಿ ನಗದು ಶಿಲ್ಕನ್ನು ಆಯಾ ಘಟಕಗಳ ಪೂರ್ವ ಲೆಕ್ಕಪರಿಶೋಧಕರು ಪರಿಶೀಲಿಸಿ ದೃಢೀಕರಿಸಿರುತ್ತಾರೆ. ದಿನಾಂಕ: 31.03.2020 ಕ್ಕೆ ಕೇಂದ್ರ ಕಛೇರಿಯಲ್ಲಿ ನಗದು ಇರುವುದಿಲ್ಲ.

ದಿನಾಂಕ:01.04.2019 ರಿಂದ ಕೇಂದ್ರ ಕಛೇರಿಯಲ್ಲಿ ನಗದು ವ್ಯವಹಾರ ಪೂರ್ಣವಾಗಿ ಸ್ಥಗಿತಗೊಳಿಸಲಾಗಿದೆ.

(ಆ) ಬ್ಯಾಂಕ್ ಲೆಕ್ಕಗಳು – ಚಾಲ್ತಿ ಮತ್ತು ಉಳಿತಾಯ ಠೇವಣಿ ಖಾತೆ :

ಕಹಾಮ ಕೇಂದ್ರ ಕಛೇರಿ ಮತ್ತು ಘಟಕಗಳು ವಿವಿಧ ಬ್ಯಾಂಕುಗಳಲ್ಲಿ ಚಾಲ್ತಿ ಮತ್ತು ಉಳಿತಾಯ ಖಾತೆಯನ್ನು ಹೊಂದಿದ್ದು ದಿನಾಂಕ: 31.03.2020 ರ ಅಂತ್ಯಕ್ಕೆ ಕೆಳಕಂಡಂತೆ ಇರುತ್ತದೆ.

ಮೊತ್ತ ರೂ.ಗಳಲ್ಲಿ

1) ಕೇಂದ್ರ ಕಛೇರಿ ಮತ್ತು ಘಟಕಗಳಲ್ಲಿ ಚಾಲ್ತಿ ಮತ್ತು ಉಳಿತಾಯ ಖಾತೆಗಳಲ್ಲಿ	242,76,97,660-77
2) CMP/GOI/GOK/NDP ಯೋಜನೆಗಳ ಬ್ಯಾಂಕ್ ಖಾತೆಗಳಲ್ಲಿ	47,48,49,598-55
3) STEP ಮೊಬಲಗು ಬ್ಯಾಂಕ್ ಖಾತೆಗಳಲ್ಲಿ	72,90,273-59
4) ಸ್ಥಿರ ಠೇವಣಿ–ಆಪದ್ಧನ ನಿಧಿ	22,22,64,671-96

ಕಹಾಮ ಕೇಂದ್ರ ಕಛೇರಿಗೆ ಸಂಬಂಧಿಸಿದ ಬ್ಯಾಂಕ್ ಖಾತೆಗಳ ದೃಡೀಕರಣ ಪತ್ರಗಳನ್ನು ಸಮನ್ವಯ ತ:ಖ್ತೆಯೊಂದಿಗೆ ಪರಿಶೀಲಿಸಿದ್ದು, ಬ್ಯಾಂಕ್ ಖಾತೆಗೆ ತಾಳೆ ಇರುತ್ತದೆ. ಸ್ಟೆಪ್ ವಿಭಾಗದಲ್ಲಿ ನಿರ್ಮಿಸುತ್ತಿರುವ ಯೋಜನೆಗಳ ಬ್ಯಾಂಕ್ಖಾತೆ ತೆರೆದಿದ್ದು, ದಿನಾಂಕ: 31.03.2020 ಕ್ಕೆ ರೂ.72,90,273-59 ಇದ್ದು ಸಮನ್ವಯ ಪಟ್ಟಿ ತಯಾರಿಸಿದ್ದು, ಬ್ಯಾಂಕ್ ಖಾತೆಗೆ ತಾಳೆ ಇರುತ್ತದೆ. ಕಹಾಮದ ಘಟಕಗಳ ಬ್ಯಾಂಕ್ ಖಾತೆ ದೃಢೀಕರಣಕ್ಕೆ ತಾಳೆ ಇರುವ ಬಗ್ಗೆ ಆಯಾ ಘಟಕಗಳ ವರದಿಯಲ್ಲಿ ವಿಶ್ಲೇಷಿಸಲಾಗಿದೆ.

S.R. & M.R. ASSOCIATES CHARTERED ACCOUNTANTS BANGALORE

ಸಾಲಾಂತ್ಯಕ್ಕೆ ನಿಶ್ಚಿತ ಠೇವಣೆಯಲ್ಲಿ **ರೂ.67,13,91,473-87** ಇದ್ದು ವಿವರಗಳು ಕೆಳಕಂಡಂತೆ ಇರುತ್ತದೆ.

ಮೊತ್ತ ರೂ.ಗಳಲ್ಲಿ

1) ಕೇಂದ್ರ ಕಛೇರಿ ಮತ್ತು ಘಟಕಗಳು	8,67,00,559-00
2) ಯೋಜನೆಗಳು/ಅನುದಾನಗಳು (GOI/GOK)	36,24,26,242-91
3) ನಿಶ್ಚಿತ ಠೇವಣಿ (ಆಪದ್ಧನ ನಿಧಿ)	22,22,64,671-96
ಒಟ್ಟು	**67,13,91,473-87**

21.0 ಹೂಡಿಕೆಗಳು :

2019–20 ನೇ ಸಾಲಿನ ಅಂತ್ಯಕ್ಕೆ ಕಹಾಮ ವಿವಿಧ ಸಂಸ್ಥೆಗಳಲ್ಲಿ ಮಾಡಿರುವ ಬಂಡವಾಳ ಹೂಡಿಕೆಗಳ ವಿವರ ಈ ಕೆಳಕಂಡಂತಿದೆ.

ಕ್ರ. ಸಂ	ವಿವರ	ಮೊಬಲಗು	ದೃಡೀಕರಣ ಹಾಜರಿರುವ ಬಗ್ಗೆ
1	ನ್ಯಾಷನಲ್ ಕೋ ಆಪರೇಟಿವ್ ಡೇರಿ ಫೆಡರೇಷನ್ ಆಫ್ ಇಂಡಿಯಾ ನ್ಯೂಡೆಲ್ಲಿ	5,00,000-00	ಹಾಜರಿರುತ್ತದೆ.
2	ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್ ನಿ ಬೆಂಗಳೂರು	10,00,000-00	ಹಾಜರಿರುತ್ತದೆ
3	ಡೆಂಪೋ ಡೇರಿ ಇಂಡಸ್ಟ್ರೀಸ್ ಲಿಮಿಟೆಡ್ ಆಸಂಗಿ ಬಿಜಾಪುರ ಜಿಲ್ಲೆ	6,94,55,600-00	ಹಾಜರಿರುತ್ತದೆ
4	ಇಫ್ಕೋ, ಡೆಲ್ಲಿ	5,00,000-00	ಹಾಜರಿರುತ್ತದೆ
5	ಹಾಸನ ಸಹಕಾರಿ ಕೃಷಿ ಮಾರುಕಟ್ಟೆ ಒಕ್ಕೂಟ	2,00,000-00	ಹಾಜರಿರುತ್ತದೆ
6	ಕರ್ನಾಟಕ ರಾಜ್ಯ ವಿಮಾ ಸಹಕಾರ ಸಂಘ	50,000-00	ಹಾಜರಿರುತ್ತದೆ
	ಒಟ್ಟು ರೂ.	**7,17,05,600-00**	

ಮೇಲೆ ತಿಳಿಸಿರುವ ಹೂಡಿಕೆಗಳ ಪೈಕಿ ಅಪೆಕ್ಸ್ ಬ್ಯಾಂಕ್‌ನಿಂದ ರೂ.60,000-00 ಇಫ್ಕೋಯಿಂದ ರೂ.1,00,000-00 ಮತ್ತು ನ್ಯಾಷನಲ್ ಕೋ ಆಪರೇಟಿವ್ ಡೇರಿ ಫೆಡರೇಷನ್‌ನಿಂದ ರೂ.50,000-00 ಗಳ ಲಾಭಾಂಶ ಬಂದಿರುತ್ತದೆ. ಪ್ರಸಕ್ತ ಸಾಲಿನಲ್ಲಿ ರೂ.14,00,000-00 (1,40,000 ಷೇರುಗಳು ರೂ. 10 ಪ್ರತಿ ಷೇರಿಗೆ) ಮುಖಬೆಲೆಯ ಡೆಂಪೋ ಡೇರಿಯ ಷೇರುಗಳನ್ನು ಡೆಂಪೋ ಡೇರಿಗೆ ಮಾರಾಟ ಮಾಡಲಾಗಿದೆ. (ದಿನಾಂಕ: 25.05.2018 ರಲ್ಲಿ ನಡೆದ ಡೆಂಪೋ ಡೇರಿಯ 202 ನೇ ಆಡಳಿತ ಮಂಡಳಿ ಸಭೆಯ ಠರಾವಿನಂತೆ)

22.0 ಸಂಡ್ರಿ ಡೆಟಾರ್ಸ್ :–

ದಿನಾಂಕ:31.03.2020 ರ ಅಂತ್ಯಕ್ಕೆ ಈ ಖಾತೆಯಲ್ಲಿ ರೂ.262,78,41,637-64 ಬಾಕಿ ಇರುತ್ತದೆ. ಕೇಂದ್ರ ಕಛೇರಿಗೆ ಸಂಬಂಧಿಸಿದಂತೆ ರೂ.184,49,66,207-40 ಇರುತ್ತದೆ. ಇದರಲ್ಲಿ ರೂ.172,25,93,553-41 ಗಳ ಮೊಬಲಗು ಕ್ಷೀರಭಾಗ್ಯ ಯೋಜನೆಗೆ ಸಂಬಂಧಿಸಿದೆ.

S.R. & M.R. ASSOCIATES CHARTERED ACCOUNTANTS BANGALORE

23.0 ಸಾಲ ಮತ್ತು ಮುಂಗಡಗಳು :-

ದಿನಾಂಕ: 31.03.2020 ಕ್ಕೆ ಕಹಾಮ ಮತ್ತು ಘಟಕಗಳಿಗೆ ಬರಬೇಕಾದ ಬಾಕಿ ಮೊಬಲಗು ಒಟ್ಟು ರೂ. 1039,17,13,241-38 ಇದ್ದು ವಿವರಗಳನ್ನು ಲೆಕ್ಕಪತ್ರದ ಅನುಸೂಚಿ–11 ರಲ್ಲಿ ವಿವರಿಸಿದೆ.

ವಿವಿಧ ಸೇವೆಗಳು ಪಡೆಯಲು ಪಾವತಿಸಿದ ಮುಂಗಡ ಮೊಬಲಗು ರೂ.10,89,34,721-69 ಇರುತ್ತದೆ. ಈ ಮೊಬಲಗಿನಲ್ಲಿ ಕೇಂದ್ರ ಕಛೇರಿ ಮತ್ತು ಘಟಕಗಳಲ್ಲಿ ಪಾವತಿಸಿದ ಮೊಬಲಗು ಆಗಿರುತ್ತದೆ.

ಆದಾಯ ತೆರಿಗೆ ಇಲಾಖೆಗೆ ಪಾವತಿಸಿ, ಕರ ನಿರ್ಧಾರ ಆಗದೆ ಇರುವ ವರ್ಷಾವಾರು ಮೊಬಲಗು

ಮೊತ್ತ ರೂ.ಗಳಲ್ಲಿ

ಕರ ನಿರ್ಧಾರದ ವರ್ಷ	ಮುಂಗಡ ಪಾವತಿಸಿದ ತೆರಿಗೆ
2018-19	71,54,35,200-00
2019-20	61,00,00,000-00
2020-21	29,00,00,000-00
ಒಟ್ಟು	**161,54,35,200-00**

ಮೂಲದಲ್ಲಿ ಕಟಾಯಿಸಿದ ತೆರಿಗೆ ಸಾಲಾಂತ್ಯಕ್ಕೆ ರೂ.12,54,77,967-42 ಇರುತ್ತದೆ.

ಅಂತರ ಘಟಕ ಬಾಕಿ ಮೊಬಲಗು ದಿನಾಂಕ:31.03.2020 ಕ್ಕೆ ರೂ.739,18,26,875-07 ಇರುತ್ತದೆ. ದಿನಾಂಕ: 31.03.2020 ಕ್ಕೆ ಸಮನ್ವಯ ಪಟ್ಟಿ ತಯಾರಿಸಿದ್ದು, ತಾಳೆ ಇರುತ್ತದೆ

ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರ, ವಿವಿಧ ಯೋಜನೆ ಮತ್ತು ಸ್ಟೆಪ್ ಯೋಜನೆಯಡಿ ಸ್ವೀಕರಿಸಿದ ಮೊಬಲಗು ಹಾಲು ಒಕ್ಕೂಟಗಳಿಗೆ ಹಾಗೂ ಘಟಕಗಳಿಗೆ ಮುಂಗಡ ರೂಪದಲ್ಲಿ ವಿತರಿಸಿದ್ದು, ಈ ಮೊಬಲಗು ಸಂಬಂಧಿಸಿದ ಒಕ್ಕೂಟಗಳು ಖರ್ಚು ಮಾಡದೆ ಉಳಿದಿರುತ್ತದೆ. ಇದು ಒಟ್ಟು ರೂ.22,81,90,400-30 ಆಗಿರುತ್ತದೆ.

ಸಾಲಾಂತ್ಯಕ್ಕೆ ಚನ್ನರಾಯಪಟ್ಟಣ ಘಟಕದ ಜಮೀನು ಖರೀದಿಗಾಗಿ ರೂ.3,02,456-00 ಗಳ ಮೊಬಲಗು ಮುಂಗಡವಾಗಿ ನೀಡಿದ್ದು, ಈ ಮೊಬಲಗು ಖೈದು ಮಾಡಲು ಸೂಚಿಸಿದೆ.

ಈ ಮೊದಲು ರಾಷ್ಟ್ರೀಯ ಹೈನು ಅಭಿವೃದ್ಧಿ ಮಂಡಳಿ ಅನುದಾನದಲ್ಲಿ ಚಾಲ್ತಿಯಿದ್ದ ಪೀಳಿಗೆ ಪರೀಕ್ಷಾ ಯೋಜನೆಯು ದಿನಾಂಕ: 31.03.2019 ಕ್ಕೆ ಮುಕ್ತಾಯವಾಗಿದ್ದು, ಸದರಿ ಯೋಜನೆ ಕಹಾಮ ಹೈನು ಅಭಿವೃದ್ಧಿಗೆ ಪೂರಕವಾಗಿರುವುದರಿಂದ ಕಹಾಮ ಆಯವ್ಯಯದಲ್ಲಿ ಸದರಿ ಯೋಜನೆ ಮುಂದುವರೆಸುವುದಕ್ಕೆ ಈ ಯೋಜನೆಯಲ್ಲಿ ಸೃಷ್ಟಿಯಾಗಿರುವ ಕಾರ್ಪಸ್ ನಿಧಿಯ ಬಡ್ಡಿಯನ್ನು ಬಳಸಿ ಹೆಚ್ಚುವರಿ ಮೊತ್ತವನ್ನು ಕಹಾಮ ಭರಿಸಿ ಮುಂದುವರೆಸಲು ಅನುಮತಿಸಿದ್ದು, ಸದರಿ ಯೋಜನೆಯನ್ನು ಈ ಸಾಲಿನಲ್ಲಿ **"ಕಹಾಮ ಪೀಳಿಗೆ ಪರೀಕ್ಷಾ ಯೋಜನೆ"** ಎಂದು ಮುಂದುವರೆಸಲಾಗಿದೆ. ಈ ಸಂಬಂಧ 'ಪೀಳಿಗೆ ಪರೀಕ್ಷಾ ಯೋಜನೆ'ಯಡಿಯಲ್ಲಿ ಠೇವಣಿ ರೂಪದಲ್ಲಿದ್ದ ರೂ.4,92,51,834-00 ಗಳನ್ನು 2019–20 ನೇ ಸಾಲಿನಲ್ಲಿ ಕಹಾಮಗೆ

S.R. & M.R. ASSOCIATES CHARTERED ACCOUNTANTS BANGALORE

ವರ್ಗಾಯಿಸಿದ್ದು, ಈ ಮೊಬಲಗನ್ನು ಕಾರ್ಪಸ್ ನಿಧಿಯಲ್ಲಿ ಇಡಲಾಗಿರುತ್ತದೆ. ಹಾಗೂ ಸದರಿ ಯೋಜನೆಯ ಅಂತಿಮ ದಾಸ್ತಾನಿನ ಮೌಲ್ಯ ರೂ.37,43,845-53 ಗಳಾಗಿರುತ್ತದೆ.

ಇತರೆ ಸಾಲ ಮತ್ತು ಮುಂಗಡಗಳ ಮೊತ್ತ ರೂ.86,85,49,941–37 ಗಳಾಗಿದ್ದು ವಿವರ ಈ ಕೆಳಗಿನಂತಿದೆ.

ಸಿಬ್ಬಂದಿ ಮುಂಗಡ	1,65,71,683-70
ಆಡಿಟ್ ಆಕ್ಷೇಪಣೆ	7,93,001-00
ಠೇವಣಿಗಳು	13,94,71,585-31
LIC (GGLIS) ಠೇವಣಿ	65,61,50,757-68
ಗಣೇಶ ದೇವಸ್ಥಾನ ದತ್ತಿ ನಿಧಿ	5,00,010-00
ಸ್ವೀಕರಿಸಬೇಕಾದ ಜಿ.ಎಸ್.ಟಿ. ಮೊತ್ತ	1,94,86,335-55
ಮುಂಗಡವಾಗಿ ಪಾವತಿಸಿದ ವೆಚ್ಚಗಳು	88,68,357-46
ತಿರುಪತಿ ಮಾರಾಟ ಮಳಿಗೆಯ ದಾಸ್ತಾನು ವ್ಯತ್ಯಾಸ	20,89,829-67
ಸಾಗಾಣೆಯಲ್ಲಿರುವ ದಾಸ್ತಾನು	14,29,157-00
GST paid under protest	2,15,06,686-00
Disputed service tax	16,82,538-00
ಒಟ್ಟು	**86,85,49,941-37**

ತಿರುಪತಿ ಮಾರಾಟ ಮಳಿಗೆಯಲ್ಲಿ 2019–20 ನೇ ಸಾಲಿನಲ್ಲಿ ದಾಸ್ತಾನು ವ್ಯತ್ಯಾಸ ರೂ.20,89,829-67 ಕಂಡು ಬಂದಿದ್ದು ಈ ಪ್ರಕರಣವನ್ನು ಇಲಾಖಾ ತನಿಖೆಗೆ ವಹಿಸಿದ್ದು, ತನಿಖೆ ಪ್ರಗತಿಯಲ್ಲಿರುತ್ತದೆ.

ಪ್ರಸಕ್ತ ಸಾಲಿನಲ್ಲಿ ಜಿ.ಎಸ್.ಟಿ ತನಿಖಾ ವಿಭಾಗ, ಬೆಂಗಳೂರುರವರು ಸುವಾಸಿತ ಹಾಲಿನ ಮಾರಾಟದ ಮೇಲೆ ಜಿ.ಎಸ್.ಟಿ ದರವು ಶೇ. 12 ರಂತೆ ಪಾವತಿ ಮಾಡಲು ನೋಟಿಸ್ ಜಾರಿ ಮಾಡಿ ಈ ಮೊದಲು ಮಾರಾಟ ಮಾಡಿರುವ ಸುವಾಸಿತ ಹಾಲಿನ ವಹಿವಾಟಿಗೆ ಬಾಕಿ ಜಿ.ಎಸ್.ಟಿ ರೂ.2,15,06,686-00 ಪಾವತಿ ಮಾಡಲು ಸೂಚಿಸಿದ್ದು, ಕಹಾಮ ಸದರಿ ಮೊತ್ತವನ್ನು under protest ಪಾವತಿ ಮಾಡಿದೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ AAR (Authority of Advance Ruling) ಗೆ ಅರ್ಜಿ ಸಲ್ಲಿಸಿದ್ದು, ಪ್ರಕರಣವನ್ನು ಇತ್ಯರ್ಥಪಡಿಸಿ ಕಹಾಮದ ಪರ ಆದೇಶ ನೀಡಿರುತ್ತಾರೆ. ಆದರೆ, ಆ ಆದೇಶವನ್ನು ಇಲಾಖೆಯು ಪ್ರಶ್ನಿಸಿ ಮೇಲ್ಮನವಿ ಸಲ್ಲಿಸಿದ್ದಾರೆ. ಆದ್ದರಿಂದ ಈ ಮೊಬಲಗು ಇನ್ನು ಇತ್ಯರ್ಥವಾಗದೇ ಉಳಿದಿರುತ್ತದೆ.

ದಿನಾಂಕ: 01.07.2003 ರಿಂದ 31.03.2008 ರ ಅವಧಿಗೆ ಸಂಬಂಧಿಸಿದ ತರಬೇತಿ ಶುಲ್ಕದ ಮೇಲೆ ಸೇವಾ ತೆರಿಗೆಯನ್ನು ಇಲಾಖೆಯಿಂದ ಬಂದ ನೋಟಿಸ್ ಪ್ರಕಾರ ಪಾವತಿಗೆ ಅವಕಾಶ ಕಲ್ಪಿಸಿ ತರಬೇತಿ ಕೇಂದ್ರಗಳ ಲೆಕ್ಕದಲ್ಲಿ Disputed service tax ಖಾತೆಯಲ್ಲಿ ರೂ.16,82,538-00 ಗಳನ್ನು ತೋರಿಸಲಾಗಿದೆ.

S.R. & M.R. ASSOCIATES CHARTERED ACCOUNTANTS BANGALORE

24.0 ಸ್ಥಿರಾಸ್ತಿಗಳು ಹಾಗೂ ಸವಕಳಿ ಬಗ್ಗೆ ವಿವರಣೆ :

ದಿನಾಂಕ: 31.03.2020 ರ ಅಂತ್ಯಕ್ಕೆ ಸ್ಥಿರಾಸ್ತಿಗಳ ಮೌಲ್ಯ ಈ ಕೆಳಕಂಡಂತೆ ಇರುತ್ತದೆ

ಮೊತ್ತ ರೂ. ಗಳಲ್ಲಿ

1.	ಸ್ಥಿರಾಸ್ತಿಗಳ ಒಟ್ಟು ಮೌಲ್ಯ	1043,59,17,085-31
2.	ಕ್ರೋಡೀಕೃತ ಸವಕಳಿ	230,35,03,696-67
3.	ಒಟ್ಟು ಸ್ಥಿರಾಸ್ತಿಗಳ ಮೌಲ್ಯ (1–2)	828,59,70,472-92
4.	ಪ್ರಗತಿಯಲ್ಲಿರುವ ಕಾಮಗಾರಿಗಳ ಮೊಬಲಗು	15,35,57,084-28
5.	ವರ್ಷಾಂತ್ಯಕ್ಕೆ ನಿವ್ವಳ ಸ್ಥಿರಾಸ್ತಿ ಮೌಲ್ಯ (3–4)	813,24,13,388-64

ದಿನಾಂಕ: 31.03.2020 ರ ಅಂತ್ಯಕ್ಕೆ ಸ್ಥಿರಾಸ್ತಿಗಳ ಕುಳುವಾರು ಪಟ್ಟಿಗೆ ತಾಳೆ ಇರುತ್ತದೆ. ವಿವರವಾದ ಕುಳುವಾರು ಪಟ್ಟಿಯನ್ನು ಪ್ರತ್ಯೇಕವಾಗಿ ವರದಿಗೆ ಲಗತ್ತಿಸಲಾಗಿದೆ.

ಕರ್ನಾಟಕ ಸಹಕಾರ ಸಂಘಗಳ ನಿಯಮಾವಳಿಗಳ ನಿಯಮ 22 (ಎಫ್) ರನ್ವಯ ಸಂಸ್ಥೆಯ ಉಪ ನಿಯಮದಲ್ಲಿನ ಅವಕಾಶಗಳಂತೆ ಸವಕಳಿಯನ್ನು ಲೆಕ್ಕಾಚಾರ ಮಾಡಲಾಗಿರುತ್ತದೆ.

25.0 ಆಖೈರು ದಾಸ್ತಾನು ಹಾಗೂ ಸಿದ್ಧಪಡಿಸಿದ ದಾಸ್ತಾನು :

ದಿನಾಂಕ:31.03.2020 ರ ಅಂತ್ಯಕ್ಕೆ ಕಹಾಮ ಮತ್ತು ಘಟಕಗಳಲ್ಲಿ ಉಳಿದಿರುವ ಆಖೈರು ದಾಸ್ತಾನು ರೂ.402,88,98,646-35 ಇರುತ್ತದೆ. ವಿವರವಾದ ಪಟ್ಟಿಯು ಲಾಭ ನಷ್ಟ ತ:ಖ್ತೆಯ ಅನುಸೂಚಿ–10 ರಲ್ಲಿ ಲಗತ್ತಿಸಿದೆ. ಈ ಆಖೈರು ದಾಸ್ತಾನುಗಳನ್ನು ಕೇಂದ್ರ ಕಛೇರಿಯಲ್ಲಿ ಮತ್ತು ಘಟಕ ಹಾಗೂ ಮಾರಾಟ ಮಳಿಗೆಯಲ್ಲಿ ನೇಮಿಸಿರುವ ಪೂರ್ವಲೆಕ್ಕಪರಿಶೋಧಕರು ದಿನಾಂಕ: 31.03.2020 ರ ಅಂತ್ಯಕ್ಕೆ ಇದ್ದಂತೆ ಆಖೈರು ದಾಸ್ತಾನು ಝುಡ್ತಿ ಮಾಡಿ ದೃಢೀಕರಣ ಮಾಡಿರುತ್ತಾರೆ. ಘಟಕವಾರು ಆಖೈರು ದಾಸ್ತಾನು ತ:ಖ್ತೆಗಳು ಆಯಾ ಘಟಕಗಳ ವರದಿಗಳಲ್ಲಿ ವಿಶ್ಲೇಷಿಸಲ್ಪಟ್ಟಿರುತ್ತದೆ.

26.0 ವ್ಯಾಪಾರ ತ:ಖ್ತೆಗಳ ವಿಮರ್ಶೆ :

ಸಾಲು ಪ್ರಾರಂಭದಲ್ಲಿ ರೂ.289,68,15,475-75 ಗಳ ಆರಂಭ ದಾಸ್ತಾನು ಇದ್ದು, ರೂ.4255,41,36,529-41 ಗಳ ಖರೀದಿ ಮಾಡಿ, ರೂ.218,09,40,191-95 ಗಳ ವ್ಯಾಪಾರದ ಖರ್ಚಾಗಿದ್ದು, ರೂ.4695,27,25,212-09 ರಷ್ಟು ಮಾರಾಟ ಮಾಡಿ ರೂ.334,97,31,661-33 ರಷ್ಟು ವ್ಯಾಪಾರ ಲಾಭ ಗಳಿಸಿರುತ್ತದೆ. ಈ ಮೊಬಲಗಿನಲ್ಲಿ ಕಹಾಮ ಮತ್ತು ಘಟಕಗಳ ವ್ಯಾಪಾರ ಲಾಭ ಸೇರಿರುತ್ತದೆ.

ಹಿಂದಿನ ಸಾಲಿನ ವಹಿವಾಟು ರೂ.4389-35 ಕೋಟಿ ಇದ್ದು, ವರದಿ ಸಾಲಿನಲ್ಲಿ ರೂ.4695-27 ಕೋಟಿ ಇರುತ್ತದೆ. ಶೇಕಡವಾರು ಹೋಲಿಸಿದಾಗ ಇದು ಶೇಕಡ 6.97 ಹೆಚ್ಚಾಗಿರುತ್ತದೆ.

27.0 ಲಾಭ ನಷ್ಟ ತ:ಖ್ತೆಗಳ ವಿಮರ್ಶೆ:

ವರದಿ ಸಾಲಿನಲ್ಲಿ ಕಹಾಮವು ರೂ.124,51,92,421-31 ಗಳ ನಿವ್ವಳ ಲಾಭ ಗಳಿಸಿರುತ್ತದೆ. ಹಿಂದಿನ ಸಾಲಿನ ಲಾಭಕ್ಕೆ ಹೋಲಿಸಿದಲ್ಲಿ ರೂ.8,98,46,348-69 ರಷ್ಟು ಕಡಿಮೆ ಲಾಭ ಗಳಿಸಿದೆ. ಸಾಲಿನ ಅಂತ್ಯಕ್ಕೆ 2019–20 ನೇ ಸಾಲಿಗೆ ಪಾವತಿಸಬೇಕಾದ ಮೊತ್ತಗಳಿಗೆ ಕಾನೂನಿನಂತೆ ಮಾಡಬೇಕಾದ ಅವಕಾಶಗಳು ಮಾಡಲಾಗಿದೆ.

S.R. & M.R. ASSOCIATES CHARTERED ACCOUNTANTS BANGALORE

ವರದಿ ಸಾಲಿನಲ್ಲಿ ಆದಾಯ ತೆರಿಗೆಯ ಅವಕಾಶಕ್ಕೂ ಮೊದಲು ಸಂಸ್ಥೆಯು ರೂ.157.52 ಕೋಟಿ ಲಾಭ ಗಳಿಸಿರುತ್ತದೆ. ಈ ಲಾಭದಲ್ಲಿ ರೂ.8.58 ಲಕ್ಷಗಳು BMRCL ನಿಂದ ಭೂಸ್ವಾಧೀನದಿಂದ ಹೆಚ್ಚುವರಿ ಪರಿಹಾರದ ಮೊಬಲಗು ಸೇರಿರುತ್ತದೆ.

ವರದಿ ಸಾಲಿನ ಲಾಭವನ್ನು ಹಿಂದಿನ ಸಾಲಿನ ಲಾಭಕ್ಕೆ ಹೋಲಿಸಿದಾಗ ವರದಿ ಸಾಲಿನಲ್ಲಿ ಶೇಕಡ 6.73 ಕಡಿಮೆ ಆಗಿರುತ್ತದೆ.

28.0 ಪೂರ್ವ ಲೆಕ್ಕಪರಿಶೋಧನೆ ವ್ಯವಸ್ಥೆ ಬಗ್ಗೆ :-

2019-20 ನೇ ಸಾಲಿಗೆ ಸಂಬಂಧಿಸಿದಂತೆ ಕಹಾಮ ಕೇಂದ್ರ ಕಛೇರಿ ಮತ್ತು ಇತರೆ ಎಲ್ಲಾ ಘಟಕಗಳಿಗೆ ಪೂರ್ವ ಲೆಕ್ಕಪರಿಶೋಧಕರನ್ನು ನೇಮಕ ಮಾಡಿಕೊಳ್ಳಲಾಗಿದ್ದು ಸದರಿ ಪೂರ್ವ ಲೆಕ್ಕಪರಿಶೋಧಕರು ಪ್ರತಿ ಮಾಹೆ ವರದಿ ನೀಡುತ್ತಿದ್ದು, ಸದರಿ ವರದಿಯ ಅನುಸರಣೆಯಾಗುತ್ತಿರುವುದನ್ನು ಗಮನಿಸಲಾಗಿದೆ.

29.0 ಘಟಕವಾರು ವಿವರಗಳು:-

I. ಮದರ್ ಡೇರಿ, ಯಲಹಂಕ :

ಇದು ಕಹಾಮದ ಅಂಗ ಘಟಕವಾಗಿದ್ದು ದಿನಾಂಕ: 07.12.1984 ರಿಂದ ಕಾರ್ಯನಿರ್ವಹಿಸುತ್ತಿದೆ. ಇದರ ಕಾರ್ಯವ್ಯಾಪ್ತಿ ಬೆಂಗಳೂರಿನ ಯಶವಂತಪುರ, ಪೀಣ್ಯ, ಮೇಖ್ರಿ ಸರ್ಕಲ್‌ನಿಂದ ಉತ್ತರ ಬೆಂಗಳೂರು ಮತ್ತು ಇತರೆ ಸ್ಥಳಗಳಲ್ಲಿರುವ ಬಿ.ವಿ.ಬಿ ಶಾಪಿಗಳು ಬರುತ್ತವೆ. ಮದರ್ ಡೇರಿಗೆ ತನ್ನದೇ ಆದ ಹಾಲು ಸಂಗ್ರಹಣಾ ಪ್ರದೇಶವಿರುವುದಿಲ್ಲ. ಇತರೇ ಹಾಲು ಒಕ್ಕೂಟಗಳಿಂದ ಹಾಲು ಖರೀದಿ ಮಾಡಿ, ಹಾಲನ್ನು ಸಂಸ್ಕರಿಸಿ ಮಾರಾಟ ಮಾಡಲಾಗುತ್ತಿದೆ.

ಒಕ್ಕೂಟಗಳ ಮೂಲಕ ಹಾಲನ್ನು ಖರೀದಿಸಿ, ಸಂಸ್ಕರಿಸಿ ಮಾರಾಟ ಮಾಡುವುದು, ಒಕ್ಕೂಟಗಳ ಹೆಚ್ಚುವರಿ ಹಾಲನ್ನು ವಿವಿಧ ಹಾಲಿನ ಉತ್ಪನ್ನಗಳಾಗಿ ಪರಿವರ್ತಿಸುವುದು, ನಂದಿನಿ ಮತ್ತು ಅಮುಲ್ ಬ್ರಾಂಡ್ ಐಸ್ ಕ್ರೀಂ ಉತ್ಪಾದಿಸುವುದು, ಯು.ಹೆಚ್.ಟಿ ಹಾಲು ತಯಾರಿಸಿ ಮಾರಾಟ ಮಾಡುವುದು ಈ ಘಟಕದ ಮುಖ್ಯ ಉದ್ದೇಶವಾಗಿರುತ್ತದೆ.

ವರದಿ ಸಾಲಿನಲ್ಲಿ ಈ ಘಟಕವು ನಡೆಸಿದ ವ್ಯಾಪಾರ ವಹಿವಾಟಿನ ಸಂಕ್ಷಿಪ್ತ ವಿವರಗಳು ಈ ಕೆಳಕಂಡಂತಿವೆ :

ಕ್ರ. ಸಂ	ವರ್ಷ	ಹಾಲು ಖರೀದಿ (ಕೆ.ಜಿ.ಗಳಲ್ಲಿ)	ಹಾಲು ಪರಿವರ್ತನೆಗಾಗಿ (ಕೆ.ಜಿ.ಗಳಲ್ಲಿ)	ಉತ್ಪಾದನಾ ಸಾಮರ್ಥ್ಯದ ಬಳಕೆ ಶೇಕಡಾವಾರು
01	2017-18	16,87,92,112	6,53,27,215	92.00
02	2018-19	17,33,18,440	6,85,07,580	95.00
03	2019-20	17,71,42,940	6,20,01,710	93.00

S.R. & M.R. ASSOCIATES CHARTERED ACCOUNTANTS BANGALORE

ಈ ಘಟಕದ ಹಾಲು ಸಂಸ್ಕರಣಾ ಸಾಮರ್ಥ್ಯ ಪ್ರತಿದಿನ 7 ಲಕ್ಷ ಲೀಟರಿಗೆ ಇರುತ್ತದೆ. ಈ ಸಾಲಿಗೆ ಶೇ.93.00 ಹಾಲು ಸಂಸ್ಕರಣಾ ಸಾಮರ್ಥ್ಯ ಮಾತ್ರ ಬಳಕೆಯಾಗಿರುತ್ತದೆ.

ವರದಿ ಸಾಲಿನಲ್ಲಿ ಈ ಕೆಳಕಂಡಂತೆ ಹಾಲಿನ ಉತ್ಪನ್ನಗಳನ್ನು ತಯಾರಿಸಲಾಗಿದೆ.

1	ಬೆಣ್ಣೆ	30,42,050 ಕೆ.ಜಿ.
2	ತುಪ್ಪ	16,99,991 ಕೆ.ಜಿ.
3	ಸುವಾಸಿತ ಹಾಲು ಬಾಟಲಿಗಳಲ್ಲಿ	9,73,438 ಲೀಟರ್
4	ಪನ್ನೀರ್	9,22,716 ಕೆ.ಜಿ.
5	ಯೋಗರ್ಟ್	2,971.40 ಕೆ.ಜಿ.

(ಎ) ಹಾಲಿನ ಪುಡಿ ಉತ್ಪಾದನೆ :

ಮದರ್ ಡೇರಿ ಘಟಕವು ದಿನಂಪ್ರತಿ 30 ಟನ್ ಹಾಲಿನ ಪುಡಿ ಪರಿವರ್ತನಾ ಸಾಮರ್ಥ್ಯವನ್ನು ಹೊಂದಿದ್ದು ಪ್ರಸಕ್ತ ಸಾಲಿನಲ್ಲಿ 34,24,194 ಕೆ.ಜಿ ಎಸ್.ಎಂ.ಪಿ, 10,57,581 ಕೆ.ಜಿ ಡೈರಿ ವೈಟ್ನರ್ ಹಾಗೂ 31,95,380 ಕೆ.ಜಿ ಕೆನೆಭರಿತ ಹಾಲಿನ ಪುಡಿಯನ್ನು ಉತ್ಪಾದಿಸಿರುತ್ತದೆ.

ಮೂರು ವರ್ಷಗಳ ಹಾಲಿನ ಪುಡಿ ಉತ್ಪಾದನೆಯ ತುಲನಾತ್ಮಕ ವಿವರ (SMP, DW AND WMP)

ಕ್ರ.ಸಂ	ವರ್ಷ	ಹಾಲಿನ ಪುಡಿ ಉತ್ಪಾದನೆ ಕೆ.ಜಿ.ಗಳಲ್ಲಿ
01	2017-18	85,25,944
02	2018-19	77,72,086
03	2019-20	76,77,155

(ಬಿ) ಯು.ಹೆಚ್.ಟಿ. ಘಟಕ :

ದಿನಂಪ್ರತಿ 32,000 ಲೀಟರ್ ಸಾಮರ್ಥ್ಯದ ಯು.ಹೆಚ್.ಟಿ. ಘಟಕವನ್ನು ಸ್ಥಾಪಿಸಿದ್ದು, ವರದಿ ಸಾಲಿನಲ್ಲಿ ವಿವಿದ ನಮೂನೆಗಳ 44.32 ಲಕ್ಷ ಲೀಟರ್ ಹಾಲನ್ನು 160 ಮತ್ತು 200 ಮಿಲಿ ಲೀಟರ್ ಟೆಟ್ರಾ ಪ್ಯಾಕ್‌ಗಳಲ್ಲಿ ಉತ್ಪಾದಿಸಲಾಗಿದೆ. ವರದಿ ಸಾಲಿನಲ್ಲಿ ಉತ್ಪಾದನಾ ಸಾಮರ್ಥ್ಯ ಬಳಕೆ ಶೇಕಡ 38 ಆಗಿರುತ್ತದೆ.

(ಸಿ) ಐಸ್ ಕ್ರೀಂ ಉತ್ಪಾದನೆ :

ಮದರ್ ಡೇರಿಯಲ್ಲಿ ಐಸ್ ಕ್ರೀಂ ಉತ್ಪಾದನಾ ಸಾಮರ್ಥ್ಯ ದಿನಂಪ್ರತಿ 10,000 ಲೀಟರ್ ಇರುತ್ತದೆ. ವರದಿ ಸಾಲಿನಲ್ಲಿ ದಿನಂಪ್ರತಿ 6,753 ಲೀಟರ್ ಉತ್ಪಾದಿಸಲಾಗುತ್ತಿದೆ. ಉತ್ಪಾದನೆಯು ಹಿಂದಿನ ವರ್ಷಗಳಿಗಿಂತ ಕಡಿಮೆಯಾಗಿರುವುದಕ್ಕೆ ವಿವರಣೆ ಒದಗಿಸಿರುವುದಿಲ್ಲ.

ಮೂರು ವರ್ಷಗಳ ಐಸ್ ಕ್ರೀಂ ಉತ್ಪಾದನೆಯ ತುಲನಾತ್ಮಕ ವಿವರ :

ಕ್ರ.ಸಂ	ವರ್ಷ	ಉತ್ಪಾದನೆ (ಲೀಟರ್ ಗಳಲ್ಲಿ)	ಅಮುಲ್ ಐಸ್ ಕ್ರೀಂ (ಲೀಟರ್ ಗಳಲ್ಲಿ)	ನಂದಿನಿ ಐಸ್ ಕ್ರೀಂ (ಲೀಟರ್ ಗಳಲ್ಲಿ)

S.R. & M.R. ASSOCIATES CHARTERED ACCOUNTANTS BANGALORE

01	2017-18	36,96,244	15,10,356	21,85,868
02	2018-19	31,50,801	11,10,124	20,40,677
03	2019-20	24,71,524	9,45,043	15,26,481

(ಡಿ) ವ್ಯಾಪಾರ ವಹಿವಾಟಿನ ಬಗ್ಗೆ :-

ವರದಿ ಸಾಲಿನಲ್ಲಿ ರೂ. 73,845-64 ಲಕ್ಷಗಳಷ್ಟು ವ್ಯಾಪಾರ ವಹಿವಾಟು ಜರುಗಿದ್ದು, ರೂ. 7,470-05 ಲಕ್ಷಗಳಷ್ಟು ವ್ಯಾಪಾರ ಲಾಭ ಗಳಿಸಿದ್ದು ಇದು ವ್ಯಾಪಾರ ವಹಿವಾಟಿನ ಶೇಕಡ 10.12 ಆಗಿರುತ್ತದೆ.

(ಇ) ಲಾಭ ನಷ್ಟದ ತ:ಖ್ತೆ :

ರೂ. 7,470-05 ಲಕ್ಷಗಳ ವ್ಯಾಪಾರ ಲಾಭದಲ್ಲಿ, ಆಡಳಿತ ವೆಚ್ಚ, ತೆರಿಗೆ, ಮಾರಾಟ ಮತ್ತು ವಿತರಣಾ ವೆಚ್ಚ, ಬಡ್ಡಿ ಪಾವತಿ, ಸವಕಳಿ ಇವುಗಳನ್ನು ಕಳೆದು 2019–20 ನೇ ಸಾಲಿಗೆ ರೂ. 4,912–50 ಲಕ್ಷಗಳಷ್ಟು ನಿವ್ವಳ ಲಾಭ ಗಳಿಸಿದೆ ಇದು ಹಿಂದಿನ ಸಾಲಿನ ಲಾಭಕ್ಕಿಂತ ಶೇಕಡ 12.29 ರಷ್ಟು ಹೆಚ್ಚಳವಾಗಿರುತ್ತದೆ.

<u>ಲೆಕ್ಕಪರಿಶೋಧನಾ ವೇಳೆಯಲ್ಲಿ ಗಮನಿಸಿದ ನ್ಯೂನ್ಯತೆಗಳು :</u>

(ಎ) ಹಲವಾರು ರಿಟೇಲರ್ಸ್/ಕನ್ಸೇಷನರ್ಸ್‌ಗಳಿಂದ ರೂ.3,71,58,159-06 ಬರಬೇಕಾದ ಬಾಕಿ ಇದ್ದು, ಮತ್ತು ಐಸ್ ಕ್ರೀಂ ವಿತರಕರಿಂದ ಬರಬೇಕಾದ ಬಾಕಿ ಮೊತ್ತ ರೂ.24,33,184-27 ಗಳಿದ್ದು, ಇವುಗಳು ಚಾಲ್ತಿ ಖಾತೆಗಳಾಗಿದ್ದು, ಮುಂದಿನ ಸಾಲಿನಲ್ಲಿ ಬಹುತೇಕ ಬಾಕಿಗಳು ವಸೂಲಾತಿಯಾಗಿರುವುದನ್ನು ಗಮನಿಸಿದೆ ಹಾಗೂ ಉಳಿದ ಬಾಕಿಗಳನ್ನು ವಸೂಲಾತಿಗೆ ಕ್ರಮವಿಡುವುದು.

(ಬಿ) 2014–15 ನೇ ಸಾಲಿನಲ್ಲಿ ಮದರ್ ಡೇರಿ ಡಿಪೋನಲ್ಲಿ ಕಂಡುಬಂದ ನ್ಯೂನ್ಯತೆಯ ಬಗ್ಗೆ 2014–15 ನೇ ಸಾಲಿನ ಲೆಕ್ಕಪರಿಶೋಧನಾ ವರದಿಯಲ್ಲಿ ವಿಶ್ಲೇಷಿಸಿದ್ದು ಬಾಕಿ ಇರುವ ರೂ.61,56,337-06 ಮೊಬಲಗನ್ನು ಸಂಬಂಧಿಸಿದವರಿಂದ ಕೂಡಲೇ ವಸೂಲು ಮಾಡಲು ಕ್ರಮವಿಡುವುದು.

(ಸಿ) ವಿವಿಧ ಹಾಲು ಖರೀದಿದಾರ ಸಾಲ ಸಂಸ್ಥೆಗಳು, ರೀಟೇಲರ್ಸ್, ಶಾಪಿಗಳು ಮತ್ತು ವಿತರಕರುಗಳಿಂದ ಪಡೆಯಲಾದ ಭದ್ರತಾ ಠೇವಣಿಗಳಿಗಿಂತ ಹೆಚ್ಚಿನ ಮೊತ್ತದ ಸಾಲ ನೀಡಲಾಗಿರುವುದನ್ನು ಗಮನಿಸಿದ್ದು, ಭದ್ರತಾ ಠೇವಣಿಗಳಿಗಿಂತ ಹೆಚ್ಚಿನ ಮೊತ್ತದ ಸಾಲವನ್ನು ನೀಡದಂತೆ ಕ್ರಮವಿಡುವುದು.

II. <u>ನಂದಿನಿ ಹೈಟೆಕ್ ಪ್ರಾಡಕ್ಟ್ ಪ್ಲಾಂಟ್ ಶೆಟ್ಟಿಹಳ್ಳಿ, ಚನ್ನರಾಯಪಟ್ಟಣ :</u>

ಹಾಲನ್ನು ಒಕ್ಕೂಟಗಳಿಂದ ಖರೀದಿಸಿ/ಸ್ವೀಕರಿಸಿ ಹಾಲಿನ ಪುಡಿ, ಬೆಣ್ಣೆ, ತುಪ್ಪವನ್ನಾಗಿ ಪರಿವರ್ತನೆಗೊಳಿಸಿ ಮಾರಾಟ ಮಾಡುವುದು ಹಾಗೂ ಯು.ಹೆಚ್.ಟಿ ಹಾಲನ್ನು ಉತ್ಪಾದನೆ ಮಾಡಿ ಮಾರಾಟ ಮಾಡುವುದು, ಹಾಲು ಒಕ್ಕೂಟಗಳ ಪರವಾಗಿ ಕೆನೆಭರಿತ ಹಾಲಿನ ಪುಡಿಯನ್ನು ಕೋ–ಪ್ಯಾಕಿಂಗ್ ಮಾಡಿಕೊಡುವುದು ಈ ಘಟಕದ ಮುಖ್ಯ ಉದ್ದೇಶವಾಗಿರುತ್ತದೆ.

S.R. & M.R. ASSOCIATES CHARTERED ACCOUNTANTS BANGALORE

ಘಟಕವು ಚನ್ನರಾಯಪಟ್ಟಣ ತಾಲ್ಲೂಕು ಶೆಟ್ಟಿಹಳ್ಳಿ ಗ್ರಾಮದಲ್ಲಿ 22.3 + 9.03 ಎಕರೆ ಜಮೀನು ಹೊಂದಿದ್ದು, ಕಹಾಮ ವ್ಯವಸ್ಥಾಪಕ ನಿರ್ದೇಶಕರ ಹೆಸರಿನಲ್ಲಿ ನೋಂದಣಿಯಾಗಿ ಈ ಜಾಗದಲ್ಲಿ ಸ್ಥಾವರವನ್ನು ನಿರ್ಮಿಸಲಾಗಿದೆ.

ಮೇಲಿನ ಉದ್ದೇಶಿತ ಕಾರ್ಯವನ್ನು ನಿರ್ವಹಿಸಲು, ದಿನವೊಂದಕ್ಕೆ 60 ಮೆ:ಟನ್ ಹಾಲಿನ ಪುಡಿ, 20 ಮೆಟ್ರಿಕ್ ಟನ್ ಬೆಣ್ಣೆ ಹಾಗೂ 4 ಟನ್ ತುಪ್ಪ ತಯಾರಿಸುವ ಸಾಮರ್ಥ್ಯ ಹೊಂದಿದ ಒಂದು ಘಟಕ ಹೊಂದಿರುತ್ತದೆ.

ಮೇಲಿನ ಸ್ಥಾವರಗಳನ್ನು ಸ್ಥಾಪಿಸಲು ರಾಷ್ಟ್ರೀಯ ಹೈನು ಅಭಿವೃದ್ಧಿ ಮಂಡಳಿಯಿಂದ ಎರಡು ಬಾರಿ ಸಾಲ ಪಡೆದಿದ್ದು, ದಿನಾಂಕ: 31.03.2020 ಕ್ಕೆ ಕೆಳಕಂಡಂತೆ ಬಾಕಿ ಇರುತ್ತದೆ.

1) ರೂ.40,91,125-00 (ಹಳೆಯ ಪ್ಲಾಂಟ್)
2) ರೂ.28,31,95,900-00 (ಹೊಸ ಪ್ಲಾಂಟ್)

ಘಟಕದ ಲಾಭ ನಷ್ಟ ಲೆಕ್ಕದ ವಿವರಣೆಯಂತೆ 2019–20 ನೇ ಸಾಲಿನಲ್ಲಿ ರೂ. 79,27,27,134-28 ರಷ್ಟು ಹಾಲು ಮತ್ತು ಸಂಸ್ಕರಣೆಗೆ ಬೇಕಾದ ಇತರೆ ವಸ್ತುಗಳನ್ನು ಖರೀದಿಸಿ ರೂ. 96,30,74,868-90 ರಷ್ಟು ಹಾಲಿನ ಉತ್ಪನ್ನ ಮತ್ತು ಇತರೆ ಮಾರಾಟ ಮಾಡಲಾಗಿರುತ್ತದೆ. ಒಟ್ಟು ಮಾರಾಟಕ್ಕೆ ಹಾಲು ಪರಿವರ್ತನೆಯಿಂದ ಮತ್ತು ಸ್ಟೋರೇಜ್‌ಗಳಿಂದ ಬಂದ ಆದಾಯ ರೂ. 46,30,32,360-51 ಸೇರಿ ವರದಿ ಸಾಲಿಗೆ ಘಟಕವು ರೂ. 25,22,02,026–57 ವ್ಯಾಪಾರ ಲಾಭ ಗಳಿಸಿರುತ್ತದೆ. ಲಾಭ ನಷ್ಟದ ಖಾತೆಯಲ್ಲಿ ವಿವರಿಸಿರುವಂತೆ ಮೇಲ್ಕಂಡ ವ್ಯಾಪಾರ ಲಾಭದಲ್ಲಿ ಖರ್ಚುಗಳನ್ನು ಕಳೆದು ಘಟಕವು ರೂ.7,94,79,389–48 ನಿವ್ವಳ ಲಾಭ ಗಳಿಸಿರುತ್ತದೆ.

ಲೆಕ್ಕ ಪರಿಶೋಧನೆಗೆ ಒದಗಿಸಿರುವ ಮೆಟೆರಿಯಲ್ ಬ್ಯಾಲೆನ್ಸ್ ಪ್ರಕಾರ ಈ ಸಾಲಿನಲ್ಲಿ ಜಿಡ್ಡು ಪದಾರ್ಥ ಮತ್ತು ಜಿಡ್ಡೇತರ ಘನ ಪದಾರ್ಥ ಉತ್ಪಾದನಾ ನಷ್ಟವು ನಿಗದಿಪಡಿಸಿರುವ ಮಿತಿಯಲ್ಲಿ ಇರುವುದನ್ನು ಗಮನಿಸಿದ್ದು, ಈ ನಷ್ಟವನ್ನು ಘಟಕವಾರು ಲೆಕ್ಕಿಸಲು ಸೂಚಿಸಿದೆ.

ಲೆಕ್ಕಪರಿಶೋಧನಾ ವೇಳೆಯಲ್ಲಿ ಘಟಕದ ನಿರ್ವಹಣೆಯನ್ನು ಪರಿಶೀಲಿಸಿದ್ದು ಕೆಳಕಂಡ ಮುಖ್ಯ ನ್ಯೂನತೆಗಳು ಗಮನಿಸಿದೆ.

1. ಘಟಕವು ರಕ್ಷಣಾ ಇಲಾಖೆಗೆ ಸರಬರಾಜು ಮಾಡಿದ ತುಪ್ಪದ ಬಾಕಿಯ ಬಾಬ್ತು ರೂ.3,06,27,777–26 ಹಾಗೂ ಒಕ್ಕೂಟಗಳಿಂದ ಬರಬೇಕಾದ ಬಾಕಿ ರೂ.2,56,26,575–16 ಆಗಿಂದಾಗ್ಗೆ ವಸೂಲಿ ಮಾಡಲು ತಿಳಿಸಿದೆ.
2. ಎನ್.ಡಿ.ಡಿ.ಬಿ ರವರು ಖರ್ಚು ಮಾಡಿರುವ ತಾಂತ್ರಿಕ ಸಲಹಾ ವೆಚ್ಚ ವರ್ಷಾಂತ್ಯಕ್ಕೆ ರೂ.1,04,92,729–00 ಗಳನ್ನು ಪ್ರಸಕ್ತ ಸಾಲಿನಲ್ಲಿ ಎನ್.ಡಿ.ಡಿ.ಬಿ ಯವರ ಮುಂಗಡದೊಂದಿಗೆ ಲೆಕ್ಕ ಸಮನ್ವಯ ಮಾಡಿಕೊಂಡು ದೃಢೀಕರಣ ಪಡೆಯಲು ಸೂಚಿಸಲಾಗಿದೆ.
3. ಘಟಕದಲ್ಲಿ ಉತ್ಪಾದಿಸಿದ ಸಿದ್ದ ಉತ್ಪನ್ನಗಳ ಮಾಸಿಕ ಪಟ್ಟಿಯನ್ನು ಲೆಕ್ಕ ಪರಿಶೋಧನೆ ಸಮಯದಲ್ಲಿ ಒದಗಿಸಲಾಗಿದ್ದು, ಈ ವಿವರಗಳನ್ನು ಪರಿಶೀಲಿಸಿದಾಗ, ಒಟ್ಟಾರೆ ಜಿಡ್ಡು ಹಾಗೂ ಜಿಡ್ಡೇತರ ಘನ ಪದಾರ್ಥ ವಾರ್ಷಿಕವಾಗಿ ತಾಳೆ ಹೊಂದಿರುತ್ತದೆ. ಆದರೆ, ಪ್ರತಿ ಉತ್ಪನ್ನಗಳ ಪರಿಮಾಣಗಳನ್ನು ಪರಿಶೀಲಿಸಿದಾಗ ದಾಸ್ತಾನುಗಳು ಮಾಸಿಕವಾಗಿ ತಾಳೆಯಾಗುತ್ತಿಲ್ಲ. ಒಟ್ಟು

S.R. & M.K. ASSOCIATES CHARTERED ACCOUNTANTS BANGALORE

ಉತ್ಪಾದನೆ ಮತ್ತು ಉತ್ಪನ್ನಗಳ ಉತ್ಪಾದನಾ ಸಂಸ್ಕರಣಾ ನಷ್ಟವನ್ನು ಆಯಾ ಪದಾರ್ಥಗಳಿಗೆ ಅನುಗುಣವಾಗಿ ಪ್ರತ್ಯೇಕಿಸಿರುವುದಿಲ್ಲ. ಮುಂದಿನ ಸಾಲಿನಿಂದ ಮಾಸಿಕವಾಗಿ ಹಾಗೂ ಉತ್ಪನ್ನವಾರು ಲೆಕ್ಕಿಸಲು ಕ್ರಮವಿಡುವುದು.

III. ನಂದಿನಿ ಹಾಲು ಉತ್ಪನ್ನ ಘಟಕ, ಬೆಂಗಳೂರು :

ಘಟಕವು ದಿನಾಂಕ: 01.04.1973 ರಲ್ಲಿ ಭಾರತ ಸರ್ಕಾರದ ನೆರವಿನೊಂದಿಗೆ ಮಿಲ್ಕೋನ್ ಪ್ರಾಜೆಕ್ಟ್ ಎಂಬ ಹೆಸರಿನಲ್ಲಿ ಸ್ಥಾಪಿಸಲ್ಪಟ್ಟಿದ್ದು, ದಿನಾಂಕ: 01.09.1988 ರಿಂದ ಕಹಾಮದ ಘಟಕವಾಗಿ ಕಾರ್ಯನಿರ್ವಹಿಸುತ್ತಿದೆ.

ಉತ್ಪಾದನೆಗೆ ಬೇಕಾದ ಹಾಲು, ತುಪ್ಪ ಹಾಗೂ ಎಸ್.ಎಂ.ಪಿ ಗಳನ್ನು ವಿವಿಧ ಹಾಲು ಒಕ್ಕೂಟಗಳಿಂದ ಮತ್ತು ಕಹಾಮದ ಘಟಕಗಳಿಂದ ಹಾಗೂ ಇತರೆ ಕಚ್ಚಾ ಮಾಲುಗಳನ್ನು ಇತರೆ ಮೂಲಗಳಿಂದ, ಟೆಂಡರ್ ಮೂಲಕ ಹಾಗೂ ಒಂದು ಲಕ್ಷ ಮಿತಿಗೊಳಪಟ್ಟು ಸ್ಥಳೀಯವಾಗಿ ಖರೀದಿಸಿ ಸಿಹಿ ಉತ್ಪನ್ನಗಳನ್ನು ತಯಾರಿಸಲಾಗುತ್ತಿದೆ. ನಂದಿನಿ ಹಾಲು ಉತ್ಪನ್ನ ಘಟಕವು ಬೆಂಗಳೂರು ಮಾರಾಟ ಮಳಿಗೆ ಇದರ ಬೇಡಿಕೆಗೆ ಅನುಗುಣವಾಗಿ ನಂದಿನಿ ಉತ್ಪನ್ನಗಳಾದ ಪೇಡಾ, ಮೈಸೂರು ಪಾಕ್, ಭರ್ಫಿ, ರಸಗುಲ್ಲಾ, ಜಾಮೂನ್‌ಮಿಕ್ಸ್, ಬೇಸಿನ್‌ಲಾಡು, ಬಾದಾಮ್ ಪೌಡರ್, ಖೋವಾ ಮುಂತಾದ ಉತ್ಪನ್ನಗಳನ್ನು ತಯಾರಿಸಿ ಪೂರೈಕೆ ಮಾಡುವುದಾಗಿರುತ್ತದೆ.

ಘಟಕದ ಸ್ಥಾಪನೆ ಹಾಗೂ ನವೀಕರಣಕ್ಕಾಗಿ ರಾಜ್ಯ ಸರ್ಕಾರದ ಅನುದಾನದಿಂದ ಖರೀದಿಸಿದ ಆಸ್ತಿಗಳ ಮೊತ್ತ ದಿನಾಂಕ: 31.03.2020 ಕ್ಕೆ ರೂ.6,83,78,113-80 (ಸವಕಳಿ ಕಳೆದು)

ವರದಿ ಸಾಲಿನ ಪ್ರಾರಂಭದಲ್ಲಿ ರೂ.2,67,13,291-88 ಗಳ ಪ್ರಾರಂಭಿಕ ದಾಸ್ತಾನು ಇದ್ದು, ಈ ಸಾಲಿನಲ್ಲಿ ರೂ.30,07,48,284-36 ಗಳಷ್ಟು ಖರೀದಿ ಮಾಡಿ, ರೂ.9,61,51,693-45 ಗಳ ಖರ್ಚು ಮಾಡಿ ರೂ.52,32,89,837-36 ಗಳಷ್ಟು ಮಾರಾಟ ಮಾಡಿ ರೂ.12,67,59,699-12 ಗಳ ವ್ಯಾಪಾರ ಲಾಭ ಗಳಿಸಿರುತ್ತದೆ. ಸಾಲಾಂತ್ಯಕ್ಕೆ ರೂ.2,70,83,131-45 ಗಳ ಆಖೈರು ದಾಸ್ತಾನು ಇದ್ದು, ಇದನ್ನು ಪೂರ್ವ ಲೆಕ್ಕಪರಿಶೋಧಕರು ಮತ್ತು ಘಟಕದ ಸಿಬ್ಬಂದಿ ಪರಿಶೀಲಿಸಿರುತ್ತಾರೆ. 2019–20 ನೇ ಸಾಲಿನಲ್ಲಿ ರೂ.41,23,931-18 ಗಳ ಇತರೆ ಆದಾಯ ಬಂದಿದ್ದು, ರೂ.2,35,61,265-99 ಗಳ ಖರ್ಚು, ಜಾತಾ 2019–20 ಸಾಲಿಗೆ ರೂ.10,73,22,364-31 ಗಳ ನಿವ್ವಳ ಲಾಭ ಗಳಿಸಿರುತ್ತದೆ.

IV. ಬಳ್ಳಾರಿ ಐಸ್ ಕ್ರೀಂ ಘಟಕ :

ಈ ಘಟಕ ದಿನಾಂಕ: 28.9.2013 ರಿಂದ ಕಾರ್ಯಾರಂಭವಾಗಿದ್ದು, ಉತ್ತರ ಕರ್ನಾಟಕದ ಪ್ರಮುಖ ನಗರಗಳಿಗೆ ಗುಣಮಟ್ಟದ ನಂದಿನಿ ಬ್ರಾಂಡ್‌ನ ವಿವಿಧ ಮಾದರಿಯ ಐಸ್ ಕ್ರೀಂ ಉತ್ಪಾದಿಸಿ, ಸಗಟು ಮಾರಾಟಗಾರರ ಮೂಲಕ ಮಾರಾಟ ಮಾಡುವುದು ಘಟಕದ ಉದ್ದೇಶವಾಗಿರುತ್ತದೆ. ಹಾಗೂ GCMMF ಗುಜರಾತ್ ಸಂಸ್ಥೆಗೆ ದಿನಂಪ್ರತಿ 4000 ಲೀಟರ್ AMUL ಬ್ರಾಂಡ್‌ನ ಐಸ್ ಕ್ರೀಂ ತಯಾರಿಸಿ ನೀಡಲಾಗುತ್ತಿದೆ.

ಘಟಕದ ಉತ್ಪಾದನೆ ಸಾಮರ್ಥ್ಯ 10,000 ಲೀಟರ್ ಇದ್ದು, 2019–20 ನೇ ಸಾಲಿನಲ್ಲಿ 17,87,471 ಲೀಟರ್ ಉತ್ಪಾದನೆ ಮಾಡಿ, 17,80,642 ಲೀಟರ್‌ಗಳ ಮಾರಾಟ ಮಾಡಿರುತ್ತದೆ. ಈ ಉತ್ಪಾದನೆಯಲ್ಲಿ GCMMF ಗೆ ನೀಡಬೇಕಾದ ಐಸ್‌ಕ್ರೀಂ 14,13,174 ಲೀಟರ್ ಹಾಗೂ ಕಹಾಮ

S.R. & M.R. ASSOCIATES CHARTERED ACCOUNTANTS BANGALORE

ಮಾರಾಟ 3,67,468 ಲೀಟರ್ ಇರುತ್ತದೆ. ಇದು ಘಟಕದ ಸಾಮರ್ಥ್ಯಕ್ಕಿಂತ ತೀರ ಕಡಿಮೆ ಸಾಮರ್ಥ್ಯ ಬಳಕೆಯಾಗಿರುತ್ತದೆ. ವರದಿ ಸಾಲಿನಲ್ಲಿ ಸರಾಸರಿ ಕೇವಲ 5,747 (17,87,471/ 311 Days) ಲೀಟರ್ ಮಾತ್ರ ಉತ್ಪಾದನೆಯಾಗಿರುತ್ತದೆ. ಉತ್ಪಾದನೆಯು ಮಾರಾಟದ ಮೇಲೆ ಅವಲಂಬಿತವಾಗಿರುವುದರಿಂದ GCMMF ಗುಜರಾತ್ ಇವರೊಡನಿರುವ M.O.U ನಂತೆ ಪ್ರತಿನಿತ್ಯ 4000 ಲೀಟರ್ ಐಸ್‌ಕ್ರೀಂ ಅನ್ನು GCMMF ಇವರಿಗೆ ಮಾರಾಟ ಮಾಡಲು ಅವಕಾಶವಿರುವುದರಿಂದ ಎಲ್ಲಾ ಅಗತ್ಯ ಕ್ರಮಗಳ ಅವಶ್ಯಕತೆ ಇರುತ್ತದೆ.

ವರದಿ ಸಾಲಿನಲ್ಲಿ ಘಟಕವು ರೂ.12,12,08,039-00 ರಷ್ಟು ಕಚ್ಚಾ ಮಾಲು ಮತ್ತು ಪ್ಯಾಕಿಂಗ್ ಸಾಮಗ್ರಿಗಳನ್ನು ಖರೀದಿಸಿ ರೂ.15,44,98,977-00 ರಷ್ಟು ಐಸ್‌ಕ್ರೀಂ ಮಾರಾಟ ಮಾಡಿ ರೂ.1,81,14,886-00 ಗಳ ವ್ಯಾಪಾರ ಲಾಭ ಗಳಿಸಿರುತ್ತದೆ. ಲಾಭ ನಷ್ಟದ ಖಾತೆಯಂತೆ ವಿವಿಧ ಖರ್ಚುಗಳನ್ನು ಕಳೆದು ಈ ಸಾಲಿನಲ್ಲಿ ರೂ.12,71,129-00 ಗಳ ಲಾಭ ಗಳಿಸಿರುತ್ತದೆ.

ಘಟಕದ ನ್ಯೂನ್ಯತೆಗಳು:

1. ಘಟಕದ ಸಾಮರ್ಥ್ಯವನ್ನು ವರದಿ ಸಾಲಿನಲ್ಲಿ ಶೇ. 57.47 ರಷ್ಟು ಮಾತ್ರ ಬಳಕೆ ಮಾಡಿದ್ದು, ಉತ್ಪಾದನೆಗೆ ಬೇಕಾದ ಎಲ್ಲಾ ಸೌಕರ್ಯಗಳು ಇಲ್ಲಿ ಲಭ್ಯವಿದ್ದು, ಸಾಮಾರ್ಥ್ಯವನ್ನು ಪೂರ್ಣ ಪ್ರಮಾಣದಲ್ಲಿ ಬಳಸಿಕೊಳ್ಳಲು ಸೂಚಿಸಿದೆ.
2. ನಂದಿನಿ ಐಸ್ ಕ್ರೀಂ ಮಾರಾಟದ ಅಭಿವೃದ್ಧಿಗಾಗಿ 3 ಜನ ಮಾರುಕಟ್ಟೆ ಸಮಾಲೋಚಕರನ್ನು ಕೇಂದ್ರ ಕಛೇರಿ ಮಾರುಕಟ್ಟೆ ವಿಭಾಗದಿಂದ ನೇಮಕ ಮಾಡಲಾಗಿದ್ದು, ಸದರಿ ಸಮಾಲೋಚಕರಿಗೆ ಘಟಕದ ಸಾಮರ್ಥ್ಯ ಮತ್ತು ಮಾರುಕಟ್ಟೆಗನುಗುಣವಾಗಿ ಗರಿಷ್ಟ ಗುರಿಮಿತಿಯನ್ನು ನೀಡಿ ಅದನ್ನು ಸಾಧಿಸಲು ಕ್ರಮವಿಡುವುದು.
3. ಘಟಕವು ಮಾರಾಟ ಏಜೆಂಟರುಗಳನ್ನು ರದ್ದುಗೊಳಿಸಿದಾಗ ಕೂಡಲೇ ಹೊಸ ಏಜೆಂಟರನ್ನು ನೇಮಿಸಿ ಮಾರಾಟಕ್ಕೆ ಕ್ರಮವಿಡುವುದು ಅವಶ್ಯಕವಿದ್ದು ಆದರೆ, ಶ್ರೀ ವಿನಾಯಕ ವೀರಭದ್ರೇಶ್ವರ ಏಜನ್ಸೀಸ್ (ಎನ್.ಮೃತ್ಯುಂಜಯ) ಇವರನ್ನು ರದ್ದುಗೊಳಿಸಿದ ನಂತರ ಹೊಸ ಏಜೆನ್ಸಿ ನೀಡುವಲ್ಲಿ ತುಂಬಾ ವಿಳಂಬ ಮಾಡಿದ್ದು, ಇದರಿಂದ ಐಸ್ ಕ್ರೀಂ ಮಾರಾಟದ ಮೇಲೆ ವ್ಯತಿರಿಕ್ತ ಪರಿಣಾಮ ಬೀರುವುದರಿಂದ ಈ ರೀತಿಯಾಗದಂತೆ ಘಟಕವು ಕ್ರಮವಿಡುವುದು.
4. ಲೆಕ್ಕಪರಿಶೋಧನೆಗೆಂದು ಘಟಕಕ್ಕೆ ಭೇಟಿ ನೀಡಿದ ಸಮಯದಲ್ಲಿ, ಘಟಕದಲ್ಲಿ ಮುಂಜಾಗ್ರತ ಕ್ರಮವಾಗಿ ಬೆಂಕಿ ನಂದಿಸುವ ಉಪಕರಣಗಳು ಸಾಕಷ್ಟು ಪ್ರಮಾಣದಲ್ಲಿ ಇಲ್ಲದಿರುವುದು ಕಂಡುಬಂದಿದ್ದು ಕಾರ್ಖಾನೆ ಕಾಯ್ದೆಯ ಪ್ರಕಾರ ಅವಶ್ಯಕವಿರುವ ಎಲ್ಲಾ ಮುಂಜಾಗ್ರತಾ ಕ್ರಮಗಳನ್ನು ಘಟಕದ ಮುಖ್ಯಸ್ಥರು ಪಾಲಿಸಲು ಸೂಚಿಸಿದೆ.

V. ನಂದಿನಿ ಹೈಟೆಕ್ ಮೆಗಾ ಪೌಡರ್ ಪ್ಲಾಂಟ್-ಕನ್ನಮಂಗಲ, ರಾಮನಗರ: (ನೂತನ ಘಟಕ)

ಈ ಘಟಕ ಸ್ಥಾಪನೆಗಾಗಿ ಕನ್ನಮಂಗಲ ಗ್ರಾಮದ ಸ.ನಂ. 148/ಪಿ ಮತ್ತು 149ರಲ್ಲಿ 20 ಎಕರೆ ಜಮೀನಿನಲ್ಲಿ 500 ಮೆ.ಟನ್ ಸಾಮರ್ಥ್ಯದ ಪಶು ಆಹಾರ ಘಟಕ ನಿರ್ಮಿಸಲು ಶಿಫಾರಸ್ಸು ಮಾಡಲಾಗಿತ್ತು. ನಂತರ ಸರ್ಕಾರದ ಪೂರ್ವಾನುಮೋದನೆಯಂತೆ ಜಮೀನಿನ ಕಿಮ್ಮತ್ತು, ಭೂ ಪರಿವರ್ತನಾ ಶುಲ್ಕ ಮತ್ತು ಇತರೆ ಶುಲ್ಕ ಸೇರಿ ಒಟ್ಟು ರೂ. 71,13,730/-ನ್ನು 2012ರಂದು ಪಾವತಿಸಲಾಗಿದೆ. ಮುಂದುವರೆದು ಸದರಿ ಜಮೀನಿನಲ್ಲಿ ಹಿಂದೆ ಉದ್ದೇಶಿಸಿದ್ದ ಪಶು ಆಹಾರ ಘಟಕದ ಬದಲಿಗೆ ಸರ್ಕಾರದ ಯಶಸ್ವಿ ಯೋಜನೆಯಾದ "ಕ್ಷೀರಭಾಗ್ಯ ಯೋಜನೆ"ಯಡಿಯಲ್ಲಿ ಹಾಲಿನಪುಡಿ ಒದಗಿಸುವ ಉದ್ದೇಶದಿಂದ 100 ಮೆ:ಟನ್ ಸಾಮರ್ಥ್ಯದ ಹಾಲಿನಪುಡಿ

S.R. & M.R. ASSOCIATES CHARTERED ACCOUNTANTS BANGALORE

ತಯಾರಿಸುವ ಘಟಕ ಸ್ಥಾಪನೆಗೆ 2017 ರಲ್ಲಿ ಅನುಮೋದನೆ ನೀಡಲಾಗಿತ್ತು. ಈ 20 ಎಕರೆ ಜಮೀನು ಕರ್ನಾಟಕ ಹಾಲು ಮಂಡಳಿಯ ವ್ಯವಸ್ಥಾಪಕ ನಿರ್ದೇಶಕರ ಹೆಸರಿನಲ್ಲಿ ನೋಂದಣಿಯಾಗಿರುತ್ತದೆ ಮತ್ತು ವರದಿ ಸಾಲಿಗೆ 2 ಲಕ್ಷ ಕಂದಾಯವನ್ನು ರಾಂಪುರ ಗ್ರಾಮ ಪಂಚಾಯತಿಗೆ ಪಾವತಿಸಲಾಗಿರುತ್ತದೆ.

ಈ ಅತ್ಯಾಧುನಿಕ ತಂತ್ರಜ್ಞಾನವುಳ್ಳ ಹಾಲಿನ ಪುಡಿ ಘಟಕ ಸ್ಥಾಪನಾ ಯೋಜನೆಯ ಅಂದಾಜು ವೆಚ್ಚ ರೂ. 300.00 ಕೋಟಿಯಾಗಿದ್ದು ಈ ವೆಚ್ಚ ಭರಿಸಲು ಮಂಡಳಿಯು ಆರ್ಥಿಕ ಸಂಸ್ಥೆಯಿಂದ ರೂ. 210.00 ಕೋಟಿ ಸಾಲವನ್ನು 8.05% ಬಡ್ಡಿ ದರದಂತೆ ಎಸ್.ಬಿ.ಐ. ಬ್ಯಾಂಕಿನಿಂದ ಪಡೆದು ಕೆಲಸವನ್ನು ಆರಂಭಿಸಿರುತ್ತದೆ. ತದನಂತರ ಕೇಂದ್ರ ಸರ್ಕಾರವು ಡಿ.ಐ.ಡಿ.ಎಫ್. ಯೋಜನೆಯನ್ನು ಜಾರಿ ಮಾಡಿದ್ದು, ಈ ಯೋಜನೆಯಡಿಯಲ್ಲಿ ಬಡ್ಡಿದರವು ಶೇ. 6.50 ಇರುವುದರಿಂದ ಕಹಾಮವು ಇದರ ಪ್ರಯೋಜನವನ್ನು ಪಡೆಯಲು ಎಸ್.ಬಿ.ಐ. ಬ್ಯಾಂಕಿನಿಂದ ಪಡೆದ ಸಾಲವನ್ನು ಎನ್.ಡಿ.ಡಿ.ಬಿ.ಯ ಮುಖಾಂತರ ಡಿ.ಐ.ಡಿ.ಎಫ್. ಯೋಜನೆಯಡಿಯಲ್ಲಿ ವರ್ಗಾಯಿಸಿಕೊಂಡಿರುತ್ತದೆ. ಹಾಗೂ ಬಾಕಿ ರೂ.90 ಕೋಟಿಯನ್ನು ಕಹಾಮ ತನ್ನ ಸ್ವಂತ ಬಂಡವಾಳವನ್ನು ತೊಡಗಿಸಿ ಈ ಘಟಕವನ್ನು ಸ್ಥಾಪಿಸಿರುತ್ತದೆ. ಇದಕ್ಕೆ ರಾಜಾನುಕುಂಟೆ ಮತ್ತು ಗುಬ್ಬಿಯ ಪಶು ಆಹಾರ ಘಟಕದ ಜಮೀನನ್ನು ಅಡಮಾನವಿಟ್ಟಿರುತ್ತಾರೆ.

ಈ ಘಟಕವು ಫೆಬ್ರವರಿ 26, 2020 ರಿಂದ ಪ್ರಾಯೋಗಿಕ ಉತ್ಪಾದನೆ ಪ್ರಾರಂಭಿಸಿ, ವಾಣಿಜ್ಯ ಉತ್ಪಾದನೆಯನ್ನು ಮಾರ್ಚ್-2020 ರ ಕೊನೆಯ ವಾರದಲ್ಲಿ ಪ್ರಾರಂಭಿಸಿರುತ್ತದೆ.

ಘಟಕ ಸ್ಥಾಪನೆಗಾಗಿ ಎನ್.ಡಿ.ಡಿ.ಬಿ ರವರಿಂದ ಪಡೆದ ಸಾಲದ ಬಾಬ್ತಿನ ಮರುಪಾವತಿಯು ದಿನಾಂಕ: 01.04.2019 ರಿಂದ ಪ್ರಾರಂಭವಾಗಿದ್ದು, 2019-20 ನೇ ಸಾಲಿನಲ್ಲಿ ರೂ.32,50,00,000/- ಸಾಲ ಮರು ಪಾವತಿಯಾಗಿ ವರ್ಷಾಂತ್ಯಕ್ಕೆ ರೂ.166,04,34,000/- ಬಾಕಿ ಇರುತ್ತದೆ. ಈ ಬಾಕಿಗೆ ಎನ್.ಡಿ.ಡಿ.ಬಿ ಯಿಂದ ಧೃಢೀಕರಣ ಪಡೆಯಲಾಗಿದೆ. ಈ ಮೇಲ್ಕಂಡ ಸಾಲದ ಮೇಲಿನ ಬಡ್ಡಿ ರೂ.15,58,69,325-00 ಗಳನ್ನು ಘಟಕ ಪ್ರಾರಂಭವಾಗುವವರೆಗೆ ಬಂಡವಾಳೀಕರಿಸಲಾಗಿದೆ. ಘಟಕದ ಉತ್ಪಾದನೆ ಪ್ರಾರಂಭವಾದ ನಂತರ ರೂ.92,28,838/- ರಷ್ಟು ಬಡ್ಡಿಯನ್ನು ಲಾಭ-ನಷ್ಟದ ಖಾತೆಗೆ ಖರ್ಚು ಹಾಕಲಾಗಿದೆ.

ಘಟಕಕ್ಕೆ ಆರ್.ಕೆ.ವಿ.ವೈ ವತಿಯಿಂದ 2017-18 ನೇ ಸಾಲಿನಲ್ಲಿ ರೂ.3.00 ಕೋಟಿ ಮತ್ತು 2018-19 ನೇ ಸಾಲಿನಲ್ಲಿ ರೂ.6.68 ಕೋಟಿ ಅನುದಾನ ಸ್ವೀಕರಿಸಿ ಅನುದಾನ ಖಾತೆಯಲ್ಲಿ ಲೆಕ್ಕ ಮಾಡಿಕೊಳ್ಳಲಾಗಿರುತ್ತದೆ. ಇದಕ್ಕೆ ಅನುಗುಣವಾಗಿ ಖರೀದಿಸಿರುವ ಆಸ್ತಿಗಳಿಗೆ ಸವಕಳಿಯನ್ನು ನಿಯಮದಂತೆ ತೆಗೆಯಲಾಗಿದೆ.

ಘಟಕವು ವರದಿ ಸಾಲಿಗೆ ರೂ.11,15,27,227-42 ನಿವ್ವಳ ನಷ್ಟ ಅನುಭಸಿರುತ್ತದೆ. ಈ ನಷ್ಟದಲ್ಲಿ ರೂ.7,19,42,422-00 ಸವಕಳಿ ಹಾಗೂ ಘಟಕ ಪ್ರಾರಂಭಿಸಲು ನಿಯೋಜಿಸಿರುವ ಸಿಬ್ಬಂದಿ ವೆಚ್ಚ ಮತ್ತು, ಸಾಲದ ಮೇಲಿನ ಬಡ್ಡಿ ಸೇರಿರುತ್ತದೆ.

VI. ನಂದಿನಿ ಪ್ಯಾಕೇಜಿಂಗ್ ಫಿಲಂ ಪ್ಲಾಂಟ್, ಮುನ್ನೇಕೊಳಾಲು ಮಾರತ್‌ಹಳ್ಳಿ, ಬೆಂಗಳೂರು

ಕಹಾಮ ಪೌಚ್ ಫಿಲಂ ಘಟಕವು ದಿನಾಂಕ: 20.10.1997 ರಂದು ಅಸ್ತಿತ್ವಕ್ಕೆ ಬಂದಿದ್ದು ಫಿಲಂ ಉತ್ಪಾದನೆಯನ್ನು ದಿನಾಂಕ: 02.02.1998 ರಿಂದ ಪ್ರಾರಂಭ ಮಾಡಿರುತ್ತದೆ. ಹಾಲು ಮತ್ತು ಹಾಲಿನ ಉತ್ಪನ್ನಗಳಿಗೆ ಗುಣಮಟ್ಟದ ಪ್ಯಾಕಿಂಗ್ ಮೆಟೀರಿಯಲ್‌ಗಳನ್ನು ಉತ್ಪಾದಿಸುವುದೇ ಈ ಘಟಕದ

S.R. & M.R. ASSOCIATES CHARTERED ACCOUNTANTS BANGALORE

ಉದ್ದೇಶವಾಗಿರುತ್ತದೆ. ಈ ಘಟಕವು ಕಹಾಮದ ಅಧೀನ ಘಟಕವಾಗಿದ್ದು ರಾಜ್ಯದ ಹಾಲು ಒಕ್ಕೂಟಗಳಿಗೆ ಹಾಗೂ ಮದರ್ ಡೇರಿ ಘಟಕಕ್ಕೆ ಘಿಲಂ ಸರಬರಾಜು ಮಾಡುತ್ತಿರುತ್ತದೆ.

ಈ ಘಟಕದಲ್ಲಿ 2 ಯೂನಿಟ್‌ಗಳಿದ್ದು, ಒಂದು ಯೂನಿಟ್‌ನ ಸಾಮರ್ಥ್ಯ ಪ್ರತಿ ಗಂಟೆಗೆ 150 ರಿಂದ 160 ಕೆ.ಜಿ ಮತ್ತು ಇನ್ನೊಂದು ಯೂನಿಟ್‌ನ ಸಾಮರ್ಥ್ಯ ಪ್ರತಿ ಗಂಟೆಗೆ 190 ರಿಂದ 200 ಕೆ.ಜಿ ಘಿಲಂ ಉತ್ಪಾದನೆಯಾಗುತ್ತಿರುತ್ತದೆ.

2019–20 ನೇ ಸಾಲಿನಲ್ಲಿ 34,79,198–54 ಕೆ.ಜಿಗಳಷ್ಟು ಘಿಲಂ ಉತ್ಪಾದನೆಯಾಗಿದ್ದು, 34,73,460–04 ಕೆ.ಜಿಗಳಷ್ಟು ಮಾರಾಟ ಮಾಡಲಾಗಿದೆ. ಮಾರಾಟ ಮಾಡಿದ ಮತ್ತು ಘಟಕಗಳಿಗೆ ವರ್ಗಾವಣೆ ಮೊಬಲಗು ಸೇರಿ ರೂ.44,39,10,009–01 ಆಗಿರುತ್ತದೆ. ಈ ವ್ಯಾಪಾರದಿಂದ ರೂ.5,39,21,985–55 ನಿವ್ವಳ ಲಾಭ ಗಳಿಸಿರುತ್ತದೆ.

VII. ನಂದಿನಿ ವೀರ್ಯಾಣು ಕೇಂದ್ರ – ಹೆಸರಘಟ್ಟ :

ಕರ್ನಾಟಕ ಸಹಕಾರಿ ಹಾಲು ಉತ್ಪಾದಕರ ಮಹಾಮಂಡಳಿ, ಬೆಂಗಳೂರು ಇದರ ಅಂಗ ಸಂಸ್ಥೆಯಾಗಿ ವಿಶ್ವ ಬ್ಯಾಂಕಿನ ನೆರವಿನೊಂದಿಗೆ ಕರ್ನಾಟಕ ಹೈನುಗಾರಿಕೆ ಅಭಿವೃದ್ಧಿ ಯೋಜನೆಯಡಿಯಲ್ಲಿ ಜನವರಿ 1984 ರಿಂದ ಈ ಘಟಕ ಕಾರ್ಯಾರಂಭವಾಗಿರುತ್ತದೆ.

ಹೋರಿಗಳ ತಳಿ ಅಭಿವೃದ್ಧಿ, ಉತ್ತಮ ಅನುವಂಶೀಯ ಹೋರಿಗಳ ಉತ್ಪಾದನೆ ಮತ್ತು ಜಿಲ್ಲಾ ಹಾಲು ಉತ್ಪಾದಕರ ಒಕ್ಕೂಟಗಳ ಮೂಲಕ ಹಾಲು ಉತ್ಪಾದಕರ ಸಹಕಾರ ಸಂಘಗಳಿಗೆ ಉತ್ತಮ ಗುಣಮಟ್ಟದ ಘನೀಕೃತ ವೀರ್ಯ ಸರಬರಾಜು ಮಾಡಲು ಶೇಖರಣಾ ಹಾಗೂ ಸಂಸ್ಕರಣಾ ಪ್ರಯೋಗ ಶಾಲೆಯನ್ನು ಹೊಂದಿರುತ್ತದೆ.

ದಿನಾಂಕ: 31.03.2020 ಕ್ಕೆ ಇರುವಂತೆ ಕ್ಯಾಪಿಟಲ್ ಗ್ರಾಂಟ್‌ಗಳ ವಿವರ ಕೆಳಕಂಡಂತೆ ಇರುತ್ತದೆ.

1) ಕೇಂದ್ರ ಸರ್ಕಾರ	15,776–18
2) ರಾಜ್ಯ ಸರ್ಕಾರ	3,22,26,333–87
3) ಕೆ.ಎಲ್.ಡಿ.ಎ	11,79,524–23
4) ಎನ್.ಡಿ.ಡಿ.ಬಿ	39,52,392–00
5)ಎನ್.ಡಿ.ಪಿ–1	5,31,62,120–86
6)ಆರ್.ಕೆ.ವಿ.ವೈ	2,79,51,010–06
7)ಕ್ಯಾಪಿಟಲ್ ರಿಸರ್ವ್	19,54,864–58
8)ಓಲ್ಡ್ ಗ್ರಾಂಟ್	31,27,855–79
ಒಟ್ಟು	**12,35,69,877–57**

2019–20 ನೇ ಸಾಲಿನಲ್ಲಿ ರೂ.4,77,09,188–00 ಗಳ ಆರಂಭದ ದಾಸ್ತಾನು ಇದ್ದು ರೂ.2,27,25,319–67 ಗಳ ಖರೀದಿ ಮಾಡಿ ರೂ.10,87,51,689–78 ಗಳ ಮಾರಾಟ ಮಾಡಿ ರೂ.5,35,62,774–63 ಗಳ ಆಖೈರು ದಾಸ್ತಾನು ಉಳಿಸಿ, ರೂ.68,58,750–04 ಗಳ ವ್ಯಾಪಾರ ಲಾಭ ಗಳಿಸಿ ಹಾಗೂ ರೂ.27,22,916–15 ನಿವ್ವಳ ನಷ್ಟ ಅನುಭವಿಸಿರುತ್ತದೆ. ಹೆಚ್ಚಿನ ವಿವರಗಳನ್ನು

S.R. & M.R. ASSOCIATES CHARTERED ACCOUNTANTS BANGALORE

ಘಟಕದ ಲಾಭ ನಷ್ಟದ ಖಾತೆಯಲ್ಲಿ ವಿವರಿಸಿದೆ. ಮಾರಾಟದ ಬೆಲೆಗಿಂತ ಉತ್ಪಾದನಾ ವೆಚ್ಚ ಹೆಚ್ಚಾಗಿರುವುದರಿಂದ ಘಟಕವು ನಿವ್ವಳ ನಷ್ಟ ಅನುಭವಿಸಿರುತ್ತದೆ.

VIII. ತರಬೇತಿ ಕೇಂದ್ರಗಳು :-

ಕಹಾಮವು ರಾಜ್ಯದಲ್ಲಿನ ಪ್ರಾಥಮಿಕ ಹಾಲು ಉತ್ಪಾದಕರ ಸಹಕಾರ ಸಂಘಗಳ ಸರ್ವತೋಮುಖ ಬೆಳವಣಿಗೆ ಹಾಗೂ ಅಭಿವೃದ್ಧಿಗೆ ಮತ್ತು ಇದರ ಧ್ಯೇಯೋದ್ದೇಶಗಳ ಸಫಲತೆಗೆ, ಅಲ್ಲದೇ, ಸಂಘಗಳು ಹೈನುಗಾರಿಕಾ ಚಟುವಟಿಕೆಗಳನ್ನು ನಡೆಸಿಕೊಂಡು ಹೋಗಲು ಹಾಗೂ ಪ್ರಗತಿ ಪಥದಲ್ಲಿ ಸಾಗಲು ಅನುವಾಗುವ ದೃಷ್ಟಿಕೋನ ಇಟ್ಟುಕೊಂಡು ವಿವಿಧ ಕ್ಷೇತ್ರಗಳಲ್ಲಿ ತರಬೇತಿ ಹಮ್ಮಿಕೊಂಡು ಅದರಂತೆ ತರಬೇತಿಯನ್ನು ನೀಡಲಾಗುತ್ತಿದೆ. ಸಹಕಾರ ಸಂಘಗಳ ಸದಸ್ಯರಾದ ಹಾಲು ಉತ್ಪಾದಕರು, ಸಂಘದ ಸಿಬ್ಬಂದಿ ಹಾಗೂ ಕಾರ್ಯಕಾರಿ ಮಂಡಳಿ ಸದಸ್ಯರಿಗೆ, ಹೈನುಗಾರಿಕಾ ಲೆಕ್ಕಪತ್ರಗಳು, ಪಶು ವೈದ್ಯಕೀಯ, ಕಾನೂನು ತಿಳುವಳಿಕೆ, ಹೀಗೆ ವಿವಿಧ ವಿಷಯಗಳನ್ನೊಳಗೊಂಡ ತರಬೇತಿ ನೀಡುವುದಕ್ಕಾಗಿ ರಾಜ್ಯದಲ್ಲಿ ಈ ಕೆಳಕಂಡ ನಾಲ್ಕು ತರಬೇತಿ ಸಂಸ್ಥೆಗಳನ್ನು ಆಯಾ ಸೀಮಿತ ಪ್ರದೇಶಗಳಲ್ಲಿ ಸ್ಥಾಪಿಸಿದೆ. ಅದರ ವಿವರ ಕೆಳಕಂಡಂತಿದೆ.

1) ಕೇಂದ್ರೀಯ ತರಬೇತಿ ಸಂಸ್ಥೆ, ಬೆಂಗಳೂರು
2) ತರಬೇತಿ ಸಂಸ್ಥೆ, ಮೈಸೂರು
3) ತರಬೇತಿ ಸಂಸ್ಥೆ, ಧಾರವಾಡ
4) ತರಬೇತಿ ಸಂಸ್ಥೆ, ಕಲ್ಬುರ್ಗಿ

ಉತ್ತರ ಕರ್ನಾಟಕ ಭಾಗದಲ್ಲಿ ಹೈನುಗಾರಿಕೆ ಅಭಿವೃದ್ಧಿಗಾಗಿ ಉತ್ತಮ ತರಬೇತಿ ಸೌಲಭ್ಯ ನೀಡುವ ಸಲುವಾಗಿ ಕಹಾಮವು ಕಲ್ಬುರ್ಗಿಯಲ್ಲಿ ನೂತನ ತರಬೇತಿ ಕೇಂದ್ರವನ್ನು ಸ್ಥಾಪಿಸಿ, 2019-20 ನೇ ಸಾಲಿನಲ್ಲಿ ಕಾರ್ಯಾರಂಭ ಮಾಡಲು ಸಿಬ್ಬಂದಿಯನ್ನು ನಿಯೋಜಿಸಲಾಗಿರುತ್ತದೆ.

ಮೇಲ್ಕಂಡ ತರಬೇತಿ ಕೇಂದ್ರಗಳ ವ್ಯವಹಾರದ ವಿಮರ್ಶೆ :

ವ್ಯವಹಾರದ ವಿಮರ್ಶೆ	ಬೆಂಗಳೂರು	ಮೈಸೂರು	ಧಾರವಾಡ	ಕಲ್ಬುರ್ಗಿ	ಒಟ್ಟು
ತರಬೇತಿ ಶುಲ್ಕ	1,98,47,742-20	3,08,21,100-00	2,65,57,200-00	-	7,72,26,042-20
ಇತರೇ ಆದಾಯ	7,09,233-47	4,81,774-52	7,21,885-86	-	19,12,893-35
ಖರ್ಚುಗಳು	3,09,32,681-97	3,37,23,561-12	3,33,01,989-00	26,84,838-46	10,06,43,070-55
ಆದಾಯಕ್ಕಿಂತ ಖರ್ಚು ಜಾಸ್ತಿ (-)	94,78,750-69	16,12,176-84	42,27,924-18	26,84,838-46	1,80,03,690-67

ಹಿಂದಿನ ಸಾಲಿನಲ್ಲಿ ಎಲ್ಲಾ ತರಬೇತಿ ಕೇಂದ್ರಗಳಿಂದ ಸೇರಿ ಒಟ್ಟಾರೆ ರೂ. 1,67,02,650-29 ಗಳ ನಷ್ಟ ಹೊಂದಿದ್ದರೆ ವರದಿ ಸಾಲಿನ ಅಂತ್ಯಕ್ಕೆ ಈ ನಷ್ಟವು ರೂ. 1,80,03,690-67 ರಷ್ಟು ಇದ್ದು, ಈ ನಷ್ಟದ ಪರಿಮಾಣ ಹಿಂದಿನ ಸಾಲಿಗೆ ಹೋಲಿಸಿದಾಗ ಶೇಕಡ 7.79 ಹೆಚ್ಚು ಆಗಿರುತ್ತದೆ.

ವರದಿ ಸಾಲಿನಲ್ಲಿ ಕಲ್ಬುರ್ಗಿ ತರಬೇತಿ ಸಂಸ್ಥೆಯ ಕಾಮಗಾರಿಯು ಪೂರ್ಣಗೊಂಡಿದ್ದು, ಅದರ ಮೊತ್ತ ರೂ.4,30,45,335-95 ಗಳನ್ನು ಬಂಡವಾಳೀಕರಿಸಲಾಗಿದೆ. ಇದರ ಮೇಲೆ ನಿಯಮಗಳ ಪ್ರಕಾರ ಸವಕಳಿ ತೆಗೆದು ಕಾಯ್ದಿರಿಸಲಾಗಿದೆ.

S.R. & M.R. ASSOCIATES CHARTERED ACCOUNTANTS BANGALORE

IX. ಪಶು ಆಹಾರ ಘಟಕಗಳು:

ವರದಿ ಸಾಲಿನಲ್ಲಿ ಕೆಳಕಂಡ ಪಶು ಆಹಾರ ಘಟಕಗಳು ಕಾರ್ಯ ನಿರ್ವಹಿಸುತ್ತಿದ್ದು ವ್ಯವಹಾರದ ವಿವರಗಳು ಕೆಳಕಂಡಂತೆ ಇರುತ್ತದೆ

(ಕೋಟಿಗಳಲ್ಲಿ)

ಕ್ರ ಸಂ	ಘಟಕಗಳ ಹೆಸರು	ಖರೀದಿ	ಮಾರಾಟ	ವ್ಯಾಪಾರ ಲಾಭ	ನಿವ್ವಳ ಲಾಭ
1	ಹಾಸನ	383.28	405.88	28.51	10.06
2	ರಾಜಾನುಕುಂಟೆ	171.93	183.87	10.63	2.41
3	ಧಾರವಾಡ	220.40	226.35	22.18	10.56
4	ಗುಬ್ಬಿ	151.21	144.31	7.29	(-) 1.33
5	ಶಿಕಾರಿಪುರ	232.09	230.85	12.93	4.52
	ಒಟ್ಟು	**1158.91**	**1191.26**	**81.54**	**26.22**

ಕಳೆದ ಮೂರು ವರ್ಷಗಳಲ್ಲಿ ಪಶು ಆಹಾರ ಘಟಕಗಳು ಪಾವತಿಸಿದ ಬಾಡಿಗೆ ಗೋದಾಮಿನ ವೆಚ್ಚದ ವಿವರಗಳು ಕೆಳಗಿನಂತಿರುತ್ತದೆ.

ಮೊತ್ತ (ರೂ.ಗಳಲ್ಲಿ)

ಕ್ರ.ಸಂ	ಘಟಕಗಳು	2017-18	2018-19	2019-20
1	ರಾಜಾನುಕುಂಟೆ	25,79,784-00	38,82,200-00	0-00
2	ಗುಬ್ಬಿ	47,99,708-00	62,59,477-19	45,78,425-08
3	ಹಾಸನ	77,46,753-16	1,25,84,775-30	35,59,206-55
4	ಶಿಕಾರಿಪುರ	1,06,25,703-99	79,94,343-56	25,63,284-00
5	ಧಾರವಾಡ	1,01,51,188-56	1,01,45,726-79	72,45,372-76
	ಒಟ್ಟು ರೂ.	**3,59,03,137-71**	**4,08,66,522-84**	**1,79,46,288-39**

ಘಟಕಗಳು ಅವಶ್ಯಕ ಕಚ್ಚಾಸಾಮಗ್ರಿಗಳನ್ನು ಋತುಮಾನದಲ್ಲಿ ಖರೀದಿಸಿದಾಗ ಕಡಿಮೆ ದರದ ಲಾಭ ಪಡೆಯುವ ಸಲುವಾಗಿ ಒಟ್ಟಿಗೆ ಖರೀದಿಸಿದಾಗ ದಾಸ್ತಾನು ಮಾಡಲು ಗೋದಾಮುಗಳನ್ನು ಬಾಡಿಗೆ ಪಡೆಯಲಾಗುತ್ತದೆ. ಹಿಂದಿನ ಸಾಲುಗಳಿಂದ ಕಹಾಮವು ಘಟಕಗಳಲ್ಲಿ ಗೋದಾಮು ಮತ್ತು ಸೈಲೋಗಳನ್ನು ನಿರ್ಮಿಸುತ್ತಾ ಬಂದಿದ್ದು, ಗೋದಾಮು ಬಾಡಿಗೆ ವೆಚ್ಚ ಕಡಿಮೆಯಾಗಿರುವುದನ್ನು ಗಮನಿಸಿದೆ.

ಎ) ರಾಜಾನುಕುಂಟೆ ಘಟಕದಲ್ಲಿ ಮೆ: ಸುಖದೇವ್ ಮತ್ತು ಕಂಪನಿ., ರವರ ಖಾತೆಯಲ್ಲಿ ಬಾಕಿಯಿರುವ ರೂ.7,93,001–00 ಗಳಿಗೆ ಸಂಬಂಧಿಸಿದಂತೆ ಕಾನೂನು ಕ್ರಮವಿಟ್ಟಿದ್ದು, ದಿನಾಂಕ: 15.06.2018 ರಂದು ಸಿವಿಲ್ ನ್ಯಾಯಾಲಯವು ಕಹಾಮ ಪರವಾಗಿ ತೀರ್ಪು ನೀಡಿದ್ದು, ತೀರ್ಪಿನನ್ವಯ ವಸೂಲಾತಿಗೆ ಕ್ರಮವಿಡಲು ತಿಳಿಸಿದೆ.

ಬಿ). ಹಾಸನ ಘಟಕಕ್ಕೆ ಸಂಬಂಧಿಸಿದಂತೆ ಮಲೆನಾಡು ಅಭಿವೃದ್ಧಿ ಮಂಡಳಿಯಿಂದ ರೂ.1.00 ಕೋಟಿ ಸಾಲ ಪಡೆದಿದ್ದು, ಸದರಿ ಸಾಲವನ್ನು ಪೂರ್ಣವಾಗಿ ಮರುಪಾವತಿಸಲಾಗಿರುತ್ತದೆ. ಸದರಿ ಸಾಲದ ಮೇಲೆ ಬಡ್ಡಿ ಪಾವತಿಗಾಗಿ 2015–16 ನೇ ಸಾಲಿನವರೆಗೆ ರೂ.2,20,74,587–00 ಅವಕಾಶ

S.R. & M.R. ASSOCIATES CHARTERED ACCOUNTANTS BANGALORE

ಮಾಡಿಕೊಳ್ಳಲಾಗಿರುತ್ತದೆ. M.A.D.B ರವರಿಂದ ಬಡ್ಡಿ ಪಾವತಿಗಾಗಿ ಕ್ಲೇಮ್ ಬಂದಿರುವುದಿಲ್ಲ. ಆದ್ದರಿಂದ ಈ ಲೆಕ್ಕವನ್ನು ಖೈದುಗೊಳಿಸಲು ಸೂಚಿಸಲಾಗಿದೆ.

ಸಿ). 2018–19 ನೇ ಸಾಲಿಗೆ ಹೋಲಿಸಿದಾಗ ವರದಿ ಸಾಲಿನಲ್ಲಿ ಪಶು ಆಹಾರ ಕಚ್ಚಾ ಸಾಮಗ್ರಿಗಳ ದರ ಹೆಚ್ಚಾಗಿರುವುದರಿಂದ ಪಶು ಆಹಾರ ಘಟಕಗಳ ಲಾಭಾಂಶ ಕಡಿಮೆಯಾಗಿರುವುದನ್ನು ಗಮನಿಸಿದೆ.

X. ಮಾರಾಟ ಮಳಿಗೆಗಳು :–

ನಂದಿನಿ ಹಾಲು ಉತ್ಪನ್ನಗಳನ್ನು ಗ್ರಾಹಕರ ಬೇಡಿಕೆಗೆ ಅನುಗುಣವಾಗಿ ಪೂರೈಸುವ ಹಾಗೂ ವ್ಯಾಪಾರವನ್ನು ವೃದ್ಧಿಗೊಳಿಸುವ ಉದ್ದೇಶದಿಂದ ಕಹಾಮವು ವಿವಿದ ಸ್ಥಳಗಳಲ್ಲಿ ಒಟ್ಟು 16 ಮಾರಾಟ ಮಳಿಗೆಗಳನ್ನು ತೆರೆದಿದ್ದು ಇವುಗಳ ವಹಿವಾಟಿನ ಸಂಕ್ಷಿಪ್ತ ವಿವರ ಕೆಳಕಂಡಂತೆ ಇರುತ್ತದೆ.

ಕ್ರ.ಸಂ	ಮಾರಾಟ ಮಳಿಗೆ	2018–19ನೇ ಸಾಲಿನಲ್ಲಿ ವಹಿವಾಟು (ರೂ.ಗಳಲ್ಲಿ)	2018–19 ನೇ ಸಾಲಿನ ನಿವ್ವಳ ಲಾಭ (ರೂ.ಗಳಲ್ಲಿ)	2019–20ನೇ ಸಾಲಿನ ವಹಿವಾಟು (ರೂ.ಗಳಲ್ಲಿ)	2019–20 ನೇ ಸಾಲಿನ ನಿವ್ವಳ ಲಾಭ (ರೂ.ಗಳಲ್ಲಿ)
1	ಬೆಂಗಳೂರು	4,55,29,29,412-09	34,52,53,201-42	519,97,76,335-81	42,26,27,468-10
2	ಹುಬ್ಬಳ್ಳಿ	46,29,06,362-95	2,15,75,803-56	52,52,53,601-97	3,01,20,275-04
3	ಮಂಗಳೂರು	67,07,24,066-93	5,79,06,480-86	71,46,16,942-93	6,65,53,804-42
4	ಗುಲ್ಬರ್ಗಾ	23,25,91,040-32	52,55,757-55	24,96,85,564-91	76,57,332-68
5	ಕಣ್ಣೂರು	29,17,86,808-77	99,26,998-65	41,29,53,458-67	2,62,04,317-45
6	ಬಳ್ಳಾರಿ	28,50,41,815-81	95,70,137-87	35,09,81,982-00	1,53,87,494-54
7	ಮೈಸೂರು	60,44,98,688-16	4,46,06,350-28	65,93,02,546-80	5,32,32,832-72
8	ತಿರುಪತಿ	7,46,17,795-74	22,51,421-52	10,04,96,434-00	65,85,501-54
9	ಹೈದರಾಬಾದ್	17,11,10,695-09	71,10,912-03	25,35,50,741-89	1,21,11,983-19
10	ವಿಜಯವಾಡ	11,96,02,335-83	63,21,692-74	14,00,85,723-00	73,42,397-73
11	ಚೆನ್ನೈ	12,84,64,927-42	45,30,058-38	23,24,80,848-10	1,31,37,889-33
12	ದಾವಣಗೆರೆ	9,78,15,669-78	26,14,770-47	17,02,01,393-73	50,50,201-33
13	ಶಿವಮೊಗ್ಗ	21,45,00,499-62	1,15,04,589-71	24,15,67,874-16	1,55,51,557-91
14	ಹಾಸನ	13,62,25,026-55	70,23,130-17	17,26,57,062-53	99,59,959-60
15	ತಿರುಚಿ	15,55,43,302-91	65,21,770-59	19,53,25,887-73	1,16,17,800-26
16	ತುಮಕೂರು	21,21,88,344-55	1,13,15,500-82	22,87,81,850-35	1,20,27,505-59
	ಒಟ್ಟು ರೂ.	**8,41,05,46,792-52**	**55,32,88,576-62**	**984,77,18,248-80**	**71,51,68,321-43**

ಮೇಲ್ಕಂಡ ಮಳಿಗೆಗಳನ್ನು ಲೆಕ್ಕಪರಿಶೋಧನೆಗೆ ಒಳಪಡಿಸಿದ್ದು ಕೆಲವು ಮುಖ್ಯ ನ್ಯೂನತೆಗಳು ಕೆಳಕಂಡಂತೆ ಇರುತ್ತದೆ.

1. ತಿರುಪತಿ ಮಾರಾಟ ಮಳಿಗೆಯಲ್ಲಿ ಭೌತಿಕ ದಾಸ್ತಾನು ಕೊರತೆ ರೂ.55.31 ಲಕ್ಷ ಇದ್ದು ಮಳಿಗೆಯ ಮೇಲ್ವಿಚಾರಕರಾದ ಶ್ರೀ ಗೋಪಾಲಕೃಷ್ಣ ನಾಯ್ಡು, ಸಹಾಯಕ ನಿರ್ದೇಶಕರು (ಮಾರುಕಟ್ಟೆ) ಇವರು ತಮ್ಮ ಕಾರ್ಯ ಹಂಚಿಕೆಯಲ್ಲಿನ ಕರ್ತವ್ಯ ಲೋಪ ಆರೋಪದ ಮೇರೆಗೆ ಕಹಾಮ ಅಧೀನ ನಿಯಮಗಳನ್ವಯ ಹೊಣೆಗಾರರನ್ನಾಗಿ ಮಾಡಲಾಗಿರುತ್ತದೆ. ಇದಕ್ಕೆ

S.R. & M.R. ASSOCIATES CHARTERED ACCOUNTANTS BANGALORE

ಸಂಬಂಧಿಸಿದಂತೆ ಮೆ: ಅರವಿಂದ ಏಜೆನ್ಸೀಸ್, WCF Agent, ರವರಿಂದ ರೂ.34.41 ಲಕ್ಷಗಳನ್ನು ಬ್ಯಾಂಕ್ ಗ್ಯಾರಂಟಿ ಮುಟ್ಟುಗೋಲು, ಸದರಿಯವರಿಗೆ ಪಾವತಿಸಬೇಕಾಗಿದ್ದ 2 WCF ಬಿಲ್‌ಗಳು ಹಾಗೂ ಸದರಿಯವರು ಮರುಪಾವತಿಸಿರುವ ಮೊತ್ತವನ್ನು ಪರಿಗಣಿಸಿ, ವರ್ಷಾಂತ್ಯಕ್ಕೆ ರೂ.20.90 ಲಕ್ಷಗಳು ವಸೂಲಿಗೆ ಬಾಕಿ ಇರುತ್ತದೆ. ಇದಕ್ಕೆ ಸಂಬಂಧಿಸಿದಂತೆ ಇಲಾಖಾ ವಿಚಾರಣೆ ಪ್ರಗತಿಯಲ್ಲಿದೆ.

2. ಕಹಾಮದ ಇತರೆ ಮಾರಾಟ ಮಳಿಗೆಗಳಿಗೆ ಹೋಲಿಸಿದಾಗ ಮೈಸೂರು ಮಾರಾಟ ಮಳಿಗೆಯಲ್ಲಿ ಸಿಬ್ಬಂದಿ ಸಂಖ್ಯೆಯು ಅವಶ್ಯಕತೆಗಿಂತ ಹೆಚ್ಚಾಗಿರುವುದು ಕಂಡುಬಂದಿರುತ್ತದೆ.
3. ಪ್ರತಿಯೊಂದು ಮಾರಾಟ ಮಳಿಗೆಯಲ್ಲಿ ಸ್ಥಿರಾಸ್ತಿಗಳ ಮೇಲೆ ಸವಕಳಿ ತೆಗೆದು ಒಂದು ಪ್ರತ್ಯೇಕ ರಿಜಿಸ್ಟರ್ ಇಡಲು ಸೂಚಿಸಿದೆ.
4. ಕೆಲವೊಂದು ಮಳಿಗೆಗಳಲ್ಲಿ ಒಂದಕ್ಕಿಂತ ಹೆಚ್ಚು ಬ್ಯಾಂಕ್ ಖಾತೆಗಳು ತೆರೆದಿದ್ದು, ಹೆಚ್ಚುವರಿ ಬ್ಯಾಂಕ್ ಖಾತೆ ಇಡುವ ಅವಶ್ಯಕತೆ ಕಂಡು ಬರುವುದಿಲ್ಲ. ಈ ಬಗ್ಗೆ ಪರಿಶೀಲಿಸಿ ಹೆಚ್ಚುವರಿ ಬ್ಯಾಂಕ್ ಖಾತೆಗಳನ್ನು ಖೈದು ಮಾಡಲು ಸೂಚಿಸಿದೆ.

30.0 ಕಹಾಮ ಕೇಂದ್ರ ಕಛೇರಿಯಲ್ಲಿ ಈ ಕೆಳಕಂಡ ವಿಭಾಗಗಳು ಕಾರ್ಯನಿರ್ವಹಿಸುತ್ತಿವೆ

1. ಆಡಳಿತ ವಿಭಾಗ
2. ಅಭಿಯಂತರ ವಿಭಾಗ
3. ಮಾರುಕಟ್ಟೆ ವಿಭಾಗ
4. ಖರೀದಿ ವಿಭಾಗ
5. ಪಶುಸಂಗೋಪನಾ ವಿಭಾಗ
6. ಗುಣನಿಯಂತ್ರಣ ವಿಭಾಗ
7. ಹಣಕಾಸು ವಿಭಾಗ
8. ಸ್ಟೆಪ್ ವಿಭಾಗ

(1) ಆಡಳಿತ ವಿಭಾಗ :

ಈ ವಿಭಾಗದ ಕಾರ್ಯಸೂಚಿಯಂತೆ ಕಹಾಮದ ವಿಭಾಗಗಳ ಹಾಗೂ ಅಧೀನ ಘಟಕಗಳ ಕಾರ್ಯ ನಿರ್ವಹಣೆ ಬಗ್ಗೆ ಆಡಳಿತ ವ್ಯವಸ್ಥೆ ನೋಡಿಕೊಳ್ಳುವುದು ಈ ವಿಭಾಗದ ಮುಖ್ಯ ಕರ್ತವ್ಯವಾಗಿರುತ್ತದೆ. ಇದರನ್ವಯ ಸಾಮಾನ್ಯ ಆಡಳಿತ ನಿರ್ವಹಣೆ, ಆಡಳಿತ ಮಂಡಳಿ ವಿಷಯಗಳು, ಅಧಿಕಾರಿ ಮತ್ತು ಸಿಬ್ಬಂದಿಗಳ ನಿರ್ವಹಣೆ, ಗುತ್ತಿಗೆ ಕಾರ್ಮಿಕರ ನೇಮಕಾತಿ ಈ ವಿಭಾಗದ ಕರ್ತವ್ಯವಾಗಿರುತ್ತದೆ.

ದಿನಾಂಕ: 31.03.2020 ಕ್ಕೆ ಇದ್ದಂತೆ ಅಧಿಕಾರಿ ಮತ್ತು ನೌಕರರು ಸೇರಿದಂತೆ ಒಟ್ಟು 1627 ಸಂಖ್ಯೆಗಳ ಹುದ್ದೆ ಮಂಜೂರಾಗಿದ್ದು, ಈ ಪೈಕಿ 1017 ಹುದ್ದೆಗಳು ಭರ್ತಿಯಾಗಿದ್ದು 610 ಹುದ್ದೆಗಳು ಖಾಲಿ ಇರುತ್ತವೆ.

ಲೆಕ್ಕಪರಿಶೋಧನಾ ವೇಳೆಯಲ್ಲಿ ಗಮನಿಸಿದ ಅಂಶಗಳು ಕೆಳಕಂಡಂತೆ ಇರುತ್ತದೆ:-

ಈ ವಿಭಾಗದಲ್ಲಿ ಕಹಾಮವು ವಿವಿಧ ನ್ಯಾಯಾಲಯಗಳಲ್ಲಿ ಹೂಡಿರುವ ವ್ಯಾಜ್ಯಗಳ ಕಡತಗಳನ್ನು ನಿರ್ವಹಿಸಲಾಗುತ್ತಿದೆ. ಸಾಲಾಂತ್ಯಕ್ಕೆ ಒಟ್ಟು 113 ವ್ಯಾಜ್ಯಗಳು ವಿವಿಧ ಹಂತದಲ್ಲಿ ಮತ್ತು ವಿವಿಧ ನ್ಯಾಯಾಲಯಗಳಲ್ಲಿ ಇರುತ್ತದೆ. ಈ ವ್ಯಾಜ್ಯಗಳಲ್ಲಿ ಕಹಾಮದ ಅಧಿಕಾರಿ/ನೌಕರರುಗಳ ವಿರುದ್ಧ

S.R. & M.R. ASSOCIATES CHARTERED ACCOUNTANTS BANGALORE

ವಿವಿಧ ಆರೋಪಗಳಡಿ ದಾವೆ ಹೂಡಿರುವುದು ಸಹ ಸೇರಿಕೊಂಡಿರುತ್ತದೆ. ವಿವರಗಳನ್ನು ಲೆಕ್ಕಪರಿಶೋಧನೆಗೆ ನೀಡಲಾಗಿದೆ.

ಕಹಾಮ ಅಧಿಕಾರಿ/ನೌಕರರ ವಿಚಾರಣೆ ಮತ್ತು ನ್ಯಾಯಾಲಯಗಳಲ್ಲಿರುವ ಪ್ರಕರಣಗಳನ್ನು ಪ್ರತಿನಿಧಿಸಿಕೊಂಡು ಹೋಗಲು ವಕೀಲರನ್ನು ನೇಮಿಸಿಕೊಂಡು ಅವರಿಗೆ ಕಾಲಕಾಲಕ್ಕೆ ಸೇವಾ ಶುಲ್ಕಗಳನ್ನು ಪಾವತಿಸಲಾಗುತ್ತಿದೆ. ವರದಿ ಸಾಲಿನಲ್ಲಿ ವಕೀಲರುಗಳಿಗೆ ಪಾವತಿಸಿದ ಒಟ್ಟು ಮೊತ್ತ ರೂ.25,12,467–00 ಗಳಾಗಿರುತ್ತದೆ.

ಈ ವಿಭಾಗದಲ್ಲಿ ಕಹಾಮ ಹೊಂದಿರುವ ವಾಹನಗಳ ನಿರ್ವಹಣೆ ಕೈಗೊಳ್ಳುತ್ತದೆ. ವರದಿ ಸಾಲಿನ ಅಂತ್ಯಕ್ಕೆ ಒಟ್ಟು 20 ವಿವಿಧ ತರಹದ ವಾಹನಗಳಿರುತ್ತದೆ. ಈ ವಾಹನಗಳಿಗೆ ಸಂಬಂಧಿಸಿದ ಲಾಗ್ ಪುಸ್ತಕಗಳನ್ನು ಪರಿಶೀಲಿಸಲಾಗಿದೆ.

ಕಹಾಮ ಕೇಂದ್ರ ಕಛೇರಿ ಮತ್ತು ಬೆಂಗಳೂರು ಮಾರಾಟ ಮಳಿಗೆ ಇಲ್ಲಿನ ಸ್ವಚ್ಚತೆ, ತೋಟಗಾರಿಕೆ, ಹೌಸ್ ಕೀಪಿಂಗ್ ಕೆಲಸಗಳ ನಿರ್ವಹಣೆಗಾಗಿ ಹಾಗೂ ಭದ್ರತಾ ಕೆಲಸಗಳಿಗಾಗಿ ಇ–ಟೆಂಡರ್ ಆಹ್ವಾನಿಸಲಾಗಿದ್ದು ಸ್ವಚ್ಚತೆ, ತೋಟಗಾರಿಕೆ, ಹೌಸ್ ಕೀಪಿಂಗ್ ಕೆಲಸಕ್ಕೆ ಮೆ: ಈಶ್ವರ್ ಎಂಟರ್ ಪ್ರೈಸಸ್ ರವರಿಗೆ ದಿನಾಂಕ 01.09.2017 ರಿಂದ 30.04.2020 ರವರೆಗೆ ಆದೇಶ ನೀಡಲಾಗಿದೆ. ಭದ್ರತಾ ರಕ್ಷಣೆಗಾಗಿ ಮೆ: Novel Security Services Ltd., ರವರಿಗೆ ದಿನಾಂಕ: 01.09.2017 ರಿಂದ 30.04.2020 ರವರೆಗೆ ಕಾರ್ಯಾದೇಶ ನೀಡಿರುವುದನ್ನು ಗಮನಿಸಿದೆ.

(2) ಅಭಿಯಂತರ ವಿಭಾಗ:

ಕಹಾಮ ಮತ್ತು ಘಟಕಗಳ ಕಟ್ಟಡಗಳ ನಿರ್ವಹಣೆ ಕಹಾಮ ಮತ್ತು ಒಕ್ಕೂಟಗಳ ಪರವಾಗಿ ನೂತನ ಯೋಜನೆಗಳನ್ನು ಸ್ಥಾಪಿಸುವುದು, ವಿಮೆ ಮಾಡಿಸುವುದು ಹಾಗೂ ಕಹಾಮ ಮತ್ತು ಘಟಕಗಳ ಆಸ್ತಿಗಳ ನಿರ್ವಹಣೆ ಹಾಗೂ ದಾಖಲೆಗಳ ಸಂರಕ್ಷಣೆ ಈ ವಿಭಾಗದ ಮುಖ್ಯ ಕೆಲಸವಾಗಿರುತ್ತದೆ.

ಲೆಕ್ಕಪರಿಶೋಧನಾ ವೇಳೆಯಲ್ಲಿ ವಿಮೆಗೆ ಸಂಬಂಧಿಸಿದ ಕಡತವನ್ನು ಪರಿಶೀಲಿಸಿದ್ದು ಕಹಾಮ ಮತ್ತು ಇದರ ಘಟಕಗಳಿಗೆ ಕಟ್ಟಡಗಳು, ಯಂತ್ರೋಪಕರಣಗಳು, ವಿವಿಧ ರೀತಿಯ ಸ್ಟಾಕ್‌ಗಳು, ಟ್ರಾನ್ಸಿಟ್‌ನಲ್ಲಿರುವ ಸ್ಟಾಕ್ ಮತ್ತು ಹಣಕಾಸುಗಳು, ನೌಕರರ ಮೆಡಿಕ್ಲೇಮ್ ಪಾಲಿಸಿಗಳು, ಇವುಗಳಿಗೆ ವಿಮೆ ಮಾಡಿಸಿರುವುದನ್ನು ಗಮನಿಸಿದೆ. ವಿಮೆಗಾಗಿ ಪಾವತಿಸಿದ ಪ್ರೀಮಿಯಂ ಮೊತ್ತ ರೂ.2,65,23,622–00 ಇದ್ದು ಅವಧಿ ದಿನಾಂಕ. 01–07–2019 ರಿಂದ 30–06–2020 ರವರೆಗೆ ಇರುತ್ತದೆ.

ಒಕ್ಕೂಟಗಳ ಪರವಾಗಿ ಕಹಾಮ ಯೋಜನೆಗಳನ್ನು ವಿವಿಧ ಸ್ಥಾವರಗಳನ್ನು ನಿರ್ಮಿಸುತ್ತಿದ್ದು ಈ ಯೋಜನೆಗಳ ಸ್ಥಾಪನೆಗಾಗಿ ಸಂಬಂಧಿಸಿದ ಒಕ್ಕೂಟದವರು ಹಣ ಪಾವತಿ ಮಾಡುತ್ತಾರೆ. ಯೋಜನೆ ಸ್ಥಾಪನೆಗಾಗಿ ಕಹಾಮವು ಖರ್ಚಿನ ಮೇಲೆ ಶೇಕಡ 1% (Consultancy ಮತ್ತು Architecture Fees ಹೊರತುಪಡಿಸಿ) ಟೆಕ್ನಿಕಲ್ ಸರ್ವೀಸ್ ಶುಲ್ಕ ವಿಧಿಸುತ್ತಿದ್ದು, ವರದಿ ಸಾಲಿನಲ್ಲಿ ಈ ರೀತಿ ಸಂಗ್ರಹಿಸಿದ ಮೊಬಲಗು ರೂ.63,26,107–00 ಆಗಿರುತ್ತದೆ. ಯೋಜನಾ ಕಾಮಗಾರಿ ಮತ್ತು ಮೆಕಾನಿಕಲ್ ಕಾರ್ಯಗಳನ್ನು e-procurement ಅಡಿಯಲ್ಲಿ ಟೆಂಡರ್ ಕರೆದು ನಿರ್ವಹಿಸಲಾಗುತ್ತಿದೆ.

S.R. & M.R. ASSOCIATES CHARTERED ACCOUNTANTS BANGALORE

(3) ಮಾರುಕಟ್ಟೆ ವಿಭಾಗ:

ಕಹಾಮ ಕೇಂದ್ರ ಕಛೇರಿಯಲ್ಲಿ ಮಾರುಕಟ್ಟೆ ವಿಭಾಗವು ಈ ಕೆಳಕಂಡ ಕಾರ್ಯಗಳನ್ನು ನಿರ್ವಹಿಸುತ್ತಿದೆ.

1) ಒಕ್ಕೂಟಗಳಲ್ಲಿರುವ ಹೆಚ್ಚುವರಿ ಹಾಲು ಮಾರಾಟದ ಮತ್ತು ಅದರ ಪರಿವರ್ತನೆ ಬಗ್ಗೆ ವ್ಯವಸ್ಥೆ ಮಾಡುವುದು.

2) ಹಾಲು ಮತ್ತು ಹಾಲಿನ ಉತ್ಪನ್ನಗಳ ದರ ನಿಗಧಿಪಡಿಸುವುದು.

3) ಹಾಲು ಮತ್ತು ಹಾಲಿನ ಉತ್ಪನ್ನಗಳ ಮಾರಾಟಕ್ಕೆ ಸಂಬಂದಿಸಿದಂತೆ ಪ್ರಚಾರ ಕಾರ್ಯಕ್ರಮ ಕೈಗೊಳ್ಳುವುದು.

4) ಮಾರಾಟ ಮಳಿಗೆಗಳ ಸ್ಥಾಪನೆ ಅವುಗಳ ನಿರ್ವಹಣೆ ಹಾಗೂ ಮಾರಾಟ ಮಳಿಗೆಗಳ ಮುಖಾಂತರ ಚಿಲ್ಲರೆ ಉತ್ಪನ್ನಗಳನ್ನು ಮಾರಾಟ ಮಾಡುವುದು.

5) ಕ್ಷೀರ ಭಾಗ್ಯ ಯೋಜನೆಯ ನಿರ್ವಹಣೆ.

6) ಕಾರ್ಯ ನಿರೂಪಣಾ ಸಮಿತಿ ಸಭೆಗಳನ್ನು ಏರ್ಪಡಿಸುವುದು.

ಕಹಾಮ ವ್ಯಾಪ್ತಿಯಲ್ಲಿ ಬರುವ ಒಕ್ಕೂಟಗಳ ಹೆಚ್ಚುವರಿ ಹಾಲು ಮಾರಾಟ ಮಾಡಲು ಕಹಾಮ ಸಂಸ್ಥೆಯು ಯಾವ ಒಕ್ಕೂಟದಿಂದ ಯಾವ ಸಂಸ್ಥೆಗೆ ಎಷ್ಟು ಹಾಲು ಮಾರಾಟ ಮಾಡಬೇಕು ಮತ್ತು ಇದಕ್ಕೆ ಯಾವ ದರದಲ್ಲಿ ಮಾರಾಟ ಮಾಡಬೇಕು ಎಂದು ಕಾರ್ಯನಿರೂಪಣಾ ಸಮಿತಿಯಲ್ಲಿ ನಿರ್ಧರಿಸಿ ಆದೇಶ ನೀಡುತ್ತದೆ. ಈ ಆದೇಶದನುಸಾರ ಒಕ್ಕೂಟಗಳು ಮಾರಾಟ ಮಾಡಿ ನಿಗದಿಪಡಿಸಿದ ದರಗಳಂತೆ ಮೊತ್ತವನ್ನು ನೇರವಾಗಿ ಪಡೆಯುತ್ತಾರೆ. ಆದರೆ ಕೇರಳಾ ಹಾಲು ಮಹಾಮಂಡಳಿಗೆ ಹಾಲು ಮಾರಾಟ ಮಾಡಲು ಕಹಾಮವು ಮಿಲ್ಕ್ ಪೂಲಿಂಗ್ ಸ್ಕೀಂ ರಚಿಸಿದ್ದು ಇದರನ್ವಯ ಕಹಾಮ ಆದೇಶದಂತೆ ಒಕ್ಕೂಟಗಳು ಹೆಚ್ಚುವರಿ ಹಾಲನ್ನು ಕೇರಳಾ ಮಹಾಮಂಡಳಿಯಡಿ ಬರುವ ಡೇರಿಗಳಿಗೆ ಹಾಲು ರವಾನಿಸಿ ಇದರ ಮೊಬಲಗನ್ನು ಕಹಾಮ ಮುಖಾಂತರ ಒಕ್ಕೂಟಗಳಿಗೆ ಪಾವತಿ ಮಾಡುತ್ತದೆ.

ಹಾಲಿನ ಉತ್ಪನ್ನಗಳಾದ, SMP, WMP ಡೇರಿ ವೈಟ್ನರ್, ತುಪ್ಪ ಮತ್ತು ಬೆಣ್ಣೆಯನ್ನು ಘಟಕಗಳಿಂದ ಮತ್ತು ಒಕ್ಕೂಟಗಳಿಂದ ಖರೀದಿಸಿ, ಹೊರ ರಾಜ್ಯಗಳಲ್ಲಿರುವ ಮತ್ತು ಸ್ಥಳೀಯ ಸಂಸ್ಥೆಗಳಿಗೆ ಸರಬರಾಜು ಮಾಡುವ ಮೂಲಕ ಸಗಟು ವ್ಯವಹಾರವನ್ನು ಕೈಗೊಂಡಿರುತ್ತದೆ.

ಹಾಲು ಮತ್ತು ಹಾಲು ಉತ್ಪನ್ನಗಳ ಮಾರಾಟ ವೃದ್ದಿಗೊಳಿಸಲು ಪ್ರಚಾರ ಕಾರ್ಯಕ್ರಮ ಕೈಗೊಂಡಿದ್ದು ಈ ಸಂಬಂಧ ವರದಿ ಸಾಲಿನಲ್ಲಿ ರೂ.3,15,35,590–95 ಗಳ ಮೊಬಲಗು ಖರ್ಚು ಮಾಡಲಾಗಿದೆ. ಹಾಗು ಸೇಲ್ಸ್ ಪ್ರಮೋಷನ್ ಎಕ್ಸ್‌ಪೆನ್ಸಸ್ ಖಾತೆಯಡಿಯಲ್ಲಿ ರೂ.6,23,54,591–23 ಖರ್ಚು ಮಾಡಲಾಗಿದೆ. ಈ ಪೈಕಿ ದಕ್ಷಿಣ ಕರ್ನಾಟಕದ ಪ್ರತಿ ಹಾಲು ಒಕ್ಕೂಟಗಳಿಗೆ ಪ್ರಚಾರ ಕಾರ್ಯಕ್ರಮಕ್ಕಾಗಿ ರೂ. 15.00 ಲಕ್ಷಗಳ ಅನುದಾನ ಮತ್ತು ಉತ್ತರ ಕರ್ನಾಟಕದ ಪ್ರತಿ ಹಾಲು ಒಕ್ಕೂಟಗಳಿಗೆ ರೂ. 13.00 ಲಕ್ಷ ಅನುದಾನ ನೀಡಿದ್ದು ಸೇರಿಕೊಂಡಿದೆ. ಇದಲ್ಲದೆ ಫ್ರಾಂಚೀಸ್ ಔಟ್ ಲೆಟ್‌ಗಳನ್ನು ಸ್ಥಾಪಿಸಲು ಪ್ರತಿ ಔಟ್‌ಲೆಟ್‌ಗೆ ರೂ.50,000/– ಹಾಗೂ ನೂತನ ಪಾರ್ಲರ್ ಸ್ಥಾಪನೆಗೆ ರೂ.5.00 ಲಕ್ಷಗಳ ಅನುದಾನ ಸೇರಿರುತ್ತದೆ.

ರಾಜ್ಯ ಸರ್ಕಾರದ ಕ್ಷೀರಭಾಗ್ಯ ಯೋಜನೆಯನ್ನು ಕಹಾಮ ಮೂಲಕ ನಿರ್ವಹಿಸಲಾಗುತ್ತಿದ್ದು ವರದಿ ಸಾಲಿನಲ್ಲಿ ರೂ.684,81,26,861-89 ಮೌಲ್ಯದ WMP ಒಕ್ಕೂಟಗಳಿಂದ ಖರೀದಿಸಿ ಹಾಗೂ

S.R. & M.R. ASSOCIATES CHARTERED ACCOUNTANTS BANGALORE

ರೂ.724,73,93,882-00 ಮೌಲ್ಯದ WMP ರಾಜ್ಯದ ಸರ್ಕಾರಿ ಶಾಲೆ ಹಾಗೂ ಅಂಗನವಾಡಿಗಳಿಗೆ ಜಿಲ್ಲಾ ಪಂಚಾಯತ್ ಮತ್ತು ಶಿಶು ಅಭಿವೃದ್ಧಿ ಯೋಜನಾ ಕಛೇರಿಗಳ ಮುಖಾಂತರ ಮಾರಾಟ ಮಾಡಲಾಗಿದೆ.

ಇತರೇ :

(1) ಕಹಾಮದ ಉಪನಿಯಮ 29 ರಂತೆ ಕಾರ್ಯನಿರೂಪಣಾ ಸಮಿತಿಯ ಸದಸ್ಯರುಗಳ ವಿವರಗಳ ನೀಡಿದ್ದು ಉಪನಿಯಮ 30 ರಿಂದ 30.01.2015 ರಂತೆ ಈ ಸಮಿತಿಯ ಕರ್ತವ್ಯಗಳನ್ನು ವಿವರಿಸಿದೆ. ಇದರಂತೆ ವರದಿ ಸಾಲಿನಲ್ಲಿ ಈ ಸಮಿತಿಯು 12 ಬಾರಿ ಸೇರಿದ್ದು ಉಪನಿಯಮದ ಅನುಸಾರ ಕಾರ್ಯ ನಿರ್ವಹಿಸಿದೆ. ಸಮಿತಿ ಸಭೆಗಳ ನಡವಳಿಗಳನ್ನು ಲೆಕ್ಕಪರಿಶೋಧನಾ ವೇಳೆಯಲ್ಲಿ ಪರಿಶೀಲಿಸಿದ್ದು ಸಭೆಗಳಲ್ಲಿ ಕೆಳಕಂಡ ವಿಷಯಗಳ ಬಗ್ಗೆ ವಿಮರ್ಶೆ ಮಾಡಿರುವುದನ್ನು ಗಮನಿಸಿದೆ.

1. ಹಾಲು ಶೇಖರಣೆ, ಮಾರಾಟ ಮತ್ತು ಸಂಚಲನಾ.
2. ಅಂತರ ಡೇರಿ ಹಾಲು ಸಂಚಲನಾ
3. ಒಕ್ಕೂಟಗಳ ಮೂಲಭೂತ ಸೌಲಭ್ಯಗಳು.
4. ಹಾಲಿನ ಉತ್ಪನ್ನಗಳ ಉತ್ಪಾದನೆ ಮತ್ತು ಮಾರಾಟ
5. ಪಶು ಆಹಾರ ಕಚ್ಚಾ ಮಾಲು ಖರೀದಿ
6. ಪಶು ಆಹಾರ ಮತ್ತು ಖನಿಜ ಮಿಶ್ರಣ ಮಾರಾಟ
7. ಪ್ಯಾಟ್, ಎಸ್.ಎನ್.ಎಫ್. ಮತ್ತು ಫಿಲಂ ನಷ್ಟದ ಬಗ್ಗೆ ವಿಮರ್ಶೆ.
8. ಹಾಲು ಮತ್ತು ಹಾಲಿನ ಉತ್ಪನ್ನಗಳ ದರ ನಿಗಧಿ.
9. ಸ್ಟೆಪ್ ಯೋಜನೆ ವಿಮರ್ಶೆ.
10. ಸರ್ಕಾರದ ವಿವಿಧ ಯೋಜನೆ ಮತ್ತು ಅವಗಾಹನೆಗಳ ಬಗ್ಗೆ ವಿಮರ್ಶೆ.

(2). ನಂದಿನಿ ಬ್ರಾಂಡ್ ಹೆಸರಿನಲ್ಲಿ ಕುಡಿಯುವ ನೀರಿನ ಬಾಟಲ್ ಗಳನ್ನು ವಿವಿದ ಪರಿಮಾಣದಲ್ಲಿ ಕೋ-ಪ್ಯಾಕಿಂಗ್ ಮಾಡಿಸಿ ಮಾರುಕಟ್ಟೆಗೆ ಬಿಡುಗಡೆ ಮಾಡಲಾಗಿದೆ. ಕೋ-ಪ್ಯಾಕಿಂಗ್ ಮಾಡಲು ಶ್ರೀ.ಸಾಯಿರಂಗ ಎಂಟರ್ ಪ್ರೈಸಸ್ ರವರಿಗೆ ಗುತ್ತಿಗೆ ನೀಡಲಾಗಿದೆ ಈ ಸಂಸ್ಥೆಯು ಕಹಾಮದ ಬೇಡಿಕೆ ಅನುಸಾರ ಬಾಟಲ್‌ಗಳ ವಿತರಕರಾಗಿ ನೇಮಿಸಿದ M/s. A.R.Engerprises ರವರಿಗೆ ಸರಬರಾಜು ಮಾಡುತ್ತಾರೆ. ಈ ಮಾರಾಟದಿಂದ ಬಂದ ಆದಾಯ ಈ ಸಾಲಿಗೆ ರೂ.16,16,030-74 ಇರುತ್ತದೆ.

(4) ಖರೀದಿ ವಿಭಾಗ:

ಈ ವಿಭಾಗದಿಂದ ಕಹಾಮ ಕೇಂದ್ರ ಕಛೇರಿಗೆ ಬೇಕಾಗುವ ಸರಕುಗಳನ್ನು ಮತ್ತು ಪಶು ಆಹಾರ ಘಟಕಗಳಿಗೆ ಬೇಕಾಗುವ ಕಚ್ಚಾ ಪದಾರ್ಥಗಳನ್ನು ಖರೀದಿಸುವ ಪ್ರಕ್ರಿಯೆಯನ್ನು ಕೈಗೊಳ್ಳುತ್ತಿದೆ. ಅಲ್ಲದೆ ಒಕ್ಕೂಟಗಳಿಗೆ ಬೇಕಾಗುವ ಫಿಲಂ, ಪ್ಯಾಕಿಂಗ್ ಮೆಟೀರಿಯಲ್ಸ್ ಮತ್ತು ಇತರೇ (ಸಿ.ಪಿ.ಸಿ) ಪದಾರ್ಥಗಳನ್ನು ಸುಲಭವಾಗಿ ಖರೀದಿ ಮಾಡಲು ಉತ್ಪಾದಕರ/ಸರಬರಾಜುದಾರರ ಪಟ್ಟಿಯನ್ನು ತಯಾರಿಸುತ್ತಿದೆ. ಹಿಂದಿನ ಸಾಲಿನಲ್ಲಿ ಈ ಪ್ರಕ್ರಿಯೆ ಕೈಗೊಂಡಿದ್ದು ವರದಿ ಸಾಲಿನಲ್ಲೂ ಅಸ್ತಿತ್ವದಲ್ಲಿರುತ್ತದೆ.

S.R. & M.R. ASSOCIATES CHARTERED ACCOUNTANTS BANGALORE

(5) ಪಶು ಸಂಗೋಪನಾ ವಿಭಾಗ:

ಈ ವಿಭಾಗದ ಮುಖ್ಯ ಕಾರ್ಯ ಕೆಳಕಂಡಂತೆ ಇರುತ್ತದೆ.

1. ಹೆಚ್ಚಿನ ಗುಣಮಟ್ಟದ ಹಾಲು ಉತ್ಪಾದನೆಗಾಗಿ ವಿವಿಧ ರೀತಿಯ ಟೆಕ್ನಿಕಲ್ ಇನ್ ಪುಟ್ಸ್ ಒಕ್ಕೂಟಗಳಿಗೆ ನೀಡುವುದು.
2. ಪಶು ಆಹಾರ ಉತ್ಪಾದನೆಗಾಗಿ ಬೇಕಾಗುವ ಕಚ್ಚಾಮಾಲು ಸರಬರಾಜಿಗೆ ಖರೀದಿ ವಿಭಾಗಕ್ಕೆ ವಿವಿಧ ಪಶು ಆಹಾರ ಘಟಕಗಳಿಂದ ಮಾಹಿತಿ ಪಡೆದು ಖರೀದಿ ಇಂಡೆಂಟ್ ನೀಡುವುದು.
3. ಒಕ್ಕೂಟಗಳಿಗೆ ತಾಂತ್ರಿಕ ಸೌಲಭ್ಯ, ಮೂಲಭೂತ ಸೌಕರ್ಯಗಳು ಹಾಗೂ ಹಾಲು ಉತ್ಪಾದಕರ ಸಹಕಾರ ಸಂಘಗಳ ಕಟ್ಟಡ ನಿರ್ಮಿಸಲು ಅನುದಾನಕ್ಕೆ ಶಿಫಾರಸ್ಸು ಮಾಡುವುದು.
4. ಕೇಂದ್ರ ಮತ್ತು ರಾಜ್ಯ ಸರ್ಕಾರದಿಂದ ವಿವಿಧ ಯೋಜನೆಗಳಿಗಾಗಿ ಅನುದಾನ ಪಡೆಯುವುದು, ವಿತರಿಸುವುದು ಮತ್ತು ಇದಕ್ಕೆ ಸಂಬಂಧಿಸಿದಂತೆ ಬಳಕೆ ಪ್ರಮಾಣ ಪತ್ರಗಳನ್ನು ಒಕ್ಕೂಟ ಹಾಗೂ ಘಟಕಗಳಿಂದ ಪಡೆದು ಸಲ್ಲಿಸುವುದು.

(6) ಗುಣ ಭರವಸೆ ವಿಭಾಗ :

ಈ ವಿಭಾಗದಲ್ಲಿ ಹಾಲು ಮತ್ತು ಹಾಲಿನ ಉತ್ಪನ್ನಗಳು, ಕಚ್ಚಾ ಪದಾರ್ಥಗಳು, ಪ್ಯಾಕಿಂಗ್ ವಸ್ತುಗಳ ಗುಣಮಟ್ಟವನ್ನು ಪರೀಕ್ಷಿಸಿ ವರದಿ ನೀಡುವುದು ಈ ವಿಭಾಗದ ಮುಖ್ಯ ಕೆಲಸಗಳಾಗಿರುತ್ತವೆ. ಇದಲ್ಲದೆ ಹಾಲು ಒಕ್ಕೂಟಗಳಿಗೆ ಭೇಟಿ ನೀಡಿ ಹಾಲು ಮತ್ತು ಹಾಲಿನ ಉತ್ಪನ್ನಗಳನ್ನು ಪರಿಶೀಲಿಸುವುದು, ನಂದಿನ ಬ್ರಾಂಡ್ ಉತ್ಪನ್ನಗಳ ಮೇಲೆ ಸಾರ್ವಜನಿಕರಿಂದ ದೂರು ಬಂದಲ್ಲಿ ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳುವುದು ಈ ವಿಭಾಗದ ಕೆಲಸವಾಗಿರುತ್ತದೆ.

(7) ಹಣಕಾಸು ವಿಭಾಗ :

ಈ ವಿಭಾಗದ ಮುಖ್ಯ ಕಾರ್ಯ ಈ ಕೆಳಕಂಡಂತೆ ಇರುತ್ತದೆ.

1) ಕಹಾಮ ಕೇಂದ್ರ ಕಛೇರಿಯ ಲೆಕ್ಕಗಳನ್ನು ನಿರ್ವಹಿಸುವುದು.

2) ಕೇಂದ್ರ ಕಛೇರಿ ಮತ್ತು ಘಟಕಗಳ (ಮಾರಾಟ ಮಳಿಗೆ ಒಳಗೊಂಡು) ಲೆಕ್ಕಗಳನ್ನು ಕ್ರೋಢೀಕರಿಸುವುದು.

3) ಕೇಂದ್ರ ಕಛೇರಿ, ಘಟಕಗಳು, ಮಾರಾಟ ಮಳಿಗೆಗಳು ಹಾಗೂ ಒಕ್ಕೂಟಗಳ ಲೆಕ್ಕಗಳನ್ನು ಸಮನ್ವಯಗೊಳಿಸುವುದು.

4) ಕ್ರೋಢೀಕೃತ ಲೆಕ್ಕ ತ:ಖ್ತೆಗಳನ್ನು ತಯಾರಿಸಿ, ಆಡಳಿತ ಮಂಡಳಿ ಗಮನಕ್ಕೆ ತರುವುದು ಮತ್ತು ಲೆಕ್ಕಪರಿಶೋಧನೆ ಮಾಡಿಸುವುದು.

5) ಎಲ್ಲಾ ತರಹದ ತೆರಿಗೆ ಪಾವತಿಗೆ ಕ್ರಮ ಕೈಗೊಳ್ಳುವುದು.

6) ಲೆಕ್ಕ ಪತ್ರಗಳ ಪರಿಶೀಲನೆಗೆ ಲೆಕ್ಕ ಪರಿಶೋಧಕರ ನೇಮಕ ಮಾಡಲು ಕ್ರಮ ಕೈಗೊಳ್ಳುವುದು.

ಈ ವಿಭಾಗದಲ್ಲಿ ಮುಖ್ಯ ನಗದು ಪುಸ್ತಕ ಅಲ್ಲದೆ (Main Cash Book) ಉಪ ನಗದು ಪುಸ್ತಕ ನಿರ್ವಹಿಸಲಾಗುತ್ತಿದ್ದು ಉಪ ನಗದು ಪುಸ್ತಕಗಳ ವಿವರ ಕೆಳಕಂಡಂತೆ ಇರುತ್ತದೆ.

1) ಕ್ಷೀರ ಭಾಗ್ಯ ಯೋಜನೆಗೆ ಸಂಬಂದಿಸಿದ ನಗದು ಪುಸ್ತಕ

2) ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರ ಅನುಧಾನಗಳಿಗೆ ಸಂಬಂದಿಸಿದ ನಗದು ಪುಸ್ತಕ

3) ಸ್ಟೆಪ್ ಯೋಜನೆಗೆ ಸಂಬಂದಿಸಿದ ನಗದು ಪುಸ್ತಕ (ಸಂಬಂಧಪಟ್ಟ ವಿಭಾಗದಲ್ಲಿ ನಿರ್ವಹಿಸಲಾಗುತ್ತಿದೆ)

S.R. & M.R. ASSOCIATES CHARTERED ACCOUNTANTS BANGALORE

ಕ್ಷೀರ ಭಾಗ್ಯ ಯೋಜನೆ :

ರಾಜ್ಯ ಸರ್ಕಾರದ ಯೋಜನೆಯಂತೆ, ಸರ್ಕಾರದ ಶಾಲೆಗಳಿಗೆ ಮತ್ತು ಅಂಗನವಾಡಿ ಕೇಂದ್ರಗಳಿಗೆ ಕೆನೆಭರಿತ ಹಾಲಿನಪುಡಿ ಸರಬರಾಜು ಮಾಡಲಾಗುತ್ತಿದೆ. ಈ ಯೋಜನೆಗೆ ಸಂಬಂಧಿಸಿದ ಲೆಕ್ಕ ಪುಸ್ತಕಗಳು, ಮತ್ತು ಲೆಕ್ಕಪತ್ರಗಳನ್ನು ಪರಿಶೀಲಿಸಿದೆ, ಮತ್ತು ಪರಿಶೀಲಿಸಿದಾಗ ಮತ್ತು ಪರಿಶೀಲನಾಂಶಗಳ ವಿವರ ಕೆಳಕಂಡಂತೆ ಇರುತ್ತದೆ.

ದಿನಾಂಕ: 01.04.2019 ಕ್ಕೆ ರೂ.7,17,07,233-08 ರಷ್ಟು ಹಾಲಿನಪುಡಿ ಇದ್ದು, ವರದಿ ಸಾಲಿನಲ್ಲಿ ರೂ.6,84,81,26,861-89 ರಷ್ಟು ಹಾಲಿನ ಪುಡಿಯನ್ನು ವಿವಿಧ ಒಕ್ಕೂಟಗಳಿಂದ ಖರೀದಿ ಮಾಡಿ, ರೂ.724,73,93,882-00 ರಷ್ಟು ಹಾಲಿನ ಪುಡಿಯನ್ನು ರಾಜ್ಯದಲ್ಲಿನ ಸಿ.ಡಿ.ಪಿ.ಒ ಮತ್ತು ಜೆಡ್.ಪಿ ಗಳಿಗೆ ಸರಬರಾಜು ಮಾಡಿ, ದಿನಾಂಕ:31.03.2020 ರಂದು, ಬಾಕಿ ಉಳಿದಿರುವ ಹಾಲಿನ ಪುಡಿಗಳ ವಿವರ ಕೆಳಕಂಡಂತೆ ಇರುತ್ತದೆ.

ಕಛೇರಿ ವಿವರ	ದಿನಾಂಕ: 31.03.2020 ಕ್ಕೆ ಉಳಿದಿರುವ ಕೆ.ಜಿ.ಗಳಲ್ಲಿ	ಮೊತ್ತ (ರೂ.ಗಳಲ್ಲಿ)
WMP (CDPO)	1,80,987.01	4,27,74,245-00
WMP(ZP)	3,85,376.85	9,91,62,836-95
FMP(ZP) (Cardamom)	16,992.00	40,87,765-44
FMP (ZP) (chodolate)	8,538.00	20,53,986-66
ಒಟ್ಟು	**5,91,893.86**	**14,80,78,834-05**

ಈ ಯೋಜನೆಗೆ ಸಂಬಂಧಿಸಿದಂತೆ ದಿನಾಂಕ: 31.03.2020 ಕ್ಕೆ ಜವಾಬ್ದಾರಿ ಅಡಿಯಲ್ಲಿ ಜೆಡ್.ಪಿ ಗಳಿಂದ ಪಡೆದ ಮುಂಗಡ ಬಾಬ್ತು ಪಾವತಿಸಬೇಕಾದ ಮೊಬಲಗು ರೂ.73,65,36,477-00 ಇರುತ್ತದೆ. ಹಾಲಿನ ಪುಡಿ ಖರೀದಿ ಬಾಬ್ತು, ಒಕ್ಕೂಟಗಳಿಗೆ ರೂ.136,32,47,582-81 ಪಾವತಿಸಲು ಬಾಕಿ ಇರುತ್ತದೆ. ಪಾವತಿಸಬೇಕಾದ ಮೊಬಲಗಿನಲ್ಲಿ ರೂ.11,16,426.97 ಗಳ ಮೊಬಲಗು ಮದರ್ ಡೇರಿಗೆ ಪಾವತಿಸಲು ನಮೂದಿಸಲಾಗಿದ್ದು, ಈ ಮೊಬಲಗು ಹಿಂದಿನ ವರ್ಷಗಳಿಂದ ಬಾಕಿ ಇರುತ್ತದೆ. ಈ ಮೊಬಲಗು ಖೈದು ಮಾಡಲು ಕ್ರಮ ಕೈಗೊಳ್ಳುವುದು.

ಯೋಜನೆಯ ಆಸ್ತಿ ವಿವರಗಳಂತೆ ರೂ.14,80,78,834-05 ಗಳ ಆಖೈರು ದಾಸ್ತಾನು ಇರುತ್ತದೆ. ಒಕ್ಕೂಟಗಳಿಗೆ ನೀಡಿದ ಮುಂಗಡದ ಬಾಬ್ತು ದಿನಾಂಕ: 31.03.2020 ಕ್ಕೆ ಕೆ.ಎಂ.ಎಫ್.ಗೆ ಬರಬೇಕಾದ ಮೊಬಲಗು ರೂ.57,11,51,556-00, ಸಿ.ಡಿ.ಪಿ.ಒ ಗಳಿಂದ ಬರಬೇಕಾದ ಬಾಕಿ ಮೊಬಲಗು ರೂ.37,84,96,313-75 ಜೆಡ್.ಪಿ ಗಳಿಂದ ಬಾಕಿ ರೂ.79,29,45,683-66 ಬಾಕಿ ಇರುತ್ತದೆ. ಈ ಯೋಜನೆಗೆ ಸಂಬಂಧಿಸಿದಂತೆ 02 ಬ್ಯಾಂಕ್ ಖಾತೆಗಳು ತೆರೆದಿದ್ದು ದಿನಾಂಕ: 31.03.2020 ಕ್ಕೆ ಯೋಜನೆಗೆ ಸಂಬಂಧಿಸಿದ ನಗದು ಪುಸ್ತಕಕ್ಕೆ ತಾಳೆ ಇರುತ್ತದೆ.

(8) ಸ್ಟೆಪ್ – ಸಂಜೀವಿನಿ ವಿಭಾಗ:

ಭಾರತ ಸರ್ಕಾರ ಗ್ರಾಮೀಣ ಅಭಿವೃದ್ಧಿಗೆ ಅದರಲ್ಲೂ ಮಹಿಳೆಯರ ಸಬಲೀಕರಣಕ್ಕಾಗಿ ಸೃಷ್ಟಿಸಿದ ವೃತ್ತಿ ತರಬೇತಿ ಮತ್ತು ಉದ್ಯೋಗ ಬೆಂಬಲಿತ ಯೋಜನೆ (ಸ್ಟೆಪ್) ಮತ್ತು ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನ (NRLM) ಯೋಜನೆಗಳನ್ನು ಪ್ರಾರಂಭಿಸಿದ್ದು ಈ ಯೋಜನೆಗಳ

S.R. & M.R. ASSOCIATES CHARTERED ACCOUNTANTS BANGALORE

ಅನ್ವಯ ಕಹಾಮ ಮುಖಾಂತರ ಸಹಕಾರ ಸಂಸ್ಥೆಗಳಿಗೆ ಅನುದಾನ ನೀಡುತ್ತಿದ್ದು ಈ ವಿಭಾಗದ ಲೆಕ್ಕಪರಿಶೋಧನೆ ಕೈಗೊಂಡು ಪ್ರತ್ಯೇಕ ವರದಿ ಸಲ್ಲಿಸಲಾಗಿದೆ. ಬಂದ ಅನುದಾನವನ್ನು ಆಯಾ ಯೋಜನೆಗಳಿಗೆ ಖರ್ಚು ಮಾಡುತ್ತಿದ್ದು ಈ ಅನುದಾನಗಳನ್ನು ಯೋಜನಾವಾರು ಬ್ಯಾಂಕುಗಳಲ್ಲಿ ಖಾತೆ ತೆರೆದಿದ್ದು ಬಂದಂತಹ ಬಡ್ಡಿಯನ್ನು ಸಹ ಆಯಾ ಯೋಜನೆಗಳಿಗೆ ಮೀಸಲಿಟ್ಟು, ವರ್ಗಾಯಿಸಿ ಖರ್ಚುಮಾಡಲಾಗುತ್ತಿದೆ.

ವರದಿ ಸಾಲಿನಲ್ಲಿ ಸ್ಟೆಪ್-VIII (GOI) ಮತ್ತು ಎನ್.ಆರ್.ಎಲ್.ಎಂ–I ರ ಯೋಜನೆಗಳು ಚಾಲ್ತಿಯಲ್ಲಿರುತ್ತದೆ.

ಈ ಯೋಜನೆಗಳಿಗೆ ಸಂಬಂಧಿಸಿದ ಸಂಕ್ಷಿಪ್ತ ವಿವರ ಕೆಳಗೆ ವಿವರಿಸಿದೆ.

ಬಳಕೆಗೆ ಉಳಿದಿರುವ ಅನುದಾನದ ಮೊತ್ತ	1,23,90,273-59
ಒಕ್ಕೂಟಗಳಿಗೆ ಮತ್ತು ಇತರರಿಗೆ ನೀಡಬೇಕಾಗಿರುವ ಮೊತ್ತ	-
ಒಟ್ಟು ರೂ.	**1,23,90,273-59**
ಒಕ್ಕೂಟಗಳಿಗೆ ಮತ್ತು ಇತರರಿಗೆ ಯೋಜನೆಗಳಿಗೆ ನೀಡಿರುವ ಮುಂಗಡ	51,00,000-00
ಬ್ಯಾಂಕ್ ಖಾತೆಗಳಲ್ಲಿ ಉಳಿದಿರುವ ಮೊತ್ತ	72,90,273-59
ಒಟ್ಟು ರೂ.	**1,23,90,273-59**

ಮೇಲ್ಕಂಡ ಯೋಜನೆಗಳ ಜೊತೆ, ಕಹಾಮ ವತಿಯಿಂದ ಕಹಾಮ ಸಂಜೀವಿನಿ ಎಂಬ ಕಾರ್ಯಕ್ರಮವನ್ನು ರೂಪಿಸಲಾಗಿದ್ದು, ಈ ಯೋಜನೆಯ ಒಟ್ಟು ವೆಚ್ಚ ರೂ.7.06 ಕೋಟಿಗಳು, ಇದರಲ್ಲಿ ಕಹಾಮದ ಪಾಲು ರೂ.6.36 ಕೋಟಿ ಹಾಗೂ ಒಕ್ಕೂಟಗಳ ಪಾಲು ರೂ.0.70 ಕೋಟಿಗಳು, ಈ ಯೋಜನೆಯ ಕಾರ್ಯಕ್ರಮದ ಅನುಷ್ಠಾನಕ್ಕಾಗಿ ದಿನಾಂಕ:31.03.2020 ರವರೆಗೆ ಒಕ್ಕೂಟಗಳಿಗೆ ರೂ.3.27 ಕೋಟಿ ಮುಂಗಡ ಪಾವತಿಸಿದ್ದು, ಈ ಮುಂಗಡಕ್ಕೆ ಸಂಬಂಧಿಸಿದಂತೆ ರೂ.2.09 ಕೋಟಿಗೆ ಅನುದಾನ ಬಳಕೆ ಪ್ರಮಾಣ ಪತ್ರಗಳು ಬಂದು (utilisation certificate) ಲೆಕ್ಕ ಹೊಂದಾಣಿಕೆಯಾಗಿರುತ್ತದೆ. ಉಳಿದ ಮುಂಗಡಕ್ಕೆ ಮುಂದಿನ ಸಾಲಿನಲ್ಲಿ utilisation certificate ಗಳು ಬಂದಿದ್ದು ಲೆಕ್ಕ ಹೊಂದಾಣಿಕೆಯಾಗಿರುವುದಾಗಿ ತಿಳಿಸಿರುತ್ತಾರೆ.

31. 2008–09ನೇ ಸಾಲಿನ ಮರುಪರಿಶೀಲನಾ ವರದಿಯನ್ನು ಸದರಿ ಲೆಕ್ಕಪರಿಶೋಧನಾ ವರದಿಯಲ್ಲಿ ಅಳವಡಿಸಿಕೊಳ್ಳುವ ಬಗ್ಗೆ:

ಕಹಾಮ ಸಂಸ್ಥೆಯಲ್ಲಿ 2008–09 ನೇ ಸಾಲಿನಲ್ಲಿ ಹಾಲಿನ ಉತ್ಪನ್ನಗಳ ಸಗಟು ವ್ಯವಹಾರದಲ್ಲಿ ಸಂಸ್ಥೆ ಹಾಗೂ ವಿವಿಧ ಒಕ್ಕೂಟಗಳಲ್ಲಾಗಿರುವ ಆರ್ಥಿಕ ನಷ್ಟ ರೂ.70,86,586/– ಗಳಿಗೆ ಸಂಬಂಧಿಸಿದಂತೆ ಸಹಕಾರ ಸಂಘಗಳ ಕಾಯ್ದೆ 1959 ಕಲಂ 63 (11) ರಡಿಯಲ್ಲಿ ಪ್ರದತ್ತವಾದ ಅಧಿಕಾರದ ಮೇರೆಗೆ ಮುಂದಿನ ಸಾಲಿನ ಲೆಕ್ಕ ಪರಿಶೋಧನಾ ವರದಿಯಲ್ಲಿ ಪರಿಶೀಲಿಸಿ ಅಳವಡಿಸಿಕೊಳ್ಳುವಂತೆ ದಿನಾಂಕ: 09.11.2010 ರ ಆದೇಶದಂತೆ ಆಗಿನ ಸಹಕಾರ ಸಂಘಗಳ ಲೆಕ್ಕ ಪರಿಶೋಧನಾ, ಜಂಟಿ ನಿರ್ದೇಶಕರು ನಿಯಮ 441 ಕರ್ನಾಟಕ ಸಹಕಾರ ಹಾಲು ಉತ್ಪಾದಕರ ಮಹಾ ಮಂಡಳಿ, ಬೆಂಗಳೂರು ರವರಿಗೆ ಸೂಚಿಸಿಲಾಗಿತ್ತು.

ತದನಂತರ ಸದರಿ ಆದೇಶದ ಅಳವಡಿಕೆಗೆ ಸಂಬಂಧಪಟ್ಟಂತೆ ಕಹಾಮದ ಅಧಿಕಾರಿಗಳು ರಿಟ್ ಪಿಟಿಶನ್ ಸಂಖ್ಯೆ: 13337/2011 ಹಾಗೂ ರಿಟ್ ಪಿಟಿಶನ್ ಸಂಖ್ಯೆ: 1452/2011 ರ ರಿತ್ಯಾ ಗೌರವ

S.R. & B.R. ASSOCIATES CHARTERED ACCOUNTANTS BANGALORE

ಉಚ್ಚ ನ್ಯಾಯಲಯದ ಮೊರೆ ಹೋಗಿದ್ದು, ಗೌರವ ಕರ್ನಾಟಕ ಉಚ್ಚ ನ್ಯಾಯಲಯವು ಎರಡು ಪ್ರಕರಣಗಳಲ್ಲಿ ಪ್ರತ್ಯೇಕವಾಗಿ ತಡೆಯಾಜ್ಞೆಯನ್ನು ನೀಡಿರುತ್ತದೆ.

ಮರು ಪರಿಶೀಲನಾ ವರದಿಯನ್ನು ಪರಿಶೀಲಿಸಲಾಗಿ ಒಟ್ಟು 05 ಜನ ಅಧಿಕಾರಿಗಳ ಮೇಲೆ ಆರ್ಥಿಕ ನಷ್ಟದ ಜವಾಬ್ದಾರಿ ನಿಗದಿಪಡಿಸಿದ್ದು, ಇವುಗಳಲ್ಲಿ ಶ್ರೀ.ಐ.ಆರ್.ರಾಮಲಿಂಗೇಗೌಡ, ವ್ಯವಸ್ಥಾಪಕ ನಿರ್ದೇಶಕರು, (ನಿವೃತ್ತ) ರಿಟ್ ಪಿಟಿಶನ್ ಸಂಖ್ಯೆ: 14521/2011 ಹಾಗೂ ಶ್ರೀ.ಸಿ.ನರಸಿಂಹರೆಡ್ಡಿ ಇವರು ರಿಟ್ ಪಿಟಿಶನ್ ಸಂಖ್ಯೆ: 13337/2011 ಪ್ರಕಾರ ಗೌರವ ಕರ್ನಾಟಕ ಉಚ್ಚ ನ್ಯಾಯಲಯಕ್ಕೆ ಅಪೀಲು ಸಲ್ಲಿಸಿರುತ್ತಾರೆ.

ರಿಟ್ ಪಿಟಿಶನ್ ಸಂಖ್ಯೆ: 13337/2011 ನ್ಯಾಯಾಲಯದಲ್ಲಿ ದಿನಾಂಕ: 18.06.2012 ರಂದು ಇತ್ಯರ್ಥಗೊಳಿಸಿ ಪ್ರಕರಣವನ್ನು ಅಪೀಲುದಾರರ ಪರವಾಗಿ ಆದೇಶ ಹೊರಡಿಸಲಾಗಿತ್ತು. ನಂತರ ಸಹಕಾರ ಇಲಾಖೆಯು ಸದರಿ ಆದೇಶದ ವಿರುದ್ಧ ರಿಟ್ ಅಪೀಲು ಸಂಖ್ಯೆ: 8738/2012 ರ ಪ್ರಕಾರ ವಿಭಾಗೀಯ ಪೀಠದಲ್ಲಿ ಮೇಲ್ಮನವಿ ಸಲ್ಲಿಸಿದ್ದರು. ಈ ಮೊಕದ್ದಮೆಯನ್ನು ವಾದ-ವಿವಾದಗಳ ನಂತರ ವಿಭಾಗೀಯ ಪೀಠವು ದಿನಾಂಕ: 20.11.2019 ರಂದು ಆದೇಶ ನೀಡಿ ಸಹಕಾರ ಇಲಾಖೆಯ ಪರವಾಗಿ ಗೌರವ ಉಚ್ಚ ನ್ಯಾಯಲಯವು ತೀರ್ಪು ನೀಡಿರುತ್ತದೆ.

ಆದರೆ, ಇನ್ನೊಂದು ರಿಟ್ ಪಿಟಿಶನ್ ಸಂಖ್ಯೆ: 14521/2011 ರ ಪ್ರಕಾರ ತಡೆಯಾಜ್ಞೆಯು ಇನ್ನೂ ಚಾಲ್ತಿಯಲಿದ್ದು, ಈ ಬಗ್ಗೆ ಕ್ರಮವಿಡುವ ಬಗ್ಗೆ ಸಂಸ್ಥೆಯು ಕಾನೂನು ಅಭಿಪ್ರಾಯವನ್ನು ಪಡೆದಿದ್ದು, ಕಾನೂನು ಅಭಿಪ್ರಾಯದ ಪ್ರಕಾರ ಒಂದೇ ವಿಷಯಕ್ಕೆ ಸಂಬಂಧಪಟ್ಟಂತೆ ವ್ಯಾಜ್ಯಕ್ಕೆ ನ್ಯಾಯಲಯದ ತಡೆಯಾಜ್ಞೆ ಇರುವಾಗ ಈ ಬಗ್ಗೆ ಕ್ರಮ ಕೈಗೊಳ್ಳುವುದು ನ್ಯಾಯಲಯದ ನಿಂದನೆಯಾಗುವುದಾಗಿಯೂ ತಿಳಿಸಿರುತ್ತಾರೆ.

ಈ ಬಗ್ಗೆ ದಿನಾಂಕ: 30.09.2020 ರಂದು ನಿರ್ದೇಶಕರು, ಲೆಕ್ಕಪರಿಶೋಧನಾ ಇಲಾಖೆಗೆ ಪತ್ರ ಮುಖೇನ ತಿಳಿಸಿ, ಸೂಕ್ತ ಮಾರ್ಗದರ್ಶನಕ್ಕೆ ಕೋರಲಾಗಿ ಸದರಿಯವರು ಒಂದೇ ವಿಷಯಕ್ಕೆ ಸಂಬಂಧಪಟ್ಟಂತೆ ನ್ಯಾಯಲಯದಲ್ಲಿ ತಡೆಯಾಜ್ಞೆ ಇದ್ದಾಗ್ಯೂ ಸಹ ಒಂದು ವ್ಯಾಜ್ಯದಲ್ಲಿ ನ್ಯಾಯಾಲಯವು ಇಲಾಖೆಯ ಅಪೀಲನ್ನು ಎತ್ತಿ ಹಿಡಿದಿರುವುದರಿಂದ ಇನ್ನೊಂದು ತಡೆಯಾಜ್ಞೆಗೆ ಮಾನ್ಯತೆ ಇಲ್ಲದೇ ಇರುವುದರಿಂದ 2008-09 ರ ಮರುಪರಿಶೀಲನಾ ವರದಿಯನ್ನು ಸದರಿ ಸಾಲಿನಲ್ಲಿ ಅಳವಡಿಸಿಕೊಳ್ಳಲು ಪತ್ರ ಸಂಖ್ಯೆ: ತಪಷ/ಬೆಂವಿ/ಕೆಎಂಎಫ್/2020-21/688 ದಿನಾಂಕ: 19.10.2020 ರ ಪ್ರಕಾರ ನಿರ್ದೇಶನ ನೀಡಿರುತ್ತಾರೆ. ಸದರಿ ಮಾಹಿತಿಯನ್ನು ಸಂಸ್ಥೆಗೆ ದಿನಾಂಕ: 21.10.2020 ರ ಪ್ರಕಾರ ಆರ್ಥಿಕ ತಃಖ್ತೆಯಲ್ಲಿ ಮರುಪರಿಶೀಲನಾ ವರದಿಯನ್ನು ಅಳವಡಿಸಿ ಪರಿಷ್ಕೃತ ತಃಖ್ತೆಗಳನ್ನು ನೀಡುವಂತೆ ಕೋರಿ ಪತ್ರ ನೀಡಲಾಗಿರುತ್ತದೆ.

ಸಂಸ್ಥೆಯು ಇದಕ್ಕೆ ಸಂಬಂಧ ಪಟ್ಟಂತೆ ಅಡ್ವೋಕೇಟ್ ಜನರಲ್, ಕಾನೂನು ಇಲಾಖೆ, ಕರ್ನಾಟಕ ಸರ್ಕಾರ ಇವರಿಗೆ ಈ ಬಗ್ಗೆ ಅಭಿಪ್ರಾಯ ಕೋರಿ ದಿನಾಂಕ: 23.10.2020 ರಂದು ಪತ್ರ ಬರೆದು, ಇವರಿಂದ ದಿನಾಂಕ: 28.10.2020 ರಂದು ಅಭಿಪ್ರಾಯ ಪಡೆದು ಲೆಕ್ಕಪರಿಶೋಧನೆಗೆ ಹಾಜರುಪಡಿಸಿದ್ದು, ಅಡ್ವೋಕೇಟ್ ಜನರಲ್ ರವರ ಅಭಿಪ್ರಾಯವೂ ಸಹ ಈ ಮೊದಲು ಸಂಸ್ಥೆಯು ಕಾನೂನು ಸಲಹೆಗಾರರಿಂದ ಪಡೆದ ಅಭಿಪ್ರಾಯವೂ ಒಂದೇ ಆಗಿರುತ್ತದೆ.

ಅಡ್ವೋಕೇಟ್ ಜನರಲ್, ಕಾನೂನು ಇಲಾಖೆ, ಕರ್ನಾಟಕ ಸರ್ಕಾರ ಇವರು ಅಭಿಪ್ರಾಯದಲ್ಲಿ ರಿಟ್ ಪಿಟಿಶನ್ ಸಂಖ್ಯೆ: 14521/2011 ಕ್ಕೆ ನ್ಯಾಯಾಲಯದಲ್ಲಿ ತಡೆಯಾಜ್ಞೆ ಚಾಲ್ತಿಯಲ್ಲಿರುವಾಗ, 2008-09 ರ ಸಾಲಿನ ಮರುಪರಿಶೀಲನಾ ವರದಿಯನ್ನು 2019-20 ನೇ ಸಾಲಿನಲ್ಲಿ ಅಳವಡಿಸಿಕೊಳ್ಳುವುದು

S.R. & M.R. ASSOCIATES CHARTERED ACCOUNTANTS BANGALORE

ನ್ಯಾಯಾಲಯದ ಆಜ್ಞೆಯ ಉಲ್ಲಂಘನೆಯಾಗುವುದಾಗಿ ಸ್ಪಷ್ಟವಾಗಿ ತಿಳಿಸಿರುವುದರಿಂದ ಹಾಗೂ ಈ ಬಗ್ಗೆ ನಿರ್ದೇಶಕರು, ಲೆಕ್ಕಪರಿಶೋಧನಾ ಇಲಾಖೆಯು ಸದರಿ ತಡೆಯಾಜ್ಞೆಯನ್ನು ತೆರವುಗೊಳಿಸಲು ಕ್ರಮವಿಡಬಹುದಾಗಿದೆ ಎಂದು ತಿಳಿಸಿರುವ ಹಿನ್ನೆಲೆಯಲ್ಲಿ ಮರುಪರಿಶೀಲನಾ ವರದಿಯ ಕಂಡಿಕೆಗಳನ್ನು ಸದರಿ ಸಾಲಿನಲ್ಲಿ ಅಳವಡಿಸಿಕೊಳ್ಳುವುದನ್ನು ಕೈಬಿಡಲಾಗಿದೆ. ಅಡ್ವೋಕೇಟ್ ಜನರಲ್, ಕಾನೂನು ಇಲಾಖೆ, ಕರ್ನಾಟಕ ಸರ್ಕಾರ ಇವರು ನೀಡಿರುವ ಅಭಿಪ್ರಾಯದ ಪ್ರತಿಯನ್ನು ವರದಿಗೆ ಲಗತ್ತಿಸಲಾಗಿದೆ.

32. ಲೆಕ್ಕಪರಿಶೋಧನೆಯಲ್ಲಿ ಗಮನಿಸಿದ ಪ್ರಮುಖ ಅಂಶಗಳು:-

1) ಅನೇಕ ಲೆಕ್ಕಗಳಲ್ಲಿ ಪೈಸೆಗಳನ್ನು ಲೆಕ್ಕ ಮಾಡಿಕೊಳ್ಳಲಾಗುತ್ತಿದ್ದು ಇವುಗಳನ್ನು ರೌಂಡ್ ಆಫ್ ಮಾಡಿ ರೂಪಾಯಿ ಮಾತ್ರ ಇರುವಂತೆ ಲೆಕ್ಕ ಮಾಡಿಕೊಳ್ಳಲು ತಿಳಿಸಿದೆ.

2) ಕಹಾಮ ಘಟಕಗಳು ಮತ್ತು ಮಾರಾಟ ಮಳಿಗೆಗಳಲ್ಲಿ ಗಮನಿಸಿದ ನ್ಯೂನ್ಯತೆಗಳನ್ನು ಸಂಬಂಧಿಸಿದ ಘಟಕ/ಮಾರಾಟ ಮಳಿಗೆಗಳ ಕಂಡಿಕೆಗಳಲ್ಲಿ ವಿವರಿಸಿದ್ದು, ಇವುಗಳ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಲು ಸೂಚಿಸಿದೆ.

32. ಲೆಕ್ಕಪರಿಶೋಧನಾ ವರ್ಗೀಕರಣ :

2018-19 ನೇ ಸಾಲಿಗೆ ಈ ಸಂಸ್ಥೆಯು "ಎ" ತರಗತಿಯಲ್ಲಿ ವರ್ಗೀಕರಿಸಲಾಗಿದ್ದು 2019-20 ನೇ ಸಾಲಿಗೂ "ಎ" ತರಗತಿಯಲ್ಲಿ ವರ್ಗೀಕರಿಸಲಾಗಿದೆ.

33. 2019-20 ನೇ ಸಾಲಿನ ವರದಿಗೆ ಅಡಕಗಳು :

(1) ಜಮಾ ಖರ್ಚು ತ:ಖ್ತೆ
(2) ಉತ್ಪಾದನಾ ಮತ್ತು ವ್ಯಾಪಾರ ತ:ಖ್ತೆ
(3) ಲಾಭ ನಷ್ಟದ ತ:ಖ್ತೆ
(4) ಆಸ್ತಿ ಜವಾಬ್ದಾರಿ ತ:ಖ್ತೆ
(5) ಕುಳುವಾರು ಪಟ್ಟಿಗಳು
(6) ಆಡಳಿತ ಮಂಡಳಿಯ ಕಾರ್ಯಕಾರಿ ದೃಢೀಕರಣ ಪತ್ರ
(7) ಲೆಕ್ಕಪರಿಶೋಧನಾ ವರ್ಗೀಕರಣ ತ:ಖ್ತೆ

ಸ್ಥಳ: ಬೆಂಗಳೂರು
ದಿನಾಂಕ: 28.10.2020

ಮೆ: ಎಸ್.ಆರ್ ಅಂಡ್ ಎಂ.ಆರ್ ಅಸೋಸಿಯೇಟ್ಸ್
ಚಾರ್ಟರ್ಡ್ ಅಕೌಂಟೆಂಟ್ಸ್
(ನೋಂದಣಿ ಸಂಖ್ಯೆ: 008094S)

S.R. & M.R. ASSOCIATES CHARTERED ACCOUNTANTS BANGALORE

ಸಿ.ಎ. ಎಸ್.ಆರ್. ರಘುನಾಥ
ಪಾಲುದಾರರು
(ಸದಸ್ಯತ್ವ ಸಂಖ್ಯೆ: 205503)

ಲೆಕ್ಕ ಪರಿಶೋಧನಾ ವರ್ಗೀಕರಣ ತ:ಖ್ತೆ : 2019–20 ನೇ ಸಾಲಿಗೆ

ಸುತ್ತೋಲೆ ಸಂಖ್ಯೆ: CAD/AFR I/A.1.6/81-82 ದಿನಾಂಕ: 16.09.1981

ಕ್ರ.ಸಂ	ವಿವರ	ಹೌದು/ಇಲ್ಲ
1	ಸಹಕಾರ ಸಂಘಗಳ ನಿಬಂಧಕರಿಂದ ನಿಗಧಿಪಡಿಸಲಾದ ಪುಸ್ತಕಗಳನ್ನು ಇಡಲಾಗಿದೆಯೇ?	ಹೌದು
2	ತಹಲ್ ವರೆವಿಗೂ ಬಾಕಿ ಇಲ್ಲದೆ ಲೆಕ್ಕಗಳನ್ನು ಬರೆದಿಡಲಾಗಿದೆಯೇ ? ಹಾಗೂ ಎಲ್ಲಾ ಆರ್ಥಿಕ ತ:ಖ್ತೆಗಳನ್ನು ತಪಶೀಲುಗಳೊಂದಿಗೆ ವಿಳಂಬವಿಲ್ಲದೆ ಆಡಿಟ್‌ಗೆ ಒದಗಿಸಲಾಗಿದೆಯೇ ?	ಹೌದು
3	ಆಡಿಟ್‌ನಲ್ಲಿ ತೋರಿಸಿರುವ ಬಹುತೇಕ ದೋಷಗಳಿಂದ ಸಂಸ್ಥೆಯು ಮುಕ್ತವಾಗಿದೆಯೇ ?	ಹೌದು
4	ಸದಸ್ಯರು ತಾವು ಪಡೆದ ಸಾಲವನ್ನು ಸುಸ್ತಿ ಇಲ್ಲದೆ ಮರುಪಾವತಿಸುತ್ತಿದ್ದಾರೆಯೇ ?	ಅನ್ವಯವಾಗುವುದಿಲ್ಲ
5	ಆಡಳಿತ ವೆಚ್ಚಗಳು ಯಥೋಚಿತವಾಗಿದೆಯೆ ?	ಹೌದು
6	ಆಡಿಟ್ ಆದ ವರ್ಷಕ್ಕೆ ಸಂಸ್ಥೆಯು ನಷ್ಟವಿಲ್ಲದೆ ಕಾರ್ಯ ನಿರ್ವಹಿಸಿದೆಯೇ ?	ಹೌದು
7	ಸಂಸ್ಥೆಯ ಸದಸ್ಯತ್ವ ಮತ್ತು ವ್ಯವಹಾರಗಳು ಅದರ ಪೋಟ ನಿಯಮಗಳ ಪ್ರಕಾರ ಇದೆಯೇ ?	ಹೌದು
8	ಕಾರ್ಯಕಾರಿ ಮಂಡಳಿಯವರು ಸಂಸ್ಥೆಯಲ್ಲಿ ಪೋಟ ನಿಯಮ ಮತ್ತು ಇದರ ಮೇಲೆ ನಿರ್ಧರಿಸಿದ ಇತರೆ ನಿಯಮಗಳನ್ನು ಪಾಲಿಸುತ್ತಿದ್ದಾರೆಯೇ ?	ಹೌದು
9	ಹಣಕ್ಕೆ ಪರಿವರ್ತಿಸಬಹುದಾದ ಆಸ್ತಿಗಳು ಜವಾಬ್ದಾರಿಗಳಿಗೆ ಅನುಸಾರವಾಗಿದೆಯೇ ?	ಹೌದು
10	ಸಂಸ್ಥೆಯ ವ್ಯವಹಾರಗಳು ತಡೆಯಿಂದ ಮುಕ್ತವಾಗಿದೆಯೇ ?	ಹೌದು

ಸಂಸ್ಥೆಯನ್ನು 2019–20 ನೇ ಸಾಲಿಗೆ 'ಎ' ತರಗತಿಯಲ್ಲಿ ವರ್ಗೀಕರಿಸಿದೆ.

ಸ್ಥಳ: ಬೆಂಗಳೂರು
ದಿನಾಂಕ: 28.10.2020

ಮೆ: ಎಸ್.ಆರ್ ಅಂಡ್ ಎಂ.ಆರ್ ಅಸೋಸಿಯೇಟ್ಸ್
ಚಾರ್ಟರ್ಡ್ ಅಕೌಂಟೆಂಟ್ಸ್
(ನೋಂದಣಿ ಸಂಖ್ಯೆ: 008094S)

S.R. & M.R. ASSOCIATES CHARTERED ACCOUNTANTS BANGALORE

ಸಿ.ಎ. ಎಸ್.ಆರ್. ರಘುನಾಥ
ಪಾಲುದಾರರು
(ಸದಸ್ಯತ್ವ ಸಂಖ್ಯೆ: 205503)

ಕಾರ್ಯಕಾರಿ ಮಂಡಳಿಯವರ ದೃಢೀಕರಣ ಪತ್ರ

ನಾವು ಈ ಕೆಳಗೆ ಸಹಿ ಮಾಡಿರುವ ಕರ್ನಾಟಕ ಸಹಕಾರಿ ಹಾಲು ಉತ್ಪಾದಕರ ಮಹಾಮಂಡಳಿ ನಿಯಮಿತ., ಬೆಂಗಳೂರು ಇದರ ಕಾರ್ಯಕಾರಿ ಮಂಡಳಿಯವರು ಈ ಕೆಳಗಿನಂತೆ ದೃಢೀಕರಿಸುತ್ತೇವೆ.

1. ದಿನಾಂಕ: 31.03.2020 ಕ್ಕೆ ಇದ್ದ ನಗದು ರೂ.13,24,161-00 ಗಳನ್ನು ಭೌತಿಕವಾಗಿ ಪರಿಶೀಲಿಸಿ ಸರಿಯಾಗಿ ಇರುವ ಬಗ್ಗೆ ದೃಢೀಕರಿಸುತ್ತೇವೆ.
2. ದಿನಾಂಕ: 31.03.2020 ಕ್ಕೆ ವಿವಿಧ ಬ್ಯಾಂಕು ಖಾತೆಗಳಲ್ಲಿ ಇರುವಒಟ್ಟು ರೂ.313,21,02,204-87 ಗಳು ಬ್ಯಾಂಕು ಮತ್ತು ಸಂಸ್ಥೆಯ ಲೆಕ್ಕಗಳ ಸಮನ್ವಯ ಪಟ್ಟಿ ತಯಾರಿಸಿದ ನಂತರ ಪಾಸ್ ಪುಸ್ತಕ ದೃಢೀಕರಣ ಶಿಲ್ಕು ಸರಿಯಾಗಿರುವ ಬಗ್ಗೆ ದೃಢೀಕರಿಸುತ್ತೇವೆ.
3. ದಿನಾಂಕ:31.03.2020 ಕ್ಕೆ ವಿವಿಧ ಷೇರು ಮತ್ತು ಠೇವಣಿಗಳಲ್ಲಿ ಹೂಡಿಕೆ ಮೊತ್ತ ರೂ.7,17,05,600-00 ಗಳು ಭದ್ರವಾಗಿದ್ದು ಅವುಗಳಿಗೆ ಸಂಬಂಧಿಸಿದಂತೆ ಪಾಸ್ ಪುಸ್ತಕ, ಷೇರುಪತ್ರ ಮತ್ತು ಇತರೆ ದಾಖಲಾತಿಗಳು ಶ್ರೀ. ರಾಜು ಕೆ. ಇವರ ಅಭಿರಕ್ಷೆಯಲ್ಲಿ ಪರಿಶೀಲಿಸಿ ಇವು ಸರಿಯಿರುವ ಬಗ್ಗೆ ದೃಢೀಕರಿಸುತ್ತೇವೆ.
4. ದಿನಾಂಕ:31.03.2020ಕ್ಕೆ ಸಂಸ್ಥೆಗೆ ಎಲ್ಲಾ ವಿವಿಧ ಬರತಕ್ಕ ಸಾಲ ಮತ್ತು ಮುಂಗಡಗಳು ರೂ.1039,17,13,241-38 ಗಳಿದ್ದು ಇವುಗಳಲ್ಲಿ ಯಾವುದೇ ಮುಳುಗುವ ಸಾಲಗಳಿಲ್ಲವೆಂದು ದೃಢೀಕರಿಸುತ್ತೇವೆ.
5. ದಿನಾಂಕ:31.03.2020 ಕ್ಕೆ ಸಂಸ್ಥೆಯಲ್ಲಿ ರೂ.5,60,55,301-15 (Gross) ಗಳು ಪೀಠೋಪಕರಣಗಳು ಜೋಡಣೆಗಳು ಮುಂತಾದ ಚರಾಸ್ತಿಗಳು ಸಂಸ್ಥೆಯ ವಶದಲ್ಲಿದ್ದು ವರ್ಷಾಂತ್ಯಕ್ಕೆ ಅವು ಸುಸ್ಥಿತಿಯಲ್ಲಿದ್ದು, ಭೌತಿಕವಾಗಿ ಪರಿಶೀಲಿಸಿ ದೃಢೀಕರಿಸುತ್ತೇವೆ.
6. ದಿನಾಂಕ:31.03.2020 ಕ್ಕೆ ಸಂಸ್ಥೆಯಲ್ಲಿ ರೂ.3,94,23,050-45(Gross) ಗಳ ಮೌಲ್ಯದ ವಾಹನಗಳಿದ್ದು, ಸದರಿ ವಾಹನಗಳ ಬಗ್ಗೆ ಸೂಕ್ತ ಅಭಿರಕ್ಷೆಯ ವ್ಯವಸ್ಥೆ ಮಾಡಲಾಗಿದ್ದು, ಸುಸ್ಥಿತಿಯಲ್ಲಿರುತ್ತವೆ. ಮತ್ತು ಅವುಗಳಿಗೆ ಸಂಬಂಧಿಸಿದ ನೊಂದಣಿ, ವಿಮೆ,ಚಾಲನೆಗಳಿಗೆ ಸಂಬಂಧಿಸಿದ ದಾಖಲೆಗಳು ಸಂಸ್ಥೆಯಲ್ಲಿದ್ದು ಅವು ಸರಿ ಇರುತ್ತವೆ. ಹಾಗೂ ಅವಶ್ಯವಿರುವ ವಾಹನ ತೆರಿಗೆಗಳನ್ನು ಸರ್ಕಾರಕ್ಕೆ ಪಾವತಿಸಲಾಗಿದೆಯೆಂದು ದೃಢೀಕರಿಸುತ್ತೇವೆ.
7. ದಿನಾಂಕ:31.03.2020 ಕ್ಕೆ ಸಂಸ್ಥೆಯಲ್ಲಿ ರೂ.1058,94,74,169-59 (Gross) ಗಳ ಸ್ಥಿರಾಸ್ಥಿಗಳಿದ್ದು ಈ ಎಲ್ಲಾ ಆಸ್ತಿಗಳ ಒಡೆತನಕ್ಕೆ ಸಂಬಂಧಿಸಿದಂತೆ ಮೂಲ ದಾಖಲೆಗಳು ಸಂಸ್ಥೆಯ ಅಧಿಕೃತ ಪದಾಧಿಕಾರಿಗಳ ಅಭಿರಕ್ಷೆಯಲ್ಲಿದ್ದು ಈ ಆಸ್ತಿಗಳಿಗೆ ಸಂಬಂಧಿಸಿದಂತೆ ಶಾಸನಬದ್ಧವಾಗಿ ಪಾವತಿಸಬೇಕಾದ ಎಲ್ಲಾ ವಿಧದ ಕರಗಳನ್ನು ಸಂಬಂಧಿಸಿದ ಇಲಾಖೆಗೆ ಪ್ರಾಧಿಕಾರಕ್ಕೆ ಪಾವತಿಸಿದೆ ಮತ್ತು ಈ ಎಲ್ಲಾ ಆಸ್ತಿಗಳು ಸುಸ್ಥಿತಿಯಲ್ಲಿ ಸಂಸ್ಥೆಯ ಒಡೆತನದಲ್ಲಿ ಇರುತ್ತದೆಂದು ದೃಢೀಕರಿಸುತ್ತೇವೆ.

S.R. & M.R. ASSOCIATES CHARTERED ACCOUNTANTS BANGALORE

8. ದಿನಾಂಕ:31.03.2020 ಕ್ಕೆ ಸಂಸ್ಥೆಯಲ್ಲಿ ರೂ.402,88,98,646-35 ಗಳ ಮೌಲ್ಯದ ವ್ಯಾಪಾರಕ್ಕೆ ಸಂಬಂಧಿಸಿದ ಶಿಲ್ಕು ದಾಸ್ತಾನು ಇದ್ದು, ಇವುಗಳ ಮೂಲ ಬೆಲೆ ಅಥವಾ ಮಾರುಕಟ್ಟೆ ಬೆಲೆ ಯಾವುದು ಕಡಿಮೆ ಇದೆಯೋ ಅದಕ್ಕೆ ಅನುಸರಿಸಿ ಮೌಲ್ಯಮಾಪನ ಮಾಡಲಾಗಿದೆ ಮತ್ತು ಭೌತಿಕಪರಿಶೀಲನೆಯ ನಂತರ ದಾಸ್ತಾನು ಸುಸ್ಥಿತಿಯಲ್ಲಿ ಇರುತ್ತದೆ ಹಾಗೂ ಸದರಿ ದಾಸ್ತಾನು ಸರಕು ಸಂಸ್ಥೆಯ ವಶದಲ್ಲಿದ್ದು ಸೂಕ್ತ ಅಭಿರಕ್ಷೆಯ ವ್ಯವಸ್ಥೆಯಲ್ಲಿದೆಯೆಂದು ದೃಢೀಕರಿಸುತ್ತೇವೆ.

9. ದಿನಾಂಕ:31.03.2020 ಕ್ಕೆ ಸಂಸ್ಥೆಯಲ್ಲಿ ರೂ.1661,70,55,972-15 ಗಳ ಇತರೆ ಕೊಡತಕ್ಕ ಬಾಕಿಗಳಿದ್ದು ಇವುಗಳಿಗೆ ಸೂಕ್ತ ಕುಳುವಾರು ಪಟ್ಟಿಗಳನ್ನು ಹೊಂದಿದ್ದು ವಾಸ್ತವಿಕ ಧಾರಕರಿಗೆ ನೈಜವಾಗಿ ಕೊಡತಕ್ಕ ಬಾಕಿಗಳಿವೆ ಎಂದು ದೃಢೀಕರಿಸುತ್ತೇವೆ.

10. ದಿನಾಂಕ:31.03.2020 ಕ್ಕೆ ಸಂಸ್ಥೆಗೆ ಬರತಕ್ಕಸಂಸ್ಥೆಗೆ ಕೊಡತಕ್ಕ ಎಲ್ಲಾ ಬಾಕಿಗಳಿಗೆ ಹಾಗೂ ಹೂಡಿಕೆಗಳಿಗೆ ಸಂಬಂಧಿಸಿದಂತೆ ವಾಸ್ತವಿಕ ವ್ಯಕ್ತಿ, ಸಂಸ್ಥೆಗಳಿಗೆ ಬಾಕಿಗಳು ಸರಿ ಇರುವ ಬಗ್ಗೆ ದೃಢೀಕರಣವನ್ನು ಪಡೆಯಲಾಗಿದೆಯೆಂದು ದೃಢೀಕರಿಸುತ್ತೇವೆ.

11. ದಿನಾಂಕ:31.03.2020 ಕ್ಕೆ ಸಂಸ್ಥೆಗೆ ರೂ.262,78,41,637-64 ಇತರೆ ಬರತಕ್ಕ ಬಾಕಿಗಳಿದ್ದು ಸೂಕ್ತ ಕುಳುವಾರು ಪಟ್ಟಿಗಳು ಲಭ್ಯವಿದ್ದು ವಾಸ್ತವಿಕ ವ್ಯಕ್ತಿ ಸಂಸ್ಥೆಗಳಿಂದ ಬರತಕ್ಕ ನೈಜ ಬಾಕಿಗಳಾಗಿರುತ್ತವೆ. ಈ ಪೈಕಿ ಯಾವುದೇ ಮೊಬಲಗು ಹೋಕು-ಬಾಕಿ ಅಥವಾ ಮುಳುಗಬಹುದಾದ ಬಾಕಿ ಆಗಿರುವುದಿಲ್ಲವೆಂದು ದೃಢೀಕರಿಸುತ್ತೇವೆ.

12. ನಮ್ಮ ಜ್ಞಾನ ಮತ್ತು ತಿಳುವಳಿಕೆಗೆ ಬಂದಂತೆ ಸಂಸ್ಥೆಯ ವ್ಯವಹಾರದಲ್ಲಿ ಪ್ರಸಕ್ತ 2019-20 ನೇ ಸಾಲಿನ ಹಣ ಶಿಲ್ಕು ದಾಸ್ತಾನು ಮತ್ತು ಇತರೆ ಸ್ಥಿರ ಚರಾಸ್ಥಿಗಳ ಅವ್ಯವಹಾರ ಜರುಗಿಲ್ಲವೆಂದು ದೃಢೀಕರಿಸುತ್ತೇವೆ.

13. ಸಂಸ್ಥೆಯ ಕಟ್ಟಡ, ವಾಹನ, ಯಂತ್ರೋಪಕರಣಗಳ ದಾಸ್ತಾನು, ಸರಕು, ನಗದು, ಆಭರಣಗಳು ಇತ್ಯಾದಿಗಳ ಸುರಕ್ಷತೆಗಳು ಬೆಂಕಿ ಹಾಗೂ ವಾಯುಗಳ ಅಪಾಯಗಳ ಬಗ್ಗೆ ಅವಶ್ಯವಿರುವ ಸೂಕ್ತ ವಿಮೆ ಮಾಡಿಸಲಾಗಿದೆಯೆಂದು ದೃಢೀಕರಿಸುತ್ತೇವೆ.

ದಿನಾಂಕ : 28.10.2020
ಸ್ಥಳ : ಬೆಂಗಳೂರು

ವ್ಯವಸ್ಥಾಪಕ ನಿರ್ದೇಶಕರು
ಕರ್ನಾಟಕ ಸಹಕಾರಿ ಹಾಲು ಮಹಾಮಂಡಳಿ ನಿಯಮಿತ.,
ಬೆಂಗಳೂರು

S.R. & A.R. ASSOCIATES BANGALORE CHARTERED ACCOUNTANTS

ಲೆಕ್ಕಪರಿಶೋಧಕರ ದೃಢೀಕರಣ ಪತ್ರ

ಈ ಕೆಳಗೆ ಸಹಿ ಮಾಡಿರುವ ಮೆ: ಎಸ್.ಆರ್ ಅಂಡ್ ಎಂ.ಆರ್ ಅಸೋಸಿಯೇಟ್ಸ್, ಚಾರ್ಟರ್ಡ್ ಅಕೌಂಟೆಂಟ್ಸ್, ನಂ.2885, 14ನೇ ಮುಖ್ಯ ರಸ್ತೆ, ಇ-ಬ್ಲಾಕ್, ಎರಡನೇ ಹಂತ, ರಾಜಾಜಿನಗರ, ಬೆಂಗಳೂರು-560010 ಆದ ನಾವು ಕರ್ನಾಟಕ ಸಹಕಾರಿ ಹಾಲು ಉತ್ಪಾದಕರ ಮಹಾಮಂಡಳಿ ನಿಯಮಿತ (ಕಹಾಮ) ಬೆಂಗಳೂರು-560029 ಈ ಸಂಸ್ಥೆಯ 2019-20 ನೇ ಸಾಲಿನ ಲೆಕ್ಕಪರಿಶೋಧನೆಯನ್ನು, ಪೂರ್ತಿ ಗೊಳಿಸಿದ್ದು, ಈ ದೃಢೀಕರಣ ಪತ್ರದೊಂದಿಗೆ ಲಗತ್ತಿಸಿರುವ ನಮ್ಮ ಲೆಕ್ಕ ಪರಿಶೋಧನಾ ವರದಿಯಲ್ಲಿ ವಿವರವಾಗಿ ವಿವರಿಸಿದ ಅಂಶಗಳ ಒಳಪಟ್ಟು ಈ ಕೆಳಕಂಡಂತೆ ದೃಢೀಕರಿಸಿರುತ್ತೇನೆ.

1. ಆಸ್ತಿ ಜವಾಬ್ದಾರಿ ತ:ಖ್ತೆಯಲ್ಲಿ ಕಾಣಿಸಿರುವ ಷೇರು ಧನ ಸಂಸ್ಥೆಯಲ್ಲಿ ಷೇರು ಖಾತೆಗಳಲ್ಲಿನ ಸದಸ್ಯರ ಷೇರು ಧನಕ್ಕೆ ತಾಳೆಯಾಗಿರುತ್ತದೆ.
2. ಆಸ್ತಿ ಜವಾಬ್ದಾರಿ ತ:ಖ್ತೆಯಲ್ಲಿ ಕಾಣಿಸಿರುವ ಎಲ್ಲಾ ಪಡೆದ ಹಾಗೂ ನೀಡಿದ ಠೇವಣಿಗಳು, ಸಾಲಗು ಬ್ಯಾಂಕಿನಲ್ಲಿರುವ ಠೇವಣಿಗಳ ಮತ್ತು ಸಾಲಗಳ ಖಾತೆಗಳಿಗೆ ತಾಳೆಯಾಗಿರುತ್ತವೆ.
3. ಆಸ್ತಿ ಜವಾಬ್ದಾರಿ ತ:ಖ್ತೆಯಲ್ಲಿ ಕಾಣಿಸಿರುವ ವಿವಿಧ ಸಂಘ ಸಂಸ್ಥೆಗಳಲ್ಲಿ ಹಾಗೂ ಬ್ಯಾಂಕುಗಳಲ್ಲಿ ವಿವಿಧ ರೂಪಗಳಲ್ಲಿ ವಿನಿಯೋಗಿಸಿರುವ ಮೊತ್ತಗಳಿಗೆ ಸಂಬಂಧಿಸಿದಂತೆ ಅವಶ್ಯವಿರುವ ರಶೀದಿ, ಷೇರು ಪತ್ರ, ಠೇವಣಿ ಪತ್ರ ಇತ್ಯಾದಿ ದಾಖಲೆಗಳನ್ನು ಬ್ಯಾಂಕು ಸಮನ್ವಯ ಪಟ್ಟಿಯೊಂದಿಗೆ ಹಾಗೂ ವಿನಿಯೋಗಿಸಿದ ಪಾಸ್‌ಪುಸ್ತಕ, ಠೇವಣಿ ರಿಜಿಸ್ಟರ್ ಇತ್ಯಾದಿಗಳೊಂದಿಗೆ ಸಂಬಂಧಿಸಿದಂತೆ ಸಂಸ್ಥೆಗಳಿಂದ ಪಡೆದ ಬಾಕಿ ದೃಢೀಕರಣ ಪತ್ರಕ್ಕೆ ತಾಳೆಯಾಗಿರುತ್ತದೆ.
4. ಲೆಕ್ಕಪರಿಶೋಧನೆಗೆ ಸಂಬಂಧಿಸಿದಂತೆ ನಮಗೆ ಒದಗಿಸಿರುವ ಮಾಹಿತಿ ಹಾಗೂ ವಿವರಣೆಗಳು ನಮ್ಮ ಅಭಿಪ್ರಾಯದಲ್ಲಿ ತೃಪ್ತಿಕರವಾಗಿರುತ್ತವೆ.
5. ಲೆಕ್ಕಪರಿಶೋಧನೆಯಲ್ಲಿ ಗಮನಿಸಿದ ಕಹಾಮದ ಎಲ್ಲಾ ವ್ಯವಹಾರಗಳು ನಮ್ಮ ಅಭಿಪ್ರಾಯದಲ್ಲಿ ಕಹಾಮದ ಕಾರ್ಯವ್ಯಾಪ್ತಿಯ ಅಧಿಕಾರದೊಳಗಿರುತ್ತವೆ.
6. ಕಹಾಮದ ಘಟಕಗಳಿಂದ ಸಲ್ಲಿಸಲ್ಪಟ್ಟಿರುವ ವಿವರಣಾ ತ:ಖ್ತೆಗಳು ಲೆಕ್ಕ ಪರಿಶೋಧನೆಯನ್ನು ಅಂತಿಮಗೊಳಿಸಲು ನಮ್ಮ ಅಭಿಪ್ರಾಯದಲ್ಲಿ ಸಾಕಷ್ಟು ಹಾಗೂ ಸಮರ್ಪಕವಾಗಿರುತ್ತವೆ.
7. ಲೆಕ್ಕಪರಿಶೋಧನೆಯಲ್ಲಿ ದೃಢೀಕರಿಸಿರುವ ಲಾಭ-ನಷ್ಟ ತ:ಖ್ತೆಯು ನಮ್ಮ ಅಭಿಪ್ರಾಯದಲ್ಲಿ ಕಹಾಮ ಗಳಿಸಿರುವ ಲಾಭವನ್ನು ನೈಜವಾಗಿ ಪ್ರತಿಬಿಂಭಿಸುತ್ತದೆ.
8. ನಮ್ಮ ಅಭಿಪ್ರಾಯದಲ್ಲಿ ಕಹಾಮದ ಸದಸ್ಯರ ಗಮನಕ್ಕೆ ತರುವಂತಹ ಯಾವುದೇ ಗಮನಾರ್ಹ ಅಂಶಗಳು ಇರುವುದಿಲ್ಲ.

ಸ್ಥಳ: ಬೆಂಗಳೂರು
ದಿನಾಂಕ: 28.10.2020

ಮೆ: ಎಸ್.ಆರ್ ಅಂಡ್ ಎಂ.ಆರ್ ಅಸೋಸಿಯೇಟ್ಸ್
ಚಾರ್ಟರ್ಡ್ ಅಕೌಂಟೆಂಟ್ಸ್
(ನೋಂದಣಿ ಸಂಖ್ಯೆ: 008094S)

S.R. & M.R. ASSOCIATES CHARTERED ACCOUNTANTS BANGALORE

ಸಿ.ಎ. ಎಸ್.ಆರ್. ರಘುನಾಥ
ಪಾಲುದಾರರು
(ಸದಸ್ಯತ್ವ ಸಂಖ್ಯೆ: 205503)

KARNATAKA CO-OPERATIVE MILK PRODUCERS FEDERATION LIMITED

SCHEDULE

Significant Accounting Policies and Notes on Accounts for the year ended on 31.03.2020

A. BACKGROUND OF THE FEDERATION:

Karnataka Co-operative Milk Producers Federation Limited (KMF) is the largest cooperative Dairy Federation in South India, owned and managed by milk producers of Karnataka State. KMF has over 2.53 Million milk producers spread over 14,682 Milk Producers Co-operative Societies at village level, functioning under 14 District Cooperative Milk Unions in Karnataka State. The mission of the Federation is to augmenting rural prosperity through dairy development.

B. SIGNIFICANT ACCOUNTING POLICIES:

These Financial Statements have been prepared in accordance with applicable accounting standards in India. A summary of important accounting policies are set out below:

1. These Financial Statements have been prepared in accordance with the historical cost convention method and on accrual basis.
2. Fixed Assets are disclosed in the accounts at historical cost together with all costs directly attributable to their acquisition.
3. Depreciation is computed on the Straight Line Method and provided at the rates mentioned as per approved Bye-law of the Federation. In respect of additions, depreciation is provided on yearly or half yearly basis based on the date of acquisition.
4. Revenue in respect of sales and service is recognised after the sale and services are completed. All Income and Expenditure is accounted on accrual basis.
5. The revenue and expenses are declared net of Goods and Service Tax (GST) in the Profit & Loss Account. The Capital Assets have been capitalised net of GST. The ineligible GST and restricted Input Tax Credit on supply of goods, services and capital goods have been reversed by debiting to the respective expenditure and asset account.
6. Raw Materials, Stores, Consumables and Finished Goods are valued at Cost or Net Realizable Value whichever is lower.
7. Provision for Income Tax comprises of provision for Current Taxes only.
8. Long term investments are accounted on cost basis.
9. Capital Grants received have been accounted as Grants shown under Reserves and Surplus. The depreciation on the corresponding assets acquired has been debited to the Grants Accounts on yearly.
10. Employee Retirement Benefits has been accounted on payment basis except the Gratuity payments.

S.R. & M.R. ASSOCIATES CHARTERED ACCOUNTANTS BANGALORE

11. Borrowing costs has been accounted based on nature of borrowings towards revenue and capital expenditure. In case of borrowing made to acquire fixed assets, the cost of the same is recognized as Capital Expenditure.
12. Related party transactions have been entered in normal market situations like any other parties.
13. Previous year figures have been regrouped wherever necessary.

For S.R. & M.R. ASSOCIATES
Chartered Accountants
Firm Reg. No. 008094S

S.R. & M.R. ASSOCIATES CHARTERED ACCOUNTANTS BANGALORE

CA. S.R.Raghunatha
Partner
M.No. 205503

For and on behalf of the Board (KMF)

B.C. Sateesh, KCS
Managing Director

Ramesh B Konnur
Director (FIN)

Place: Bangalore
Date: 28.10.2020

KARNATAKA CO-OPERATIVE MILK PRODUCERS' FEDERATION LIMITED

D.R.COLLEGE POST, DR.M.H.MARIGOWDA ROAD BENGALURU - 560 029

BALANCE SHEET AS AT 31.03.2020 (INR)

PARTICULARS	SCH	AS ON 31.3.2020	AS ON 31.3.2019
SOURCES OF FUNDS			
Share Capital	1	62,21,77,710.48	49,95,33,367.48
Reserves & Surplus	2	5,67,56,84,187.78	4,87,70,99,747.88
Earmarked Funds	3	2,28,56,94,235.51	1,93,04,49,651.51
Deposit from GOI (KDDC)	4	1,68,43,485.93	1,68,43,485.93
Profit and Loss Appropriation A/c		1,24,51,92,421.31	1,33,50,38,770.00
BORROWINGS			
Secured Loans	5.1	2,07,69,07,951.00	2,16,54,42,061.00
Unsecured loans	5.2	-	-
TOTAL		**11,92,24,99,992.01**	**10,82,44,07,083.80**
APPLICATION OF FUNDS			
Fixed Assets	6	8,28,59,70,472.92	7,65,79,11,518.44
Investments	7	7,17,05,600.00	7,31,05,600.00
CURRENT ASSETS,LOANS AND ADVANCES			
Cash and Bank Balance	8	3,13,34,26,365.87	3,10,69,66,028.99
Sundry Debtors	9	2,62,78,41,637.64	4,05,67,59,501.59
Inventory	10	4,02,88,98,646.35	2,89,68,15,475.75
Loans and Advances	11	10,39,17,13,241.38	7,17,42,99,001.97
TOTAL Sch. 8 to 11		20,18,18,79,891.24	17,23,48,40,008.30
Less:Current Liabilities & Provisions	12	16,61,70,55,972.15	14,14,14,50,042.94
Net Current Assets		3,56,48,23,919.09	3,09,33,89,965.36
TOTAL		**11,92,24,99,992.01**	**10,82,44,07,083.80**

(Note: Previous year figures have been regrouped wherever necessary)

RAMESH B KONNUR
DIRECTOR (FIN)

B.C SATEESH, K.C.S
MANAGING DIRECTOR

DATE: 28.10.2020

PLACE: BENGALURU

ದೃ ಢೀ ಕ ರ ಣ

ನಾವು ಕರ್ನಾಟಕ ಸಹಕಾರಿ ಹಾಲು ಉತ್ಪಾದಕರ ಮಹಾಮಂಡಳಿ ನಿಯಮಿತ, ಬೆಂಗಳೂರು ಇದರ 2019–20 ನೇ ಸಾಲಿನ ಲೆಕ್ಕ ಪರಿಶೋಧನೆಯನ್ನು ಲೆಕ್ಕ ಪರಿಶೋಧನಾ ಸಿಬ್ಬಂದಿಯವರ ನೆರವಿನಿಂದ ಪೂರೈಸಿರುತ್ತೇವೆ. ಲೆಕ್ಕ ಪರಿಶೋಧನೆಗೆ ಅಗತ್ಯವಾದ

S.R. & M.R. ASSOCIATES CHARTERED ACCOUNTANTS BANGALORE

ಮಾಹಿತಿಯನ್ನು ಮತ್ತು ಸಮಜಾಯಿಷಿಗಳನ್ನು ಸಂಬಂಧಪಟ್ಟವರಿಂದ ಪಡೆದುಕೊಂಡಿರುತ್ತೇವೆ. ನಮ್ಮ ಜ್ಞಾನ ಮತ್ತು ತಿಳುವಳಿಕೆಯಂತೆ ಹಾಗೂ ಲೆಕ್ಕಪರಿಶೋಧನಾ ವೇಳೆಯಲ್ಲಿ ನೀಡಿದ ಮಾಹಿತಿಗಳ ಆಧಾರದ ಮೇಲೆ ಮಹಾಮಂಡಳಿಯ ಆಸ್ತಿ ಜವಾಬ್ದಾರಿ ತಃಖ್ತೆ ದಿನಾಂಕ: 31.03.2020 ರ ಅಂತ್ಯಕ್ಕೆ ಇದ್ದಂತೆ ನಿಜವಾದ ಆರ್ಥಿಕ ಸ್ಥಿತಿಯನ್ನು ಲಗತ್ತಿಸಿರುವ ವರದಿಗೆ ಒಳಪಟ್ಟು ಪ್ರತಿಬಿಂಬಿಸುತ್ತವೆಂದು ದೃಢೀಕರಿಸುತ್ತೇವೆ.

ಸ್ಥಳ: ಬೆಂಗಳೂರು
ದಿನಾಂಕ: 28.10.2020

ಮೆ: ಎಸ್. ಆರ್. & ಎಮ್. ಆರ್. ಅಸೋಸಿಯೇಟ್ಸ್.
ಸನ್ನದು ಲೆಕ್ಕಪರಿಶೋಧಕರು
ಸಂಸ್ಥೆ ನೋಂದಣಿ ಸಂಖ್ಯೆ: 008094S

S.R. & M.R. ASSOCIATES CHARTERED ACCOUNTANTS BANGALORE

ಸಿಎ ಎಸ್. ಆರ್. ರಘುನಾಥ
ಪಾಲುದಾರರು
ಸದಸ್ಯತ್ವ ಸಂಖ್ಯೆ: 205503
UDIN:20205503AAAAFL4965

KARNATAKA CO-OPERATIVE MILK PRODUCERS' FEDERATION LIMITED

D.R.COLLEGE POST, DR.M.H.MARIGOWDA ROAD BENGALURU - 560 029

MANUFACTURING & TRADING ACCOUNT FOR THE YEAR 2019-20 (INR)

PARTICULARS	SCH	AS ON 31.3.2020	AS ON 31.3.2019
EXPENDITURE			
Opening Stock	13	2,89,68,15,475.75	3,95,36,79,320.48
Purchases	14	42,55,41,36,529.41	36,59,54,88,911.13
Procurement Transportation charges	15	6,68,85,402.00	6,27,64,431.14
Processing & Manufacturing Expenses	16	1,19,69,61,282.02	1,13,95,75,954.74
Staff Expesnes (80%)	17	91,70,93,507.93	96,32,11,965.10
Gross Profit Tfd to P&L A/c		3,34,97,31,661.33	4,07,56,41,504.04
TOTAL		**50,98,16,23,858.44**	**46,79,03,62,086.63**
INCOME			
Sales	18	46,95,27,25,212.09	43,89,35,46,610.88
Closing Stock	19	4,02,88,98,646.35	2,89,68,15,475.75
TOTAL		**50,98,16,23,858.44**	**46,79,03,62,086.63**

(Note: Previous year figures have been regrouped wherever necessary)

RAMESH B KONNUR
DIRECTOR (FIN)

B.C SATEESH, K.C.S
MANAGING DIRECTOR

DATE: 28.10.2020
PLACE: BENGALURU

VERIFIED
FOR S R & M R ASSOCIATES
CHARTERED ACCOUNTANTS
Registration NO: 008094S

S.R. & M.R. ASSOCIATES CHARTERED ACCOUNTANTS BANGALORE

(C.A. S.R. RAGHUNATHA)
PARTNER
MEMBERSHIP NO: 205503

KARNATAKA CO-OPERATIVE MILK PRODUCERS' FEDERATION LIMITED

D.R.COLLEGE POST, DR.M.H.MARIGOWDA ROAD BENGALURU - 560 029

PROFIT AND LOSS ACCOUNT FOR THE YEAR 2019-20 (INR)

PARTICULARS	SCH	AS ON 31.3.2020	AS ON 31.3.2019
EXPENDITURE			
Staff Expenses (20%)	17	22,92,73,376.98	24,08,02,991.28
Administrative expenses	20	89,44,66,984.53	1,10,63,82,364.59
Rates,Taxes,Licence & Insurance	21	45,41,70,012.33	48,92,69,363.97
Selling and Distibution expenses	22	35,06,10,358.72	44,66,34,498.67
Interest and Bank charges	23	4,87,42,562.57	5,80,80,230.27
Repairs and Maintenance of Vehicles	24	73,78,428.00	91,42,638.05
Depreciation	25	36,72,15,663.64	26,89,25,214.59
Provision for Current Taxes	26	33,00,00,000.00	66,00,00,000.00
Net Profit trasnsferred to Appropriation A/c		***1,24,51,92,421.31***	***1,33,50,38,770.00***
TOTAL		**3,92,70,49,808.08**	**4,61,42,76,071.42**
INCOME			
Gross Profit transferred from Trading A/c		3,34,97,31,661.33	4,07,56,41,504.04
Other Income	27	35,06,14,513.19	46,66,01,004.20
Interest on Deposits	28	22,67,03,633.56	7,20,33,563.18
TOTAL		**3,92,70,49,808.08**	**4,61,42,76,071.42**

(Note: Previous year figures have been regrouped wherever necessary)

RAMESH B KONNUR
DIRECTOR (FIN)

B.C SATEESH, K.C.S
MANAGING DIRECTOR

DATE: 28.10.2020
PLACE: BENGALURU

VERIFIED
FOR S R & M R ASSOCIATES
CHARTERED ACCOUNTANTS
Registration NO: 008094S

S.R. & M.R. ASSOCIATES CHARTERED ACCOUNTANTS BANGALORE

(C.A. S.R. RAGHUNATHA)
PARTNER
MEMBERSHIP NO: 205503

KARNATAKA CO-OPERATIVE MILK PRODUCERS' FEDERATION LIMITED

D.R.COLLEGE POST DR.M.H.MARIGOWDA ROAD BENGALURU- 560029

PROFIT AND LOSS APPROPRIATION ACCOUNT FOR THE YEAR 2019-20

(INR)

DEBIT	AS ON 31.3.2020	AS ON 31.3.2019
Reserve Fund	73,73,07,361.00	94,77,62,091.00
Building Fund	6,43,37,063.00	7,93,75,453.00
Bad Debt Fund	1,93,01,119.00	2,38,12,636.00
Co-op Propaganda Fund	4,50,35,944.00	5,55,62,817.00
Employee Benevolant Fund	6,43,37,063.00	7,93,75,453.00
Research & Development Fund	3,21,68,532.00	3,96,87,727.00
Trade Fluctuation Fund	3,21,68,532.00	3,96,87,727.00
Co-op Education Fund	1,31,30,013.00	1,61,99,072.00
Bonus to Milk Unions	5,48,42,625.00	4,05,03,486.00
Dividend to Milk Unions	4,72,30,797.00	3,58,84,765.00
Member Milk union development fund	6,43,37,063.00	7,93,75,453.00
Charitable fund	3,21,68,532.00	3,96,87,727.00
Infrastructure Fund	6,43,37,063.00	7,93,75,453.00
Nandini Farmers Welfare Trust	6,43,37,063.00	7,93,75,454.86
Transferred to Balance Sheet (for the year 2019-20)	1,24,51,92,421.31	1,33,50,38,770.00
TOTAL	**2,58,02,31,191.31**	**2,97,07,04,084.86**
CREDIT		
Opening Balance of P & L Account	1,33,50,38,770.00	1,63,56,65,314.86
Profit Transferred From P & L Account	1,24,51,92,421.31	1,33,50,38,770.00
TOTAL	**2,58,02,31,191.31**	**2,97,07,04,084.86**

(Note: Previous year figures have been regrouped wherever necessary)

RAMESH B KONNUR
DIRECTOR (FIN)

B.C SATEESH, K.C.S
MANAGING DIRECTOR

DATE: 28.10.2020
PLACE: BENGALURU

VERIFIED
FOR S R & M R ASSOCIATES
CHARTERED ACCOUNTANTS
Registration NO: 008094S

S.R. & M.R. ASSOCIATES CHARTERED ACCOUNTANTS BANGALORE

(C.A. S.R. RAGHUNATHA)
PARTNER
MEMBERSHIP NO: 205503

KARNATAKA CO-OPERATIVE MILK PRODUCER'S FEDERATION LTD
D.R.COLLEGE POST, DR M H MARIGOWDA ROAD, BENGALURU - 560 029.
SHEDULES TO BALANCE SHEET, TRADING , PROFIT AND LOSS ACCOUNT (INR)

PARTICULARS	AS ON 31.3.2020	AS ON 31.3.2019
SCH- 1: SHARE CAPITAL		
Issued, subscribed and paid up :-		
6,22,170 Equity shares of Rs.1,000 each		
(P Y 4,99,526 Equity shares of Rs.1,000 each)		
fully paid for cash - represented by the		
following members :		
Bangalore Milk Union	14,88,15,000.00	12,30,01,000.00
Belgaum Milk Union	1,30,41,000.00	1,00,00,000.00
Bellary Milk Union	1,25,51,000.00	94,45,000.00
Bijapur Milk Union	2,04,95,000.00	1,78,46,000.00
ChamarajnagarMilk Union	1,72,18,000.00	1,33,73,000.00
Dakshina Kannada Milk Union	5,60,11,000.00	4,91,68,000.00
Dharwar Milk Union	4,07,48,000.00	3,61,46,000.00
Gulbarga Milk Union	39,81,000.00	29,91,000.00
Hassan Milk Union	5,03,35,000.00	3,63,78,000.00
Kolar Milk Union	9,08,28,000.00	7,43,22,000.00
Mandya Milk Union	5,77,16,000.00	4,49,99,000.00
Mysore Milk Union	3,35,54,000.00	2,47,64,000.00
Shimoga Milk Union	3,43,74,000.00	2,59,11,000.00
Tumkur Milk Union	4,25,03,000.00	3,11,82,000.00
Share Suspense	7,710.48	7,367.48
TOTAL	**62,21,77,710.48**	**49,95,33,367.48**
SCH-2: RESERVES & SURPLUS		
A)Revenue Reserves :		
A) General Reserve:-		
a) Reserves out of Profit Appropriation	4,10,42,59,385.16	3,38,89,89,504.16
b) Other Accumulation	32,82,06,738.93	30,45,34,353.48
c) Nominal members reserve fund	5,24,445.24	4,67,437.30
TOTAL - A	**4,43,29,90,569.33**	**3,69,39,91,294.94**
B) Capital Reserves:		
Grant for Capital Assets	69,31,36,432.43	66,04,20,198.39
Grant from GOK-DDIL	1,20,00,000.00	1,20,00,000.00
Grant from NDDB-DDIL	1,75,65,000.00	1,75,65,000.00
Grant from RKVY to Ramanagara Powder plant	9,42,44,480.00	9,68,00,000.00
Grants for NDP project	5,31,62,120.86	5,99,68,633.27
Grant for Capital assets -STEP	1.00	1.00
Grant for Capital assets -NMP	2,52,77,337.69	6,14,96,138.34
Grant for Capital Infrastructure	27,48,58,481.94	27,48,58,481.94
PT Project corpus fund	4,92,51,834.00	-
Grants for NDDB	2,31,97,930.53	-
TOTAL - B	**1,24,26,93,618.45**	**1,18,31,08,452.94**
GRAND TOTAL (A + B)	**5,67,56,84,187.78**	**4,87,70,99,747.88**
SCH- 3: EARMARKED FUNDS		
A.I. Infrastructure Corpus fund	1,79,48,730.55	1,65,89,494.55

S.R. & ASSOCIATES CHARTERED ACCOUNTANTS BANGALORE

KARNATAKA CO-OPERATIVE MILK PRODUCER'S FEDERATION LTD
D.R.COLLEGE POST, DR M H MARIGOWDA ROAD, BENGALURU - 560 029.
SHEDULES TO BALANCE SHEET, TRADING , PROFIT AND LOSS ACCOUNT (INR)

PARTICULARS	AS ON 31.3.2020	AS ON 31.3.2019
Building Fund	42,82,94,649.95	36,39,57,586.95
Bad Debt Fund	10,47,32,369.33	8,54,31,250.33
Co-op Propaganda Fund	24,92,01,320.67	20,41,65,376.67
Research and Development Fund	18,92,96,482.70	15,71,27,950.70
Trade Fluctuation Fund	50,39,07,205.94	47,17,38,673.94
Research and Development Fund-Union	3,59,39,373.24	3,59,39,373.24
Charitable Fund	14,50,63,525.08	11,28,94,993.08
Member Milk Union Development fund	29,01,27,049.16	22,57,89,986.16
Infrastructure fund	31,50,23,891.16	25,06,86,828.16
Magazine Fund	61,59,637.73	61,28,137.73
TOTAL	**2,28,56,94,235.51**	**1,93,04,49,651.51**
SCH-4: DEPOSITS		
From Govt. of India (KDDC)	1,68,43,485.93	1,68,43,485.93
TOTAL	**1,68,43,485.93**	**1,68,43,485.93**
BORROWINGS		
- ಖಾಸಗಿ ಬ್ರಾಂಡ್‌ಗಳಾದ ಕಾರ್ನರ್ ಹೌಸ್, ಬಾಸ್ಕಿನ್ ರಾಬಿನ್, ಪೋಲಾರ್ ಬೇರ್ ಸಂಸ್ಥೆಗಳ ಐಸ್‌ಕ್ರೀಂ ಪಾರ್ಲರ್‌ಗಳಂತೆ ಕಹಾಮ ಇತಿಹಾಸದಲ್ಲೇ ಹೊಸ ಪರಿಕಲ್ಪನೆಯೊಂದಿಗೆ ಬೆಂಗಳೂರು ನಗರ ಸೇರಿದಂತೆ ದೇಶದ ಇತರೇ ಪ್ರಮುಖ ನಗರಗಳಲ್ಲಿ **"ನಂದಿನಿ ಕೆಫೆ ಮೂ"** ಎಂಬ ಹೈಟೆಕ್ ನಂದಿನಿ ಸ್ಕೂಪಿಂಗ್ ಕಮ್ ಪಾರ್ಲರ್‌ಗಳನ್ನು ಸ್ಥಾಪಿಸಲು ಕ್ರಮ ಕೈಗೊಳ್ಳಲಾಗಿತ್ತು. ಇದರ ಫಲವಾಗಿ ಫೆಬ್ರವರಿ 2020ರಲ್ಲಿ ಪ್ರಥಮ ಹಂತವಾಗಿ ಬೆಂಗಳೂರಿನ ಜಯನಗರದ 09ನೇ ಬ್ಲಾಕ್‌ನಲ್ಲಿ **"ನಂದಿನಿ ಕೆಫೆ ಮೂ"** ಪಾರ್ಲರ್ ಪ್ರಾರಂಭಿಸಲಾಗಿದೆ.
- 2019-20ನೇ ಸಾಲಿನಲ್ಲಿ 25-30 ಹೊಸ ಮಾದರಿಯ ಹೊಸ ನಂದಿನಿ ಐಸ್‌ಕ್ರೀಂ ಉತ್ಪನ್ನಗಳನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಿದ್ದು, ಅಲ್ಲದೇ 8 ಬಗೆಯ ನ್ಯಾಚುರಲ್ ಐಸ್‌ಕ್ರೀಂ ಉತ್ಪನ್ನಗಳನ್ನು 21 ಪ್ಯಾಕುಗಳಲ್ಲಿ ಮಾರುಕಟ್ಟೆಗೆ ಬಿಡುಗಡೆ ಮಾಡಲಾಗಿದೆ.

8. ನಂದಿನಿ ಆಕ್ವಾ ವಾಟರ್:-

2019-20 ನೇ ಸಾಲಿನಲ್ಲಿ ನಂದಿನಿ ಆಕ್ವಾ ವಾಟರ್ ಮಾರಾಟಅಭಿವೃದ್ಧಿ ಸಂಬಂದ ಹಿಂದಿನ ವರ್ಷದಲ್ಲಿ ರೂಪಿಸಿದ್ದ ಧೀರ್ಘಾವಧಿ ಯೋಜನೆಗಳು ಅಳವಡಿಸಿದ್ದು, ಪ್ರತಿದಿನ ಸರಾಸರಿ 6,200 ಲೀಟರ್‌ಗಳು ಮಾರಾಟ ವಾಗಿರುತ್ತದೆ. ನಂದಿನಿ ಆಕ್ವಾ ವಾಟರ್ ಮಾರಾಟ ಮಾಡಲು ಪ್ರಸ್ತುತ ಇರುವ ನಂದಿನಿ ಉತ್ಪನ್ನ ಸಗಟು ಮಾರಾಟಗಾರರ ಮುಖಾಂತರ ಮಾರಾಟ ಅಭಿವೃದ್ಧಿ ಪಡಿಸಿ, ಜಿಲ್ಲಾ ಹಾಲು ಒಕ್ಕೂಟಗಳನ್ನು ಸಗಟು ಮಾರಾಗಾರರಾಗಿ ನೇಮಿಸಿ ಮಾರಾಟ ಅಭಿವೃದ್ಧಿ ಪಡಿಸಲಾಗಿದೆ ಹಾಗು ಇತರೆ ಉತ್ಪನ್ನಗಳ ಸಗಟು ಮಾರಾಟಗಾರರಿಗೂ ಅವರ ಅನುಭವದ ಆಧಾರದ ಮೇಲೆ ನಂದಿನಿ ಆಕ್ವಾ ವಾಟರ್ ಸರಬರಾಜು ಮಾಡಲಾಗಿದೆ. ಕರ್ನಾಟಕದ್ಯಾಂತ ಒಟ್ಟಾರೆ 23 ಜಿಲ್ಲೆಗಳಲ್ಲಿ ನಂದಿನಿ ಆಕ್ವಾ ವಾಟರ್ ಮಾರಾಟ ಮಾಡಲಾಗುತ್ತಿದೆ.

2019-20 ನೇ ಸಾಲಿನ ಮಾರಾಟ ಮತ್ತು ಪ್ರಗತಿ

- 2019-20 ರ ಮಾಹೆಯಲ್ಲಿ 2018-19 ಮಾಹೆಗೆ ಹೋಲಿಸಿದಾಗ ಶೇ.49.80 ರಷ್ಟು ಮಾರಾಟ ಪ್ರಗತಿಯಲ್ಲಿರುತ್ತದೆ.
- 2019-20 ರ ಸಮಗ್ರ ವ್ಯಾಪಾರ ಯೋಜನೆಯಡಿಯಲ್ಲಿ ನಿಗದಿಪಡಿಸಿದ ಗುರಿಯಂತೆ ಶೇ.45 ಸಾಧನೆಯಲ್ಲಿರುತ್ತದೆ.
- ನಂದಿನಿ ಆಕ್ವಾ ವಾಟರ್ ಮಾರಾಟ ಪ್ರತಿ ದಿನ ಸರಾಸರಿ (250 ಮಿ.ಲಿ.-350 ಲೀಟರ್ ಗಳು, 500 ಮಿ.ಲಿ. - 2715 ಲೀಟರ್‌ಗಳು, 1 ಲೀಟರ್. - 2500 ಲೀಟರ್‌ಗಳು, 2 ಲೀಟರ್ -666 ಲೀಟರ್‌ಗಳು ಮತ್ತು 20 ಲೀಟರ್‌ಕ್ಯಾನ್ ಮಾರಾಟ ಮಾಡಿರುವುದಿಲ್ಲ) ಒಟ್ಟಾರೆ 6200 ಲೀಟರ್‌ಗಳು ಇರುತ್ತದೆ.

ಪಶು ಸಂಗೋಪನೆ ವಿಭಾಗ:

ಕರ್ನಾಟಕ ಹಾಲು ಮಹಾಮಂಡಳಿಯ ಪಶು ಸಂಗೋಪನೆ ವಿಭಾಗವು ವ್ಯಾಪ್ತಿಯ ಎಲ್ಲಾ ಹಾಲು ಒಕ್ಕೂಟಗಳಲ್ಲಿ ಉದ್ದಿಮೆಗೆ ಪೂರಕವಾದ ಪ್ರಾಥಮಿಕ ಹಾ.ಉ.ಸ.ಸಂಘಗಳನ್ನು ಸ್ಥಾಪಿಸುವುದಕ್ಕೆ ಸಂಬಂಧಿಸಿದ ಕಾರ್ಯಕ್ರಮವನ್ನು ರೂಪಿಸಿ, ಹೈನುಗಾರಿಕೆಗೆ ಪೂರಕ ತಾಂತ್ರಿಕ ಸೌಲಭ್ಯಗಳನ್ನು ನೀಡುವ ಯೋಜನೆಗಳಿಗೆ ಮಾರ್ಗದರ್ಶನ ಮತ್ತು ಆರ್ಥಿಕ ಸಹಾಯಗಳನ್ನು ಒದಗಿಸಲಾಗುತ್ತಿದ್ದು, ಕೆಲವು ಕೇಂದ್ರೀಕೃತ ಕಾರ್ಯಕ್ರಮಗಳನ್ನು ನಿರ್ವಹಿಸುತ್ತಿದೆ. ಅವುಗಳಲ್ಲಿ ಮುಖ್ಯವಾಗಿ ಪಶು ಸಂಗೋಪನೆಗೆ ಅಗತ್ಯವಿರುವ

S.R. & M.R. ASSOCIATES CHARTERED ACCOUNTANTS BANGALORE

ಹೋರಿಗಳ ವೀರ್ಯ ನಳಿಕೆಗಳ ಉತ್ಪಾದನೆಗಾಗಿ ನಂದಿನಿ ವೀರ್ಯಾಣು ಕೇಂದ್ರದ ಮೂಲಕ ವೀರ್ಯ ನಳಿಕೆ ಸರಬರಾಜು, ದ್ರವಸಾರಜನಕ ಹಾಗೂ ದ್ರವಸಾರಜನಕ ಜಾಡಿಗಳ ವ್ಯವಸ್ಥೆ, ಹಾಲು ಒಕ್ಕೂಟಗಳ ಮೂಲಕ ಹೈನುಗಾರರಿಗೆ ಗುಣಮಟ್ಟದ ಸಮತೋಲನ ಪಶು ಆಹಾರ ಹಾಗೂ ಖನಿಜ ಮಿಶ್ರಣವನ್ನು ಒದಗಿಸುವುದು. ಪಶು ಆರೋಗ್ಯ ರಕ್ಷಣೆಗಾಗಿ ಪಶು ವೈದ್ಯಕೀಯ ಔಷಧಿ ಹಾಗೂ ಲಸಿಕೆಗಳಿಗೆ ದರ ಗುತ್ತಿಗೆ ಮಾಡಿಕೊಳ್ಳುವುದು ಮತ್ತು ಇನ್ನಿತರೆ ಸೌಲಭ್ಯಗಳನ್ನು ಒದಗಿಸುವ ವ್ಯವಸ್ಥೆಗಳನ್ನು ಕೇಂದ್ರೀಕರಣಗೊಳಿಸಲಾಗಿರುತ್ತದೆ.

ಹಾಲು ಶೇಖರಣೆ:

ಕರ್ನಾಟಕ ಹಾಲು ಮಹಾಮಂಡಳಿಯ 14 ಸದಸ್ಯ ಒಕ್ಕೂಟಗಳು 2019-20 ನೇ ಸಾಲಿನಲ್ಲಿ ದಿನಕ್ಕೆ ಸರಾಸರಿ 74.66 ಲಕ್ಷ ಕೆ.ಜಿ. ಹಾಲು ಶೇಖರಣೆ ಮಾಡಿದ್ದು, 2018-19 ನೇ ಸಾಲಿಗೆ ಬಹುತೇಕ ಸಮನಾಗಿರುತ್ತದೆ. 2019-20 ನೇ ಸಾಲಿನಲ್ಲಿ 14,682 ಹಾಲು ಉತ್ಪಾದಕರ ಸಹಕಾರ ಸಂಘಗಳಿದ್ದು, ಎಲ್ಲಾ ಹಾಲು ಒಕ್ಕೂಟಗಳ ಹಾಲು ಶೇಖರಣೆ ಸರಾಸಿ ದರ ಪ್ರತಿ ಕೆ.ಜಿ ಹಾಲಿಗೆ ರೂ. 26.31 ನೀಡಿದ್ದು ಪ್ರತಿ ದಿನಕ್ಕೆ ಸರಾಸರಿ ರೂ. 20.13 ಕೋಟಿಯನ್ನು ಹಾಲಿನ ಬಟವಾಡೆ ರೂಪದಲ್ಲಿ ಗ್ರಾಮೀಣ ಪ್ರದೇಶದ ಹಾಲು ಉತ್ಪಾದಕರಿಗೆ ಪಾವತಿಸಲಾಗಿದೆ.

ಮಾರ್ಚ್-2020 ರ ಅಂತ್ಯಕ್ಕೆ ರಾಜ್ಯದಲ್ಲಿ 14,682 ಹಾಲು ಉತ್ಪಾದಕರ ಸಹಕಾರ ಸಂಘಗಳು ಕಾರ್ಯ ನಿರ್ವಹಿಸುತ್ತಿದ್ದು, ಇವುಗಳಲ್ಲಿ ಪ್ರತಿಶತ ಶೇ. 95 ರಷ್ಟು ಸಂಘಗಳು ಲಾಭದಲ್ಲಿವೆ. 2019-20 ನೇ ಸಾಲಿನಲ್ಲಿ ಕಹಾಮ ವ್ಯಾಪ್ತಿಯಲ್ಲಿನ ಒಕ್ಕೂಟಗಳ ಪ್ರಧಾನ ವ್ಯವಸ್ಥಾಪಕರು ಮತ್ತು ವ್ಯವಸ್ಥಾಪಕರು ಶೇಖರಣೆ ಮತ್ತು ತಾಂತ್ರಿಕ ರವರ 10 ಸಭೆಯನ್ನು ನಡೆಸಿ, ಹಾಲು ಶೇಖರಣೆ ಹೆಚ್ಚಿಸುವ, ತಾಂತ್ರಿಕ ಸೌಲಭ್ಯ ನೀಡುವ ಕುರಿತು ಮತ್ತು ಸರ್ಕಾರದ ಯೋಜನೆಗಳ ಅನುಷ್ಠಾನ ಕುರಿತಂತೆ ಪ್ರಗತಿ ಪರಿಶೀಲನೆ ನಡೆಸಿ ಸಲಹೆ ಸೂಚನೆ ನೀಡಲಾಗಿದೆ. ಇದಲ್ಲದೇ, ಒಕ್ಕೂಟಗಳ ಕೃಷಿ ಅಧಿಕಾರಿಗಳ ಮತ್ತು ಕೃತಕ ಗರ್ಭಧಾರಣೆ ಅಧಿಕಾರಿಗಳ ಸಭೆಯನ್ನು ಏರ್ಪಡಿಸಿ ಪ್ರಗತಿ ಪರಿಶೀಲನೆ ನಡೆಸಲಾಗಿರುತ್ತದೆ.

ರಾಜ್ಯ ಸರ್ಕಾರದ ಯೋಜನೆಗಳು:

1. ಕ್ಷೀರಧಾರೆ ಯೋಜನೆ:

2008-09 ನೇ ಸಾಲಿನಲ್ಲಿ ಕರ್ನಾಟಕ ಹಾಲು ಮಹಾಮಂಡಳಿ ವ್ಯಾಪ್ತಿಯಲ್ಲಿರುವ ಹಾಲು ಉತ್ಪಾದಕರ ಸಹಕಾರ ಸಂಘಗಳಿಗೆ ಹಾಲು ಸರಬರಾಜು ಮಾಡುವ ಉತ್ಪಾದಕರಿಗೆ ಪ್ರತಿ ಲೀ. ಹಾಲಿಗೆ ರೂ.2/- ಪ್ರೋತ್ಸಾಹಧನವನ್ನು ಸರ್ಕಾರವು ದಿನಾಂಕ: 07.08.2008 ರಿಂದ ಜಾರಿಗೊಳಿಸಿತು. ಈ ಕಾರ್ಯಕ್ರಮವು ಕ್ಷೀರಧಾರೆ ಯೋಜನೆಯಾಗಿ ಮುಂದುವರಿಸಿದ್ದು, ದಿ: 14.05.2013 ರಿಂದ ಪ್ರತಿ ಲೀಟರ್ ಹಾಲಿಗೆ ರೂ.4/- ಹಾಗೂ ದಿ: 01.12.2016 ರಿಂದ ರೂ.5/- ಗಳಿಗೆ ಹೆಚ್ಚಿಸಿ ಉತ್ಪಾದಕರ ಬ್ಯಾಂಕ್ ಖಾತೆಗೆ ನೇರವಾಗಿ ಪಾವತಿಸಲಾಗುತ್ತಿದೆ. ಯೋಜನೆಯಡಿ 2019-20 ನೇ ಸಾಲಿನಲ್ಲಿ ಒಟ್ಟು ರೂ.1260.88 ಕೋಟಿ ಸರ್ಕಾರದಿಂದ ಬಿಡುಗಡೆಯಾಗಿದ್ದು, ಸದರಿ ಮೊತ್ತವನ್ನು ಉತ್ಪಾದಕರ ಆಧಾರ್ ಆಧಾರಿತ ಬ್ಯಾಂಕ್ ಖಾತೆಗೆ ನೇರವಾಗಿ ಕ್ಷೀರಸಿರಿ ತಂತ್ರಾಂಶದ ಮೂಲಕ ಪಾವತಿಸಲಾಗಿದ್ದು, ಸರ್ಕಾರದ ಪ್ರತಿಷ್ಠಿತ ಯೋಜನೆಯಾಗಿ ರೂಪುಗೊಂಡಿರುತ್ತದೆ.

ಈ ಯೋಜನೆಯಡಿ ಸರಾಸರಿ 8.50 ಲಕ್ಷ ಹಾಲು ಉತ್ಪಾದಕರು ಪ್ರಯೋಜನ ಪಡೆಯುತ್ತಿದ್ದು, ಇವರಲ್ಲಿ 3.5 ಲಕ್ಷ ಮಹಿಳೆಯರು, ಪರಿಶಿಷ್ಟ ಜಾತಿ 54,000 ಹಾಗು ಪರಿಶಿಷ್ಠ ಪಂಗಡ 34,000 ಫಲಾನುಭವಿಗಳಿರುತ್ತಾರೆ.

S.R. & M.R. ASSOCIATES CHARTERED ACCOUNTANTS BANGALORE

ಕೇಂದ್ರ ಸರ್ಕಾರದ ಯೋಜನೆಗಳು.

National Programme for Dairy Development (NPDD):

ಕೇಂದ್ರ ಪುರಸ್ಕೃತ ಎನ್.ಪಿ.ಡಿ.ಡಿ. ಯೋಜನೆಯಡಿಯಲ್ಲಿ ಕೇಂದ್ರ ಸರ್ಕಾರದಿಂದ 2019-20ನೇ ಸಾಲಿಗೆ ಕಹಾಮ ಕೇಂದ್ರ ಕಛೇರಿಯಲ್ಲಿ State Central Laboratory ಯನ್ನು ಸ್ಥಾಪಿಸಲು ರೂ.800 ಲಕ್ಷ ಹಾಗೂ 17 ಡೇರಿಗಳಿಗೆ ಹಾಲಿನ ಕಲಬೆರಕೆ ಕಂಡುಹಿಡಿಯಲು ಉಪಯುಕ್ತವಾಗುವ FTIR Technology milk Analyzer ಗಳಿಗೆ ರೂ.1445 ಲಕ್ಷ ಸೇರಿ ಒಟ್ಟು ರೂ.2245 ಲಕ್ಷಗಳನ್ನು ಮಂಜೂರು ಮಾಡಿ ಆಡಳಿತಾತ್ಮಕ ಆದೇಶವಾಗಿರುತ್ತದೆ. ಸದರಿ ಸಾಲಿನಲ್ಲಿ ರೂ.1122.50 ಲಕ್ಷ ಬಿಡುಗಡೆಯಾಗಿದ್ದು, ಕಾರ್ಯಕ್ರಮವನ್ನು ಯೋಜನಾ ಮಾರ್ಗಸೂಚಿ ಪ್ರಕಾರ ಅನುಷ್ಠಾನಗೊಳಿಸಲಾಗುತ್ತಿದೆ.

2019-20ನೇ ಸಾಲಿನ ಕಹಾಮದ ಸಮಗ್ರ ವ್ಯಾಪಾರ ಯೋಜನೆಯಡಿ ಹಮ್ಮಿಕೊಳ್ಳಲಾದ ಕಾರ್ಯಕ್ರಮಗಳು:

1. **ಸ್ವಂತ ಕಟ್ಟಡ ನಿರ್ಮಾಣ ಕಾರ್ಯಕ್ರಮ:**
   ಕಹಾಮ ವತಿಯಿಂದ 2019-20 ನೇ ಸಾಲಿನಲ್ಲಿ ಸ್ವಂತ ಕಟ್ಟಡ ಇಲ್ಲದೇ ಇರುವ 254 ಸಂಘಗಳಿಗೆ ಸ್ವಂತ ಕಟ್ಟಡ ನಿರ್ಮಾಣಕ್ಕಾಗಿ ರೂ7.80 ಕೋಟಿಗಳ ಅನುದಾನಕ್ಕೆ ಅವಕಾಶ ಕಲ್ಪಿಸಲಾಗಿದ್ದು, ಒಕ್ಕೂಟಗಳಿಗೆ ಹಂಚಿಕೆ ಮಾಡಿದ ಗುರಿಯನ್ವಯ 2019-20 ನೇ ಸಾಲಿನಲ್ಲಿ ರೂ. 5,71,25,000/- ಗಳನ್ನು ನೀಡಲಾಗಿದ್ದು. (31-3-2020 ಕ್ಕಿದ್ದಂತೆ) ಪ್ರಗತಿಯಲ್ಲಿರುತ್ತದೆ. ಹಾಗೂ ಹೆಚ್ಚುವರಿಯಾಗಿ 50 ಮಹಿಳಾ ಹಾಲು ಉತ್ಪಾದಕರ ಸಹಕಾರ ಸಂಘಗಳಿಗೆ ಕಟ್ಟಡ ನಿರ್ಮಾಣಕ್ಕಾಗಿ ರೂ.150 ಲಕ್ಷಗಳನ್ನು ಕಲ್ಪಿಸಿ ಅನುಷ್ಠಾನಗೊಳಿಸಲಾಗುತ್ತಿದೆ.

2. **ಕೆಚ್ಚಲು ಬಾವು ನಿಯಂತ್ರಣ ಕಾರ್ಯಕ್ರಮ:** ಹೈನುರಾಸುಗಳಲ್ಲಿ ಮಾರಕ ರೋಗವೆಂದು ಪರಿಗಣಿಸಿ ರೈತರಿಗೆ ಆರ್ಥಿಕವಾಗಿ ನಷ್ಟ ಉಂಟುಮಾಡುತ್ತಿರುವ ಕೆಚ್ಚಲುಬಾವು ಕಾಯಿಲೆಯನ್ನು ನಿಯಂತ್ರಿಸಲು Subclinical Mastitis Control Programme ನ್ನು ಕಹಾಮವತಿಯಿಂದ ಹಾಲು ಒಕ್ಕೂಟಗಳ ಮೂಲಕ ಹಮ್ಮಿಕೊಳ್ಳಲಾಗಿರುತ್ತದೆ. ಈ ಕಾರ್ಯಕ್ರಮಕ್ಕೆ ಅಗತ್ಯವಿರುವ ಪರಿಕರಗಳ ಖರೀದಿಗೆ ಕಹಾಮ ಆಯ-ವ್ಯಯದಲ್ಲಿ ರೂ.300 ಲಕ್ಷಗಳ ಅನುದಾನ ಕಲ್ಪಿಸಿದ್ದು, ಕಾರ್ಯಕ್ರಮ ಅನುಷ್ಠಾನ ಪ್ರಗತಿಯಲ್ಲಿರುತ್ತದೆ.

3. **ಕರುಸಾಕಾಣಿಕೆ ಕಾರ್ಯಕ್ರಮ:-** ಎನ್.ಡಿ.ಡಿ.ಬಿ. ರವರ ತಾಂತ್ರಿಕ ಸಲಹೆಯೊಂದಿಗೆ ಕರು ಸಾಕಾಣಿಕೆ ಕಾರ್ಯಕ್ರಮ ಹಮ್ಮಿಕೊಳ್ಳಲು 2018-19ನೇ ಸಾಲಿನಲ್ಲಿ ರೂ.300 ಲಕ್ಷ ಅನುದಾನ ಕಲ್ಪಿಸಿದ್ದು, 2019-20ನೇ ಸಾಲಿನಲ್ಲಿ ಮೈಸೂರು ಹಾಲು ಒಕ್ಕೂಟದ ವ್ಯಾಪ್ತಿಯಲ್ಲಿ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗುತ್ತಿದೆ.

4. **ಕೃತಕ ಗರ್ಭಧಾರಣೆ ಕಾರ್ಯಕರ್ತರಿಗೆ ಪ್ರೋತ್ಸಾಹ ಧನ:**
   ಕಹಾಮ ವತಿಯಿಂದ 2019-20ನೇ ಸಾಲಿನಲ್ಲಿ INAPH ತಂತ್ರಾಂಶದಲ್ಲಿ ಕೃತಕ ಗರ್ಭಧಾರಣೆ, ಫಲ ಪರೀಕ್ಷೆ ಮತ್ತು ಕರುಗಳ ಜನನದ ಮಾಹಿತಿ ಅಳವಡಿಸುವ ಸಂಬಂಧ ಕೃತಕ ಗರ್ಭಧಾರಣೆ ಕಾರ್ಯಕರ್ತರಿಗೆ ಪ್ರೋತ್ಸಾಹ ಧನ ನೀಡುವ ಯೋಜನೆಗಾಗಿ ರೂ.900 ಲಕ್ಷಗಳ ಅವಕಾಶವನ್ನು ಕಲ್ಪಿಸಲಾಗಿದ್ದು, ಅನುಷ್ಠಾನಗೊಳಿಸಲಾಗುತ್ತಿದೆ.

5. **ಕಾಲು ಬಾಯಿ ಜ್ವರ ರೋಗ ನಿಯಂತ್ರಣ:**
   ಕಾಲು ಬಾಯಿ ಜ್ವರ ರೋಗ ಲಸಿಕಾ ಕಾರ್ಯಕ್ರಮವನ್ನು ಪಶುಸಂಗೋಪನಾ ಇಲಾಖೆಯು ಹಮ್ಮಿಕೊಳ್ಳುತ್ತಿದ್ದು, ಉತ್ತರ ಕರ್ನಾಟಕ ಭಾಗದ ಒಕ್ಕೂಟಗಳು ಆರ್ಥಿಕವಾಗಿ ಸದೃಡವಾಗಿಲ್ಲದಿರುವ ಕಾರಣ ಸದರಿ ಕಾರ್ಯಕ್ರಮವನ್ನು ಯಶಸ್ವಿಯಾಗಿ ಕೈಗೊಳ್ಳಲು ವಾಹನ ಸೌಲಭ್ಯಕ್ಕಾಗಿ ಕಹಾಮವು 2019-20ನೇ ಸಾಲಿನಲ್ಲಿ ಒಟ್ಟು ರೂ.150 ಲಕ್ಷ ಕಾಯ್ದಿರಿಸಿದ್ದು, ಇದರಲ್ಲಿ ರೂ.54,80,018/- ಗಳನ್ನು ವ್ಯಯಿಸಲಾಗಿದೆ.

S.R. & M.R. ASSOCIATES CHARTERED ACCOUNTANTS BANGALORE

6. ಕೃತಕ ಗರ್ಭಧಾರಣೆ :

ಕರ್ನಾಟಕ ಹಾಲು ಮಹಾಮಂಡಳಿ ವ್ಯಾಪ್ತಿಯಲ್ಲಿರುವ 14 ಜಿಲ್ಲಾ ಹಾಲು ಒಕ್ಕೂಟಗಳಲ್ಲಿನ ಹಾಲು ಉತ್ಪಾದಕರ ಸಹಕಾರ ಸಂಘಗಳ ಸದಸ್ಯರುಗಳ ರಾಸುಗಳಿಗೆ ಮನೆಯ ಬಾಗಿಲಿಗೆ ಕೃತಕ ಗರ್ಭಧಾರಣೆ ಸೌಲಭ್ಯವನ್ನು ನಿರಂತರವಾಗಿ ತಳಿ ಅಭಿವೃದ್ಧಿ ಯೋಜನೆಯಡಿ ಒದಗಿಸಲಾಗುತ್ತಿದೆ. ಏಕ ಹಾಗು ಸಮೂಹ ಕೃತಕ ಗರ್ಭಧಾರಣೆ ಕೇಂದ್ರಗಳನ್ನು ಹಾಲು ಉತ್ಪಾದಕರ ಸಹಕಾರ ಸಂಘಗಳಲ್ಲಿ ತೆರೆಯಲಾಗಿದ್ದು, ಏಕ ಕೃ.ಗ. ಕೇಂದ್ರಗಳನ್ನು ಸಮೂಹ ಕೃ.ಗ. ಕೇಂದ್ರಗಳನ್ನಾಗಿ ಪರಿವರ್ತಿಸಲು ಒಕ್ಕೂಟಗಳಿಗೆ ಗುರಿ ನೀಡಿ ಅವಶ್ಯಕ ತರಬೇತಿ ಹಾಗು ಸಲಕರಣೆಗಳನ್ನು ಸಿಬ್ಬಂದಿಗಳಿಗೆ ಒಕ್ಕೂಟಗಳ ಮೂಲಕ ಒದಗಿಸಲಾಗಿದೆ.

2019-20ನೇ ಸಾಲಿನಲ್ಲಿ ಒಟ್ಟು 2928 ಕೃತಕ ಗರ್ಭಧಾರಣೆ ಕೇಂದ್ರಗಳು ಕಾರ್ಯನಿರ್ವಹಿಸುತ್ತಿದ್ದು, 35,99,219 ಕೃತಕ ಗರ್ಭಧಾರಣೆ ಸಾಧನೆಯಾಗಿರುತ್ತದೆ. ಹಾಗು 29,38,546 ರಾಸುಗಳನ್ನು ಫಲಪರೀಕ್ಷೆಗೊಳಪಡಿಸಲಾಗಿದ್ದು 2019-20ನೇ ಸಾಲಿನಲ್ಲಿ 13,27,811 ಕರುಗಳ ಜನನವಾಗಿರುತ್ತದೆ.

7. ಮೇವು ಅಭಿವೃದ್ಧಿ ಕಾರ್ಯಕ್ರಮ:

ಹೈನುಗಾರಿಕೆಯಲ್ಲಿ ಅಧಿಕ ಹಾಲು ಉತ್ಪಾದನೆ, ಹಾಲಿನ ಗುಣಮಟ್ಟ, ರಾಸುಗಳ ಆರೋಗ್ಯ ಸುಧಾರಣೆ ಹಾಗು ವಿಶೇಷವಾಗಿ ಹಾಲು ಉತ್ಪಾದನಾ ವೆಚ್ಚ ತಗ್ಗಿಸುವಲ್ಲಿ ಮೇವು ಅಭಿವೃದ್ಧಿ ಕಾರ್ಯಕ್ರಮವು ಮಹತ್ವದ ಪಾತ್ರವನ್ನು ವಹಿಸುತ್ತದೆ. ಈ ನಿಟ್ಟಿನಲ್ಲಿ 2019-20ನೇ ಸಾಲಿನಲ್ಲಿ ಆಧುನಿಕ ಕೃಷಿ ಹಾಗು ತಾಂತ್ರಿಕತೆ ಅಳವಡಿಸಿಕೊಂಡು ಹೆಚ್ಚು ಮೇವಿನ ಉತ್ಪಾದನೆ ಹಾಗು ರೈತರಲ್ಲಿ ಲಭ್ಯವಿರುವ ಮೇವಿನ ಮೌಲ್ಯವರ್ಧನೆ ಮಾಡಿ ಉಪಯೋಗಿಸಲು ಕಹಾಮವು ಹಾಲು ಒಕ್ಕೂಟಗಳ ಮುಖೇನ ಮಾರ್ಗದರ್ಶನ ನೀಡಲಾಗುತ್ತಿದೆ. ಹಾಗು ಕೇಂದ್ರ ಹಾಗು ರಾಜ್ಯ ಸರ್ಕಾರ ಮತ್ತು ಎನ್.ಡಿ.ಡಿ.ಬಿ. ವತಿಯಿಂದ ಅನೇಕ ಮೇವು ಅಭಿವೃದ್ಧಿಗೆ ಸಂಬಂಧಿಸಿದ ಯೋಜನೆಗಳನ್ನು ಒಕ್ಕೂಟಗಳ ಮುಖೇನ ಅನುಷ್ಠಾನಗೊಳಿಸಲು ಕ್ರಮಕೈಗೊಳ್ಳಲಾಗಿದೆ.

2019-20ನೇ ಸಾಲಿನಲ್ಲಿ ಋತುಮಾನ ಮೇವಿನ ಬೆಳೆಗಳಾದ ಆಫ್ರಿಕನ್ ಟಾಲ್ ಮುಸುಕಿನ ಜೋಳ ಹಾಗು ಎಸ್.ಎಸ್.ಜಿ.-898 ಮೇವಿನ ಜೋಳದ ತಳಿಯನ್ನು ಒಕ್ಕೂಟದ ವ್ಯಾಪ್ತಿಯಲ್ಲಿ ರೈತರಿಗೆ 11,711.75 ಕ್ವಿಂಟಾಲ್ ಬೀಜ ಹಾಗೂ ದ್ವಿದಳ ದಾನ್ಯಗಳ ಮೇವಿನ ಬೆಳೆಗಳಾದ ವೆಲ್‌ವೆಟ್ ಬೀನ್ಸ್ / ಅಲಸಂದೆ 140 ಕ್ವಿಂಟಾಲ್ ಬೀಜಗಳಿಗೆ ಕಹಾಮದಿಂದ ರೂ.118 ಲಕ್ಷ ಪ್ರೋತ್ಸಾಹಧನ ನೀಡಲಾಗಿರುತ್ತದೆ.

ಮೇವಿನ ಮರದ ಸಸಿಗಳನ್ನು ಹಾಲು ಉತ್ಪಾದಕರ ರೈತರ ಜಮೀನಿನಲ್ಲಿ ನಾಟಿ ಮಾಡಿ, ಬೇಸಿಗೆ / ಬರಗಾಲದ ಸಂದರ್ಭಗಳಲ್ಲಿ ಮೇವಾಗಿ ಉಪಯೋಗಕ್ಕೆ ಅನುಕೂಲವಾಗಲು 2019-20ನೇ ಸಾಲಿನಲ್ಲಿ ರೈತರಿಗೆ ವಿತರಣೆ ಮಾಡಿದ 1.75 ಲಕ್ಷ ಮೇವಿನ ಮರಗಳ ಸಸಿಗಳಿಗೆ ಕಹಾಮವತಿಯಿಂದ ಪ್ರತಿ ಸಸಿಗೆ ರೂ.2/- ರಂತೆ ಒಟ್ಟು ರೂ.3.5 ಲಕ್ಷ ಪ್ರೋತ್ಸಾಹಧನ ನೀಡಲಾಗಿರುತ್ತದೆ.

ಮೇವು ಕತ್ತರಿಸುವ ಯಂತ್ರ: ಒಣ ಹಾಗು ಹಸಿರು ಮೇವನ್ನು ತುಂಡರಿಸಿ ರಾಸುಗಳಿಗೆ ನೀಡುವುದರಿಂದ ಅಧಿಕ ಪ್ರಮಾಣದಲ್ಲಿ ಪೋಲಾಗುವುದನ್ನು ತಪ್ಪಿಸಲು ಹಾಗು ಸಮರ್ಪಕವಾಗಿ ಮೇವಿನ ಉಪಯುಕ್ತತೆಯನ್ನು ಪಡೆಯಲು ಒಕ್ಕೂಟಗಳವತಿಯಿಂದ ವಿವಿಧ ಯೋಜನೆಯಡಿ 2019-20ನೇ ಸಾಲಿನಲ್ಲಿ 850 ಯಂತ್ರಗಳಿಗೆ ಕಹಾಮವತಿಯಿಂದ ರೂ.7500/ ಅಥವಾ ಶೆ.25 ಇದರಲ್ಲಿ ಯಾವುದು ಕಡಿಮೆಯೋ ಅದರಂತೆ ಒಟ್ಟು ರೂ.57,11,584/- ಗಳನ್ನು ಒಕ್ಕೂಟಗಳಿಗೆ ಅನುದಾನವನ್ನಾಗಿ ಪಾವತಿಸಲಾಗಿದೆ.

ಹಸಿರು ಮೇವಿನ ಬಗ್ಗೆ ತರಬೇತಿ ಕಾರ್ಯಕ್ರಮ: ಹಸಿರು ಮೇವಿನ ವಿವಿಧ ಕಾರ್ಯಕ್ರಮಗಳ ಪರಿಣಾಮಕಾರಿ ಅನುಷ್ಠಾನ ಹಾಗು ಮೇವಿನ ಬೆಳೆಗಳನ್ನು ಬೆಳೆಸಲು ಪ್ರೋತ್ಸಾಹಿಸುವ ಸಲುವಾಗಿ ಕಹಾಮದ ತರಬೇತಿ ಕೇಂದ್ರಗಳಲ್ಲಿ ಉತ್ಪಾದಕರುಗಳಿಗೆ ಪ್ರತ್ಯೇಕವಾಗಿ ತರಬೇತಿಯನ್ನು ಆಯೋಜಿಸಲಾಗಿರುತ್ತದೆ ಹಾಗು ಒಕ್ಕೂಟಗಳಲ್ಲಿ ನಿರ್ಮಿಸಲಾಗಿರುವ ವಿವಿಧ ಮೇವಿನ ತಳಿಗಳ ಪ್ರಾತ್ಯಕ್ಷತೆ ಫಾರಂಗೆ ರೈತರ ಭೇಟಿಗೆ ವ್ಯವಸ್ಥೆ ಮಾಡಿ ಸೂಕ್ತ ಕೃಷಿ ತಾಂತ್ರಿಕ ಸಲಹೆಯನ್ನು ನೀಡಲಾಗುತ್ತಿದೆ. 2019-20ನೇ ಸಾಲಿನಲ್ಲಿ ಮೇವು ಅಭಿವೃದ್ಧಿ ಅಧಿಕಾರಿಗಳಿಗೆ ಧಾರವಾಡದ IGFRI ನಲ್ಲಿ ತರಬೇತಿ ಕಾರ್ಯಕ್ರಮವನ್ನು ಕಹಾಮವತಿಯಿಂದ ನೀಡಲಾಗಿರುತ್ತದೆ.

S.R. & M.R. ASSOCIATES CHARTERED ACCOUNTANTS BANGALORE

ಹಸಿರು ಮೇವಿನ ಕೊರತೆ ನೀಗಿಸಿ ರಾಸುಗಳಲ್ಲಿ ಹಾಲಿನ ಉತ್ಪಾದನೆ ಹಾಗು ಗುಣಮಟ್ಟ ಸುಧಾರಿಸುವ ಸಂಬಂಧ ಹಾಲು ಉತ್ಪಾದಕರಿಗೆ ಸೈಲೇಜ್ ಬೇಲ್ಸ್ ಖರೀದಿಸಿ ಕೊಡಲು ಕಹಾಮದಿಂದ ರೂ.28 ಲಕ್ಷಗಳನ್ನು ಅವಕಾಶ ಮಾಡಿಕೊಂಡು ಅನುಷ್ಠಾನಗೊಳಿಸಲಾಗುತ್ತಿದೆ.

ಪ್ರಕೃತಿ ವಿಕೋಪ/ ಬರ ಪರಿಸ್ಥಿತಿಯಿಂದಾಗಿ ಜಾನುವಾರುಗಳಿಗೆ ಮೇವಿನ ಕೊರತೆ ನೀಗಿಸಲು ಕಹಾಮವತಿಯಿಂದ ಬೆಳಗಾವಿ, ಧಾರವಾಡ, ವಿಜಯಪುರ, ಹಾಸನ ಮತ್ತು ದಕ್ಷಿಣ ಕನ್ನಡ ಹಾಲು ಒಕ್ಕೂಟಗಳಿಗೆ ಮಳೆ ಅತಿವೃಷ್ಟಿ ಸಮಯದಲ್ಲಿ ಉಚಿತವಾಗಿ ಪಶು ಆಹಾರ ಸರಬರಾಜುವಿಗೆ ರೂ.13.13 ಲಕ್ಷ ಬಿಡುಗಡೆ ಮಾಡಲಾಗಿದೆ.

2020–21ನೇ ಸಾಲಿನಲ್ಲಿ ಹಮ್ಮಿಕೊಳ್ಳಲಾಗುವ ಮುಂದಿನ ಅಭಿವೃದ್ಧಿ ಯೋಜನೆಗಳು:

- ಕೇಂದ್ರ ಪುರಸ್ಕೃತ ಎನ್.ಪಿ.ಡಿ.ಡಿ. ಯೋಜನೆಯಡಿಯಲ್ಲಿ ಕಹಾಮ ವ್ಯಾಪ್ತಿಯ 12 ಹಾಲು ಒಕ್ಕೂಟಗಳ 567 ಸಂಘಗಳಲ್ಲಿ ಶುದ್ಧ ಹಾಲು ಉತ್ಪಾದನೆಗಾಗಿ ಬಲ್ಕ್ ಮಿಲ್ಕ್ ಕೂಲರ್‌ಗಳ ಸ್ಥಾಪನೆಗೆ ರೂ.94.50 ಕೋಟಿಗಳ ಪ್ರಸ್ತಾವನೆಯನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸಲಾಗಿರುತ್ತದೆ. ಅದರಂತೆ, 2020–21 ಹಾಗೂ 2021–22 ನೇ ಸಾಲಿಗೆ 531 ಬಿ.ಎಂ.ಸಿ ಘಟಕ ಹಾಗೂ 531 AMCU with EMAT ಘಟಕ ಖರೀದಿ ಹಾಗೂ ಸ್ಥಾಪನೆಗಾಗಿ ಒಟ್ಟು ರೂ.7042.50 ಲಕ್ಷಗಳಿಗೆ ಅನುಮೋದನೆಯಾಗಿದ್ದು, ಇದರಲ್ಲಿ ಕೇಂದ್ರ ಸರ್ಕಾರದ ವಂತಿಗೆ ರೂ.4185.00 ಲಕ್ಷ ಅನುದಾನ ಮಂಜೂರಾಗಿ 2020–21ನೇ ಸಾಲಿನ 265 ಬಿ.ಎಂ.ಸಿ ಮತ್ತು AMCU with EMAT ಘಟಕಗಳಿಗೆ ಕೇಂದ್ರ ಸರ್ಕಾರದ ಅನುದಾನ ರೂ.2092.50 ಲಕ್ಷಗಳನ್ನು ಮೊದಲನೆ ಕಂತಾಗಿ ಬಿಡುಗಡೆ ಮಾಡಲಾಗಿರುತ್ತದೆ.
- ಹಾಲು ಉತ್ಪಾದಕರಿಗೆ ಪ್ರೋತ್ಸಾಹ ಧನ ಯೋಜನೆಯು ಮುಂದುವರೆದಿದ್ದು, ಸದರಿ ಸಾಲಿಗೆ ಪ್ರತಿ ಲೀ.ಹಾಲಿಗೆ ರೂ.5/– ನಿಗಧಿಪಡಿಸಲಾಗಿರುತ್ತದೆ. ರಾಜ್ಯ ಸರ್ಕಾರವು 2020–21ನೇ ಸಾಲಿನ ಆಯ–ವ್ಯಯದಲ್ಲಿ ರೂ.1250 ಕೋಟಿಗಳನ್ನು ಕಾಯ್ದಿರಿಸಲಾಗಿದೆ.
- **ನೂತನ ಸಂಘಗಳ ಮೂಲಭೂತ ಸೌಕರ್ಯ ಯೋಜನೆ:** 2020–21ನೇ ಸಾಲಿನಲ್ಲಿ ಕಹಾಮ ವ್ಯಾಪ್ತಿಯ ಹಾಲು ಒಕ್ಕೂಟಗಳಲ್ಲಿ ಒಟ್ಟು 400 ನೂತನ ಸಂಘಗಳನ್ನು ಸ್ಥಾಪಿಸಲು ಗುರಿ ಹೊಂದಿದ್ದು, ಈ ಸಂಘಗಳ ಮೂಲಭೂತ ಸೌಕರ್ಯಗಳಾದ ವಿದ್ಯುತ್ ಚಾಲಿತ ತೂಕದ ಯಂತ್ರ, ಸ್ವಯಂಚಾಲಿತ ಮಿಲ್ಕೋಟೆಸ್ಟರ್, ಹಾಲಿನ ಕ್ಯಾನ್‌ಗಳು ಮತ್ತು ಪೀಠೋಪಕರಣಗಳು ಹಾಗೂ ಇತರೇ ಪರಿಕರಗಳನ್ನು ಕಲ್ಪಿಸಲು ಪ್ರತಿ ಸಂಘಕ್ಕೆ ರೂ.1.00 ಲಕ್ಷದಂತೆ ಒಟ್ಟು ರೂ.400 ಲಕ್ಷಗಳ ಅನುದಾನ ಕಾಯ್ದಿರಿಸಲಾಗಿದೆ.
- **ಲಿಂಗ ನಿರ್ದರಿತ ವೀರ್ಯ ನಳಿಕೆ ಸರಬರಾಜು ಯೋಜನೆ:** ಕಹಾಮ ವ್ಯಾಪ್ತಿಯ ಹಾಲು ಒಕ್ಕೂಟಗಳಲ್ಲಿ ಈ ನೂತನ ಯೋಜನೆಯನ್ನು ಅನುಷ್ಠನಗೊಳಿಸಲು 20,000 ಲಿಂಗ ನಿರ್ದರಿತ ವೀರ್ಯನಳಿಕೆ ಖರೀದಿಗೆ ಶೇ.50 ರಷ್ಟು ವೆಚ್ಚವನ್ನು ಭರಿಸಲು ರೂ.100 ಲಕ್ಷಗಳನ್ನು ಕಾಯ್ದಿರಿಸಲಾಗಿದೆ.
- **ಬಲ್ಕ್ ಮಿಲ್ಕ್ ಕೂಲರ್ ಡೆಟಾ ಲಾಗರ್ ಕಿಟ್ :** ಕಹಾಮ ವ್ಯಾಪ್ತಿಯ ಹಾಲು ಒಕ್ಕೂಟಗಳಲ್ಲಿ ಶುದ್ಧ ಹಾಗೂ ಗುಣಮಟ್ಟದ ಹಾಲು ಶೇಖರಣೆಗಾಗಿ ಬಲ್ಕ್ ಮಿಲ್ಕ್ ಕೂಲರ್‌ಗಳನ್ನು ಸಂಘಗಳಲ್ಲಿ ಅಳವಡಿಸಲಾಗುತ್ತಿದೆ. ಈ ಬಲ್ಕ್ ಮಿಲ್ಕ್ ಕೂಲರ್‌ಗಳ ಸಮಗ್ರ ಕಾರ್ಯಾಚರಣೆ ನಿರ್ವಹಣೆಗಾಗಿ ಹೊಸದಾಗಿ ಅಳವಡಿಸುವ ಡೆಟಾ ಲಾಗರ್‌ಗಳಿಗೆ ಕಹಾಮವತಿಯಿಂದ ಶೇ.25 ರಷ್ಟು ಅನುದಾನದಂತೆ ಒಟ್ಟು ರೂ.100 ಲಕ್ಷಗಳನ್ನು ಕಾಯ್ದಿರಿಸಲಾಗಿದೆ.
- **ಬ್ರೂಣ ಖರೀದಿ / ವರ್ಗಾವಣೆ ಯೋಜನೆ:** ಕಹಾಮ ವ್ಯಾಪ್ತಿಯ ಹಾಲು ಒಕ್ಕೂಟಗಳ ವ್ಯಾಪ್ತಿಯಲ್ಲಿ ರಾಷ್ಟ್ರೀಯ ಹೈನು ಅಭಿವೃದ್ಧಿ ಸಂಸ್ಥೆಯ ಡೇರಿ ಸರ್ವೀಸಸ್ ರವರ ಮೂಲಕ ಆಯ್ದ ಹಾಲು ಒಕ್ಕೂಟಗಳಲ್ಲಿ ಸದರಿ ಯೋಜನೆಯನ್ನು ಅನುಷ್ಠಾನಗೊಳಿಸಲು ಒಟ್ಟು ತಗಲುವ ವೆಚ್ಚದಲ್ಲಿ ಶೇ.50 ರಷ್ಟನ್ನು ಭರಿಸಲು ಒಟ್ಟು ರೂ.125 ಲಕ್ಷಗಳ ಅನುದಾನವನ್ನು ಕಾಯ್ದಿರಿಸಲಾಗಿದೆ.

S.R. & M.R. ASSOCIATES CHARTERED ACCOUNTANTS BANGALORE

- **ನಂದಿನಿ ಗೋ ಸುರಕ್ಷಾ ಯೋಜನೆ:** ಕಹಾಮ ವ್ಯಾಪ್ತಿಯ ಹಾಲು ಒಕ್ಕೂಟಗಳಲ್ಲಿ ಲಭ್ಯವಿರುವ 12 ಲಕ್ಷ ಹೈನುರಾಸುಗಳಿಗೆ ವಿಮೆ ಮಾಡಿಸಲು ಹಾಲು ಒಕ್ಕೂಟಗಳ ಹಂತದಲ್ಲಿ ರಾಸು ವಿಮೆ ನಿದಧಿ ಸ್ಥಾಪಿಸಿ ಕಹಾಮವತಿಯಿಂದ ಟೆಂಡರ್ ಪ್ರಕ್ರಿಯೆ ನಡೆಸಿ, ಗೋ ಸುರಕ್ಷಾ ಯೋಜನೆ ಅನುಷ್ಠಾನಗೊಳಿಸಲು ಕ್ರಮವಿಡಲಾಗಿದೆ.
- **ಥೈಲೇರಿಯಾ ರೋಗ ನಿಯಂತ್ರಣ ಯೋಜನೆ:** ಕಹಾಮ ವ್ಯಾಪ್ತಿಯ ಹಾಲು ಒಕ್ಕೂಟಗಳಲ್ಲಿ ಇತ್ತೀಚೆಗೆ ಥೈಲೇರಿಯಾ ಕಾಯಿಲೆ ಹೆಚ್ಚಿನ ರೀತಿಯಲ್ಲಿ ಕಾಣಿಸಿಕೊಳ್ಳುತ್ತಿದ್ದು, ಕಾಯಿಲೆಯನ್ನು ನಿಯಂತ್ರಿಸುವ ಸಲುವಾಗಿ ಎಲ್ಲಾ ಒಕ್ಕೂಟಗಳ ವ್ಯಾಪ್ತಿಯಲ್ಲಿ ಲಸಿಕಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಬೇಕಾಗಿರುತ್ತದೆ. ಸದರಿ ಸಾಲಿನಲ್ಲಿ ಒಟ್ಟು 2 ಲಕ್ಷ ರಾಸುಗಳಿಗೆ ಯೋಜನೆ ರೂಪಿಸಿ ಒಟ್ಟು ವೆಚ್ಚದ ಶೇ.25 ರಷ್ಟು ಅನುದಾನ ನೀಡಲು ರಊ.75 ಲಕ್ಷಗಳನ್ನು ಕಾಯ್ದಿರಿಸಲಾಗಿದೆ.
- **ಸೈಲೇಜ್ ಬೇಲಿಂಗ್ ಘಟಕ ನಿರ್ಮಾಣ:** ಹಾಲು ಉತ್ಪಾದಕರಿಗೆ ಹಸಿರು ಮೇವು ಉತ್ಪಾದನೆಗೆ ಪ್ರೋತ್ಸಾಹ ನೀಡಲು ಪ್ರತಿ ಘಟಕಕ್ಕೆ ರೂ.12.50 ಲಕ್ಷ ಅಥವಾ ಖರೀದಿ ದರದ ಶೇ.50 ರಲ್ಲಿ ಯಾವುದು ಕಡಿಮೆಯೋ ಅದರಂತೆ ಒಟ್ಟು ರೂ.150 ಲಕ್ಷಗಳಿಗೆ / 12 ಸಂಖ್ಯೆಯ ಘಟಕಗಳಿಗೆ ಅವಕಾಶ ಕಲ್ಪಿಸಿಕೊಳ್ಳಲಾಗಿದೆ.
- **ಸ್ಟ್ರಾ ಬೇಲರ್ ಘಟಕ ನಿರ್ಮಾಣ:** ಹಾಲು ಉತ್ಪಾದಕರಿಗೆ ಒಣ ಮೇವು ಶೇಖರಣೆ ಮಾಡಲು ಪ್ರೋತ್ಸಾಹ ನೀಡಲು ಪ್ರತಿ ಘಟಕಕ್ಕೆ ರೂ.5.0 ಲಕ್ಷ ಅಥವಾ ಖರೀದಿ ದರದ ಶೇ.50ರಲ್ಲಿ ಯಾವುದು ಕಡಿಮೆಯೋ ಅದರಂತೆ ಒಟ್ಟು ರೂ.50 ಲಕ್ಷಗಳಿಗೆ / 10 ಸಂಖ್ಯೆಯ ಘಟಕ ನಿರ್ಮಾಣಕ್ಕೆ ಅವಕಾಶ ಕಲ್ಪಿಸಿಕೊಳ್ಳಲಾಗಿದೆ.
- ವಾಣಿಜ್ಯ ಮೇವು ಉತ್ಪಾದನೆಗೆ ಪ್ರತಿ ಎಕರೆಗೆ ಗರಿಷ್ಟ ರೂ.10,000 ಂತೆ ಒಟ್ಟು ರೂ.50 ಲಕ್ಷಗಳಿಗೆ / 500 ಎಕರೆಗೆ ಅವಕಾಶ ಕಲ್ಪಿಸಿಕೊಳ್ಳಲಾಗಿದೆ.
- **ಮೇವು ಅಭಿವೃದ್ಧಿ ಕಾರ್ಯಕ್ರಮ:** 2019-20 ನೇ ಸಾಲಿನಲ್ಲಿ ಅಧಿಕ ಮೇವಿನ ಇಳುವರಿ ನೀಡುವ ಋತುಮಾನ ಬೆಳೆಗಳಾದ ಆಫ್ರಿಕನ್ ಟಾಲ್ ಜೋಳ, ಎಸ್.ಎಸ್.ಜಿ-898, ಅಲಸಂದೆ, ವೆಲ್‌ವೆಟ್ ಬೀನ್ಸ್‌ಗಳ ಅಂದಾಜು 20500 ಕ್ವಿಂಟಾಲ್ ಬಿತ್ತನೆ ಬೀಜಗಳನ್ನು ವಿತರಿಸಲು ಗುರಿ ನಿಗಧಿಪಡಿಸಲಾಗಿದೆ.
- ಮೇವು ಪೋಲಾಗದಂತೆ ಹಾಗೂ ಹಸಿರು ಮೇವು ಸಂರಕ್ಷಿಸಲು ಸೈಲೇಜ್ ಬ್ಯಾಗ್, ಸೈಲೇಜ್ ಬೇಲಿಂಗ್, ಸ್ಟ್ರಾಬೇಲರ್ ಮತ್ತು ಮೇವು ತುಂಡರಿಸುವ ಯಂತ್ರಕ್ಕೆ ಪ್ರೋತ್ಸಾಹಧನ ನೀಡಲು ಯೋಜನೆ ರೂಪಿಸಲಾಗಿದೆ.
- ನೀರಾವರಿ ಸೌಲಭ್ಯ ಹೊಂದಿರುವ ರೈತರಿಂದ ವಾಣಿಜ್ಯವಾಗಿ ಮೇವು ಉತ್ಪಾದನೆ ಮಾಡಿಸಲು ಕಾರ್ಯಕ್ರಮ ಹಾಗೂ ಬರ ಪರಿಸ್ಥಿತಿ ನಿಭಾಯಿಸಲು ಯೋಜನೆಯನ್ನು ರೂಪಿಸಲಾಗಿರುತ್ತದೆ.

ಸ್ಟೆಪ್-ಸಂಜೀವಿನಿ ವಿಭಾಗ:

ಕರ್ನಾಟಕ ಹಾಲು ಮಹಾಮಂಡಳಿಯು ಕೇಂದ್ರ ಸರ್ಕಾರದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಹಯೋಗದೊಂದಿಗೆ ಗ್ರಾಮೀಣ ಬಡ / ದುರ್ಬಲ ವರ್ಗದ ಮಹಿಳೆಯರ ಅಭಿವೃದ್ಧಿಗಾಗಿ ಸ್ಟೆಪ್ (ಮಹಿಳೆಯರಿಗಾಗಿ ವೃತ್ತಿ ತರಬೇತಿ ಮತ್ತು ಉದ್ಯೋಗ ಬೆಂಬಲಿತ ಯೋಜನೆ) ಯೋಜನೆಯನ್ನು 1997-98 ನೇ ಸಾಲಿನಿಂದ ಜಾರಿಗೊಳಿಸಿದ್ದು, 8 ಹಂತಗಳಲ್ಲಿ ಒಟ್ಟು 1924 ಮಹಿಳಾ ಸಂಘಗಳನ್ನು ರಾಜ್ಯದ ಎಲ್ಲಾ 14 ಹಾಲು ಒಕ್ಕೂಟಗಳಲ್ಲಿ ಯೋಜನೆಯ ವ್ಯಾಪ್ತಿಗೆ ತಂದಿದ್ದು, ಅತ್ಯಂತ ಯಶಸ್ವಿಯಾಗಿ ಅನುಷ್ಠಾನಗೊಳಿಸಲಾಗಿದೆ. ಈ ಯೋಜನೆಗೆ ಭಾರತ ಸರ್ಕಾರದಿಂದ ರೂ.46.18 ಕೋಟಿ ಅನುದಾನ ಬಿಡುಗಡೆಯಾಗಿರುತ್ತದೆ, ಕಹಾಮ ವಂತಿಕೆ ಸೇರಿ ರೂ. 52.98 ಕೋಟಿ ಮೊತ್ತವು ಯೋಜನೆಯ ವಿವಿಧ ಕಾರ್ಯಕ್ರಮಗಳಿಗೆ ವಿನಿಯೋಗವಾಗಿರುತ್ತದೆ. ಯೋಜನೆಯ ಮೂಲಕ ಒಟ್ಟು 93419 ಆದ್ಯತಾ ಗುಂಪಿನ ಸದಸ್ಯೆಯರನ್ನು ಆಯ್ಕೆ ಮಾಡಿ ಹೈನುರಾಸು ಖರೀದಿಸಲು ಅಂಚಿನ ಹಣ ಬಿಡುಗಡೆ ಮಾಡಲಾಗಿದ್ದು 8 ಹಂತಗಳಲ್ಲಿ ಒಟ್ಟು 82498

S.R. & M.R. ASSOCIATES CHARTERED ACCOUNTANTS BANGALORE

ಹೈನುರಾಸುಗಳನ್ನು ಖರೀದಿಸಿ ಕೊಡಲಾಗಿದೆ. ಸದರಿ ಸದಸ್ಯೆಯರಿಂದ ದಿನಂ ಪ್ರತಿ ಸರಾಸರಿ 7.00 ಲಕ್ಷ ಲೀಟರ್ ಹಾಲನ್ನು ಒಕ್ಕೂಟಗಳಲ್ಲಿ ಖರೀದಿಸಿ ಪ್ರತಿ ದಿನಕ್ಕೆ ರೂ.175.00 ಲಕ್ಷಗಳಷ್ಟು ಹಣ ಪಾವತಿ ಮಾಡಲಾಗುತ್ತಿದೆ. ಸರ್ಕಾರದ ಬೆಂಬಲ ಬೆಲೆ ಸೇರಿ ಒಟ್ಟು ರೂ. 209.13 ಲಕ್ಷಗಳಷ್ಟು ಹಣ ಗ್ರಾಮೀಣ ಮಹಿಳೆಯರ ಕೈ ಸೇರುತ್ತಿದೆ.

ಕ್ಷೀರ-ಸಂಜೀವಿನಿ:

ಸ್ಟೆಪ್ ಯೋಜನೆಯ ನಂತರ ಕರ್ನಾಟಕ ರಾಜ್ಯ ಸರ್ಕಾರವು ಗ್ರಾಮೀಣಾಭಿವೃದ್ಧಿ ಇಲಾಖೆಯ ಸಹಯೋಗದೊಂದಿಗೆ, ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಸಂವರ್ಧನಾ ಸಂಸ್ಥೆಯ ಮೂಲಕ (ಕೆ.ಎಸ್.ಆರ್.ಎಲ್.ಪಿ.ಎಸ್.) ಕ್ಷೀರ-ಸಂಜೀವಿನಿ ಹಂತ-1 ರ ಯೋಜನೆಯನ್ನು 2014-15ರಿಂದ 2017-18ನೇ ಸಾಲಿನವರೆಗೆ 14 ಹಾಲು ಒಕ್ಕೂಟಗಳ ವ್ಯಾಪ್ತಿಯ ಒಟ್ಟು 250 ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘಗಳಲ್ಲಿ ಅನುಷ್ಠಾನಗೊಳಿಸಲಾಗಿದೆ.

ಈ ಯೋಜನೆಯು 10,000 ಆದ್ಯತಾ ಗುಂಪಿನ ಸದಸ್ಯರುಗಳನ್ನೊಳಗೊಂಡಿದ್ದು, ಸಂಜೀವಿನಿ ಕಾರ್ಯಕ್ರಮದ ಆಶಯದಂತೆ ದುರ್ಬಲ ವರ್ಗದ ಬಡತನ ರೇಖೆಗಿಂತ ಕೆಳಗಿರುವ ಗ್ರಾಮೀಣ ಪ್ರದೇಶದ ಪರಿಶಿಷ್ಟ ಜಾತಿ/ಪಂಗಡ, ವಿಕಲಚೇತನರು, ಭೂರಹಿತರು, ವಿಧವೆಯರು, ವಲಸೆ ನಿರತ ಕೂಲಿ ಕಾರ್ಮಿಕರು ಮತ್ತು ಇತರರು ಈ ಯೋಜನೆಯ ಫಲಾನುಭವಿಗಳಾಗಿದ್ದಾರೆ. ಕ್ಷೀರ-ಸಂಜೀವಿನಿ ಯೋಜನೆ ಅಡಿಯಲ್ಲಿ ವಿವಿಧ ತರಬೇತಿ ಕಾರ್ಯಕ್ರಮಗಳು, ಫಲಾನುಭವಿಗಳಿಗೆ ಅಂಚಿನ ಹಣ ನೀಡಿ ಬ್ಯಾಂಕ್ ಲಿಂಕೇಜ್ / ಸ್ಥಳೀಯ ಸಂಪನ್ಮೂಲಗಳ ಮೂಲಕ ಹೈನುರಾಸುಗಳನ್ನು ಖರೀದಿಸಿ ಕೊಡಿಸುವುದು, ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಗ್ರಾಮ ಮಟ್ಟದಲ್ಲಿ ನಡೆಸುವುದು, ಮಹಿಳಾ ಸಂಘಗಳಿಗೆ ಹಾಲು ಪರೀಕ್ಷಾ ಯಂತ್ರ, ತೂಕದ ಯಂತ್ರ, ಸೋಲಾರ್ ಪ್ಯಾಕ್, ಎರೆಹುಳು ಗೊಬ್ಬರ ಘಟಕ, ಮೇವು ಕತ್ತರಿಸುವ ಯಂತ್ರಗಳನ್ನು ನೀಡುವುದು, ಸ್ವಸಹಾಯ ಗುಂಪುಗಳನ್ನು ರಚಿಸುವುದು ಮತ್ತು ಅವುಗಳ ಬಲವರ್ಧನೆಗೆ ಸುತ್ತುನಿಧಿ ನೀಡುವುದು ಮುಖ್ಯವಾದ ಅಂಶವಾಗಿರುತ್ತದೆ. ಈ ಯೋಜನೆಗೆ KSRLPS ಸಂಸ್ಥೆಯು ರೂ.1353.58 ಲಕ್ಷಗಳು ಅನುದಾನ ಬಿಡುಗಡೆ ಮಾಡಿರುತ್ತದೆ. ಜಿಲ್ಲಾ ಹಾಲು ಒಕ್ಕೂಟಗಳು ಯೋಜನೆಯ ನಿಯಮಾನುಸಾರ ತಮ್ಮ ಪಾಲಿನ ವಂತಿಕೆ ಭರಿಸಿದ್ದು ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಅನುಷ್ಠಾನ ಮಾಡಲಾಗಿದೆ. ಸದರಿ ಯೋಜನೆಯಲ್ಲಿ ಆದ್ಯತಾ ಗುಂಪಿನ ಸದಸ್ಯರುಗಳಿಗೆ 3 ವರ್ಷದಲ್ಲಿ ಒಟ್ಟು 9630 ಹೈನುರಾಸುಗಳನ್ನು ಅಂಚಿನ ಹಣ/ ಬ್ಯಾಂಕ್ ಲಿಂಕೇಜ್ ಮೂಲಕ ಖರೀದಿಸಿಕೊಡಲಾಗಿದ್ದು, ಪ್ರತಿ ದಿನಕ್ಕೆ ಸರಾಸರಿ 96,000 ಲೀಟರ್ ಹಾಲನ್ನು ಒಕ್ಕೂಟಗಳು ಖರೀದಿಸಿ ದಿನಂ ಪ್ರತಿ 24.00 ಲಕ್ಷ ಪಾವತಿ ಮಾಡಲಾಗುತ್ತಿದೆ. ಕರ್ನಾಟಕ ಸರ್ಕಾರದ ಬೆಂಬಲ ಬೆಲೆಯೂ ಸೇರಿದಂತೆ ಪ್ರತಿ ದಿನ 29.00 ಲಕ್ಷ ದಷ್ಟು ಹಣ ಗ್ರಾಮೀಣ ಮಹಿಳೆಯರ ಕೈ ಸೇರುತ್ತಿದೆ.

ಕಹಾಮ ಸಂಜೀವಿನಿ:

ಕೇಂದ್ರ ಸರ್ಕಾರದ ಸ್ಟೆಪ್ ಯೋಜನೆ ಹಾಗೂ ರಾಜ್ಯ ಸರ್ಕಾರದ ಕ್ಷೀರ ಸಂಜೀವಿನಿ ಯೋಜನೆಗಳಲ್ಲಿ ಉತ್ತಮ ಪ್ರಗತಿ ಕಂಡು ಬಂದ ಕಾರಣ ಕರ್ನಾಟಕ ಸಹಕಾರಿ ಹಾಲು ಮಹಾಮಂಡಳಿಯು 2016-17 ನೇ ಸಾಲಿನಲ್ಲಿ ಕಹಾಮ-ಸಂಜೀವಿನಿ ಯೋಜನೆಯನ್ನು ಜಾರಿಗೆ ತಂದಿದ್ದು, 2017-18, 2018-19 ರಂತೆ 2019-20 ನೇ ಸಾಲಿಗೂ ಯೋಜನೆಯನ್ನು ಮುಂದುವರಿಸಲಾಗಿದೆ. ಈ ಯೋಜನೆಯಲ್ಲಿ ಪ್ರತಿ ವರ್ಷ ರಾಜ್ಯದ 14 ಹಾಲು ಒಕ್ಕೂಟಗಳ 100 ಹಾಲು ಉತ್ಪಾದಕರ ಮಹಿಳಾ ಸಂಘಗಳನ್ನು ಯೋಜನೆಯ ವ್ಯಾಪ್ತಿಗೆ ತೆಗೆದುಕೊಂಡು ಈವರೆವಿಗೆ ಒಟ್ಟು 400 ಹಾಲು ಉತ್ಪಾದಕರ ಮಹಿಳಾ ಸಂಘಗಳಲ್ಲಿನ ಒಟ್ಟು 16,000 ಆದ್ಯತಾ ಗುಂಪಿನ ಸದಸ್ಯರಿಗೆ ಯೋಜನೆಯ ಸೌಲಭ್ಯಗಳನ್ನು ಒದಗಿಸಲಾಗಿದೆ.

2019-20ನೇ ಸಾಲಿನ ಕಹಾಮ ಸಂಜೀವಿನಿ ಯೋಜನೆಯ ಒಟ್ಟು ಮೊತ್ತ ರೂ. 7.60 ಕೋಟಿಗಳಾಗಿದ್ದು, ಕಹಾಮ ವಂತಿಕೆ ಶೇ. 90 ರಷ್ಟು ಮತ್ತು ಒಕ್ಕೂಟಗಳ ವಂತಿಕೆ ಶೇ 10 ರಷ್ಟು. ಇರುತ್ತದೆ.

S.R. & M.R. ASSOCIATES CHARTERED ACCOUNTANTS BANGALORE

ಯೋಜನೆಯಲ್ಲಿ ಅಧ್ಯಕ್ಷಣಿಯರಿಗೆ, ಕಾರ್ಯಕಾರಿ ಮಂಡಳಿ ಸದಸ್ಯೆಯರಿಗೆ, ಕಾರ್ಯದರ್ಶಿಗಳಿಗೆ, ಸ್ವಸಹಾಯ ಗುಂಪುಗಳ ಪ್ರತಿನಿಧಿಗಳಿಗೆ ಅಗತ್ಯವಾದ ತರಬೇತಿಗಳನ್ನು ಹಾಗೂ ಹೈನುರಾಸುಗಳಿಗೆ ಆಲೋಪತಿ, ಆರ್ಯುವೇದ ಪದ್ದತಿ ಮೂಲಕ ಪ್ರಥಮ ಚಿಕಿತ್ಸೆ ನೀಡಲು ಸಂಘದ ಸಿಬ್ಬಂದಿಗೆ ತರಬೇತಿ ನೀಡಲಾಗಿದೆ.

2019-20ನೇ ಸಾಲಿನಲ್ಲಿ ಆರೋಗ್ಯ ಮತ್ತು ಪೌಷ್ಠಿಕ ಆಹಾರ, ಲಿಂಗ ತಾರತಮ್ಯ, ಮಹಿಳೆಯರಿಗಾಗಿ ಇರುವ ಕಾನೂನು ಅರಿವು, ಶಿಶು ಮತ್ತು ಮಕ್ಕಳ ಪೌಷ್ಠಿಕ ಆಹಾರ, ಪಶು ಆಹಾರ ಮತ್ತು ಮೇವು ಅಭಿವೃದ್ಧಿ ಕಾರ್ಯಕ್ರಮ, ಹೈನುರಾಸು ನಿರ್ವಹಣೆ ಕಾರ್ಯಕ್ರಮ, ಈ ಅರಿವು ಕಾರ್ಯಕ್ರಮಗಳ ಬಗ್ಗೆ ಒಟ್ಟು 467 ಶಿಬಿರಗಳನ್ನು ಗ್ರಾಮ ಮಟ್ಟದಲ್ಲಿ ಏರ್ಪಡಿಸಿದ್ದು, ಈ ಶಿಬಿರಗಳಲ್ಲಿ 19007 ಮಹಿಳೆಯರು ಪಾಲ್ಗೊಂಡಿರುತ್ತಾರೆ. 2019-20ನೇ ಸಾಲಿನಲ್ಲಿ 1000 ಆದ್ಯತಾ ಗುಂಪಿನ ಸದಸ್ಯೆರುಗಳಿಗೆ ಅಂಚಿನ ಹಣ ನೀಡಿ ಬ್ಯಾಂಕ್ ಲಿಂಕೇಜ್ ಮೂಲಕ ಹೈನುರಾಸುಗಳನ್ನು ಕೊಡಿಸುವ ಗುರಿ ಹೊಂದಲಾಗಿದ್ದು, ಅಂಚಿನ ಹಣವನ್ನು ಒಕ್ಕೂಟಗಳ ಮೂಲಕ ಆಯಾ ಸಂಘಗಳಿಗೆ ಬಿಡುಗಡೆ ಮಾಡಲಾಗಿದ್ದು ಹೈನುರಾಸುಗಳನ್ನು ಖರೀದಿಸಿ ಕೊಡಿಸಲಾಗುತ್ತಿದೆ. ಅಲ್ಲದೆ, ವಿಮೆ ಮೊತ್ತ ರೂ.2000/-ರಂತೆ ಮೊದಲು 10 ಸದಸ್ಯೆಯರಿಗೆ ನೀಡಿ ನಂತರ ರೊಟೇಷನ್ ಆಧಾರದಲ್ಲಿ ಉಳಿದ 30 ಆದ್ಯತಾ ಗುಂಪಿನ ಸದಸ್ಯೆರುಗಳಿಗೆ ಸೌಲಭ್ಯ ಒದಗಿಸಲಾಗುತ್ತದೆ.

2019-20 ನೇ ಸಾಲಿನ ಕಹಾಮ ಸಂಜೀವಿನಿ ಯೋಜನೆಯ ವಿಶೇಷ ತರಬೇತಿ ಮತ್ತು ಸೌಲಭ್ಯಗಳು:

ಸಂಘಗಳ ಆದ್ಯತಾ ಗುಂಪಿನ ಸದಸ್ಯೆಯರುಗಳಿಗೆ

1. ಆಡಳಿತ ಮಂಡಳಿ ಸದಸ್ಯೆಯರ ತರಬೇತಿ
2. ಅಮೂಲ್ ಪ್ರವಾಸ.
3. ಹೈನುರಾಸು ನಿರ್ವಹಣಾ ತರಬೇತಿ(15 ಪ್ರಗತಿ ಪರ ಹಾಲು ಉತ್ಪಾದಕ ಸದಸ್ಯೆಯರಿಗೆ)
4. ಶುದ್ದ ಹಾಲು ಉತ್ಪಾದನೆ/ ತರ್ಕಬದ್ದಗೊಳಿಸುವಿಕೆ ದರ ಪಟ್ಟಿ / ಗುಣಮಟ್ಟದ ಹಾಲು ಶೇಖರಣೆ ಬಗ್ಗೆ ತರಬೇತಿ.
5. ಔಷಧಿ ಸಸ್ಯ ಮತ್ತು ಪ್ರಾಥಮಿಕ ಆರೋಗ್ಯ ತರಬೇತಿ.
6. COW MAT ಸೌಲಭ್ಯ.

ಈ ರೀತಿ ಹಲವಾರು ಸೌಲಭ್ಯಗಳನ್ನು ಬಡತನ ರೇಖೆಗಿಂತ ಕಡಿಮೆ ಆದಾಯ ಹೊಂದಿರುವ ಮಹಿಳಾ ಸಂಘಗಳ ಸದಸ್ಯೆಯರುಗಳಿಗೆ ಒದಗಿಸಿ ಅವರುಗಳನ್ನು ಆರ್ಥಿಕ ಹಾಗೂ ಸಾಮಾಜಿಕವಾಗಿ ಅಭಿವೃದ್ಧಿ ಪಡಿಸಲು ಕರ್ನಾಟಕ ಮಹಾಮಂಡಳಿ ಶ್ರಮಿಸುತ್ತಿದೆ.

ಮಹಿಳಾ ಸಂಘಗಳಿಗೆ ಮೂಲಭೂತ ಸೌಲಭ್ಯಗಳನ್ನು ಒದಗಿಸುವ ನಿಟ್ಟಿನಲ್ಲಿ ಪ್ರತಿ ಸಂಘಕ್ಕೆ ಸ್ವಯಂ ಚಾಲಿತ ಹಾಲು ಶೇಖರಣಾ ಯಂತ್ರ, ಪೀರೋಪಕರಣಗಳು, ಸೋಲಾರ್ ಪ್ಯಾಕ್‌ಗಳನ್ನು ನೀಡಲಾಗುತ್ತಿದೆ.

ಸದರಿ ಯೋಜನೆಯಲ್ಲಿ 4 ವರ್ಷಗಳಲ್ಲಿ ಒಟ್ಟಾರೇ 8556 ಹೈನುರಾಸುಗಳನ್ನು ಅರ್ಹ ಆದ್ಯತಾ ಗುಂಪಿನ ಸದಸ್ಯೆಯರಿಗೆ ಅಂಚಿನ ಹಣ/ಬ್ಯಾಂಕ್ ಲಿಂಕೇಜ್ ಮೂಲಕ ಖರೀದಿಸಿ ಕೊಡಲಾಗಿದೆ. ಸದರಿ ಯೋಜನೆಯ ಸಂಘಗಳಿಂದ ಪ್ರತಿ ದಿನಕ್ಕೆ ಸರಾಸರಿ 1.77 ಲಕ್ಷ ಲೀಟರ್ ಹಾಲನ್ನು ಒಕ್ಕೂಟಗಳು ಖರೀದಿಸಿ ದಿನಂ ಪ್ರತಿ 44.46 ಲಕ್ಷ ಪಾವತಿ ಮಾಡಲಾಗುತ್ತಿದೆ. ಕರ್ನಾಟಕ ಸರ್ಕಾರದ ಬೆಂಬಲ ಬೆಲೆಯೂ ಸೇರಿದಂತೆ ಪ್ರತಿ ದಿನ 53.34 ಲಕ್ಷ ದಷ್ಟು ಹಣ ಗ್ರಾಮೀಣ ಮಹಿಳೆಯರ ಕೈ ಸೇರುತ್ತಿದೆ.

ರೋಟರಿ-ಕಹಾಮ ಕಾಮಧೇನು ಯೋಜನೆ:

ಈ ಯೋಜನೆಗೆ ರೋಟರಿ ಸಂಸ್ಥೆಯಿಂದ ರೂ.30.00 ಲಕ್ಷ ಅನುದಾನ ಹಾಗೂ ಕರ್ನಾಟಕ ಹಾಲು ಮಹಾಮಂಡಳಿ ವತಿಯಿಂದ ರೂ. 20.00 ಲಕ್ಷ ಒಟ್ಟು ರೂ.50.00 ಲಕ್ಷಗಳ ಈ ಯೋಜನೆಯನ್ನು ತುಮಕೂರು ಹಾಲು ಒಕ್ಕೂಟದ ವ್ಯಾಪ್ತಿಯ 20 ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘಗಳಲ್ಲಿ ಹಮ್ಮಿಕೊಳ್ಳಲಾಗಿದೆ. ಪ್ರತಿ ಸಂಘದ 05 ಬಡ ಮಹಿಳೆಯರಿಗೆ ತಲಾ ರೂ.50,000/- ದಂತೆ ಅಂಚಿನ ಹಣವನ್ನು ಬಡ್ಡಿರಹಿತ ಸಾಲವಾಗಿ ನೀಡಿ ಅವರುಗಳಿಗೆ ಸಮಿತಿಯ ಮೂಲಕ ಹೈನುರಾಸು ಖರೀದಿಸಿ

S.R. & M. ASSOCIATES CHARTERED ACCOUNTANTS BANGALORE

ನೀಡಲಾಗುತ್ತಿದೆ. ಒಟ್ಟು 100 ಫಲಾನುಭವಿ ಮಹಿಳೆಯರಿಗೆ ಹೈನುರಾಸು ನೀಡಲಾಗಿದೆ. ಈ ಫಲಾನುಭವಿಗಳು ಸಾಲದ ಮೊತ್ತವನ್ನು 24 ಸುಲಭ ಮಾಸಿಕ ಕಂತುಗಳಲ್ಲಿ ಸಂಘಕ್ಕೆ ಜಮಾ ಪಡೆದು ಈ ಮೊತ್ತದಿಂದ ಸಂಘದಲ್ಲಿನ ಇನ್ನುಳಿದ ಬಡ ಮಹಿಳಾ ಸದಸ್ಯರುಗಳಿಗೆ ರೊಟೇಷನ್ ಆಧಾರದ ಮೇಲೆ ತುಮಕೂರು ಹಾಲು ಒಕ್ಕೂಟದ ಮೇಲ್ವಿಚಾರಣೆಯಲ್ಲಿ ಹೈನುರಾಸು ಖರೀದಿಸಿ ಕೊಡಿಸಲಾಗುತ್ತಿದ್ದು, ಇದುವರೆಗೂ 71 ಹೈನುರಾಸುಗಳನ್ನು ರೊಟೇಷನ್ ಆಧಾರದ ಮೇಲೆ ಬಡ ಮಹಿಳಾ ಸದಸ್ಯೆಯರಿಗೆ ಕೊಡಿಸಲಾಗಿದೆ. ಇದರಿಂದ ಗ್ರಾಮೀಣ ಬಡ/ ದುರ್ಬಲ ವರ್ಗದ ಮಹಿಳೆಯರನ್ನು ಆರ್ಥಿಕವಾಗಿ ಸಬಲೀಕರಿಸಲು ಕರ್ನಾಟಕ ಹಾಲು ಮಹಾಮಂಡಳಿಯು ರೋಟರಿ ಸಂಸ್ಥೆಯೊಂದಿಗೆ ಈ ಯೋಜನೆಯನ್ನು ಅನುಷ್ಠಾನಗೊಳಿಸಿದೆ.

ಅಭಿಯಂತರ ವಿಭಾಗ:

2019–20ನೇ ಸಾಲಿನಲ್ಲಿ ನಿರ್ವಹಿಸಲಾಗಿರುವ ಯೋಜನೆಗಳು

- ರಾಮನಗರಜಿಲ್ಲೆ, ಚನ್ನಪಟ್ಟಣ ತಾಲ್ಲೂಕಿನ ಕನ್ನಮಂಗಲ ಗ್ರಾಮದಲ್ಲಿ ರೂ.300 ಕೋಟಿ ವೆಚ್ಚದಲ್ಲಿ 100 ಮೆ.ಟನ್ ಸಾಮರ್ಥ್ಯದ ಹಾಲಿನ ಪುಡಿ ಘಟಕವನ್ನು ಕಹಾಮ ವತಿಯಿಂದ ಅನುಷ್ಠಾನಗೊಳಿಸಲಾಗಿದೆ.
- ಮೈಸೂರು ಹಾಲು ಒಕ್ಕೂಟಕ್ಕಾಗಿ ಮೈಸೂರಿನಲ್ಲಿ ರೂ. 124 ಕೋಟಿ ವೆಚ್ಚದಲ್ಲಿ ಮೆಗಾ ಡೇರಿ ಸ್ಥಾಪಿಸುವ ಯೋಜನೆಯನ್ನು ಅನುಷ್ಠಾನಗೊಳಿಸಲಾಗಿರುತ್ತದೆ.
- ಚಾಮರಾಜನಗರ ಹಾಲು ಒಕ್ಕೂಟದಲ್ಲಿ ರೂ. 125 ಕೋಟಿ ವೆಚ್ಚದಲ್ಲಿ 3 ಲಕ್ಷ ಲೀಟರ್ ಸಾಮರ್ಥ್ಯದ ನೂತನ ಡೇರಿ / ಯು.ಹೆಚ್.ಟಿ. ಯೋಜನೆಯನ್ನು ಅನುಷ್ಠಾನಗೊಳಿಸಲಾಗಿರುತ್ತದೆ.
- ಹಾಸನ ಹಾಲು ಒಕ್ಕೂಟಕ್ಕಾಗಿ ಯು.ಹೆಚ್.ಟಿ ಸುವಾಸಿತ ಹಾಲನ್ನು ಪೆಟ್ ಬಾಟಲ್‌ನಲ್ಲಿ ತಯಾರಿಸುವ ಘಟಕ ಯೋಜನೆಯನ್ನು ಅಂದಾಜು ರೂ.150 ಕೋಟಿ ವೆಚ್ಚದಲ್ಲಿ ಸ್ಥಾಪಿಸಲಾಗುತ್ತಿದ್ದು, ಯೋಜನಾ ಕೆಲಸಗಳು ಪ್ರಗತಿಯಲ್ಲಿದೆ.
- ಹಾಸನ ಹಾಲು ಒಕ್ಕೂಟಕ್ಕಾಗಿ ಪ್ರಸ್ತುತವಿರುವ 2 LLPD ಸಾಮರ್ಥ್ಯದ ಯು.ಹೆಚ್.ಟಿ. ಘಟಕವನ್ನು 4 LLPD ಸಾಮರ್ಥ್ಯಕ್ಕೆ ವಿಸ್ತರಿಸುವ ಯೋಜನೆಯನ್ನು ಅಂದಾಜು ರೂ.60 ಕೋಟಿ ವೆಚ್ಚದಲ್ಲಿ ಅನುಷ್ಠಾನಗೊಳಿಸಲಾಗಿದೆ.
- ಧಾರವಾಡ ಪಶು ಆಹಾರ ಘಟಕದ ಆವರಣದಲ್ಲಿ ಅಂದಾಜು ರೂ.25 ಕೋಟಿ ವೆಚ್ಚದಲ್ಲಿ ನೂತನವಾಗಿ 300 ಮೆ.ಟನ್ ಸಾಮರ್ಥ್ಯದ ಪಶು ಆಹಾರ ಉತ್ಪಾದನಾ ಘಟಕವನ್ನು ಅನುಷ್ಠಾನಗೊಳಿಸಲಾಗಿದೆ.
- ಗುಬ್ಬಿ ಪಶು ಆಹಾರ ಘಟಕದ ಆವರಣದಲ್ಲಿ ಅಂದಾಜು ರೂ.25 ಕೋಟಿ ವೆಚ್ಚದಲ್ಲಿ ನೂತನವಾಗಿ 300 ಮೆ.ಟನ್ ಸಾಮರ್ಥ್ಯದ ಪಶು ಆಹಾರ ಉತ್ಪಾದನಾ ಘಟಕವನ್ನು ಅನುಷ್ಠಾನಗೊಳಿಸಲಾಗಿದೆ.
- ಮಂಡ್ಯ ಹಾಲು ಒಕ್ಕೂಟವು ರೂ.180 ಕೋಟಿ ವೆಚ್ಚದಲ್ಲಿ 8 LLPD - 12 LLPD ಸಾಮರ್ಥ್ಯದ ನೂತನ ಮೆಗಾಡೇರಿ ಸ್ಥಾಪಿಸುತ್ತಿದ್ದು, ಕೆಲಸಗಳು ಪ್ರಗತಿಯಲ್ಲಿರುತ್ತದೆ.
- ಶಿವಮೊಗ್ಗ ಹಾಲು ಒಕ್ಕೂಟಕ್ಕಾಗಿ ಶಿವಮೊಗ್ಗ ಡೇರಿಯಲ್ಲಿ ಅಂದಾಜು ರೂ.20 ಕೋಟಿ ವೆಚ್ಚದಲ್ಲಿ ನೂತನ ಹಾಲಿನ ಉತ್ಪನ್ನಗಳ ಘಟಕ ಸ್ಥಾಪಿಸಲಾಗುತ್ತಿದ್ದು, ಕೆಲಸಗಳು ಅಂತಿಮ ಹಂತದಲ್ಲಿರುತ್ತದೆ.
- ಕಹಾಮ ಕೇಂದ್ರ ಕಛೇರಿಯ ವಸತಿ ಸಂಕೀರ್ಣದಲ್ಲಿ ನೂತನವಾಗಿ ಬಹು ಅಂತಸ್ತಿನ 24 ಸಂಖ್ಯೆ ವಸತಿ ಗೃಹಗಳನ್ನು ನಿರ್ಮಿಸಲಾಗಿದೆ.
- ಕಲ್ಬುರ್ಗಿ ಡೇರಿ ಆವರಣದಲ್ಲಿ ನೂತನ ತರಬೇತಿ ಕೇಂದ್ರವನ್ನು ಸ್ಥಾಪಿಸಲಾಗಿರುತ್ತದೆ.
- ಡೀಪ್ ಫ್ರೀಜರ್ / ವೆಟ್ ಗೋದಾಮು ಯೋಜನೆಯನ್ನು ಚಲ್ಲಘಟ್ಟ ನಿವೇಶನದಲ್ಲಿ ಪಿ.ಪಿ.ಪಿ. ಮಾದರಿಯಲ್ಲಿ ಅನುಷ್ಠಾನಗೊಳಿಸಲಾಗಿದೆ.

S.R. & M.R. ASSOCIATES CHARTERED ACCOUNTANTS BANGALORE

- ಅರಕಲಗೂಡಿನಲ್ಲಿ 300 ಮೆ.ಟನ್ ಸಾಮರ್ಥ್ಯದ ನೂತನ ಪಶು ಆಹಾರ ಘಟಕ ಸ್ಥಾಪನೆ ಯೋಜನೆಯನ್ನು ಪಿ.ಪಿ.ಪಿ. ಮಾದರಿಯಲ್ಲಿ ಅನುಷ್ಠಾನಗೊಳಿಸಲಾಗುತ್ತಿದ್ದು, ಕೆಲಸಗಳು ಪ್ರಗತಿಯಲ್ಲಿದೆ.

- ನಂದಿನಿ ವೀರ್ಯಾಣು ಕೇಂದ್ರ, ಹೆಸರಘಟ್ಟದಲ್ಲಿ ಬುಲ್ ಮದರ್ ಫಾರಂ ಅನ್ನು ರೂ.5.25 ಕೋಟಿಗಳಲ್ಲಿ ಅನುಷ್ಠಾನಗೊಳಿಸಲಾಗುತ್ತಿದ್ದು, ಯೋಜನೆಯ ಕಾಮಗಾರಿ ಕೆಲಸಗಳು ಅಂತಿಮ ಹಂತದಲ್ಲಿದ್ದು, ಮೆಕ್ಯಾನಿಕಲ್ ಕೆಲಸಗಳು ಪ್ರಗತಿಯಲ್ಲಿರುತ್ತವೆ.

- ಬೆಳಗಾವಿ ಹಾಲು ಒಕ್ಕೂಟಕ್ಕಾಗಿ ರಾಯಭಾಗದಲ್ಲಿ 1 ಲಕ್ಷ ಲೀ. ಸಾಮರ್ಥ್ಯದ ಹಾಲು ಶೀಥಲೀಕರಣ ಕೇಂದ್ರವನ್ನು ಸ್ಥಾಪಿಸುತ್ತಿದ್ದು, ಕೆಲಸಗಳು ಅಂತಿಮ ಹಂತದಲ್ಲಿದೆ.

- ಅಂದಾಜು ರೂ.12 ಕೋಟಿ ವೆಚ್ಚಗಳಲ್ಲಿ ಹಾಸನ ಪಶು ಆಹಾರ ಘಟಕದಲ್ಲಿ 8000 ಮೆ.ಟನ್ ಸಾಮರ್ಥ್ಯದ ಗೋದಾಮು ನಿರ್ಮಾಣ ಮತ್ತು ಮೊಲಾಸಿಸ್ ಟ್ಯಾಂಕ್ ನಿರ್ಮಾಣ ಹಾಗೂ ಚನ್ನರಾಯಪಟ್ಟಣದ ನಂದಿನಿ ಹೈ-ಟೆಕ್ ಪ್ರಾಡಕ್ಟ್ ಪ್ಲಾಂಟ್‌ನಲ್ಲಿ ಯು.ಹೆಚ್.ಟಿ. ಗೋದಾಮು ನಿರ್ಮಾಣ ಕಾಮಗಾರಿಗಳನ್ನು ನಿರ್ವಹಿಸಲಾಗಿದೆ.

- ಕೆ.ಆರ್.ಪೇಟೆ ವ್ಯಾಪ್ತಿಯಲ್ಲಿ 300 ಮೆ.ಟನ್ ಸಾಮರ್ಥ್ಯದ ಪಶು ಆಹಾರ ಘಟಕವನ್ನು ಅಂದಾಜು ರೂ.70 ಕೋಟಿ ವೆಚ್ಚಗಳಲ್ಲಿ ಅನುಷ್ಠಾನಗೊಳಿಸಲು ಕ್ರಮವಿಡಲಾಗಿದೆ.

- ಗುಬ್ಬಿ ಪಶು ಆಹಾರ ಘಟಕದಲ್ಲಿ ಸಿಬ್ಬಂದಿ ವಸತಿ ಗೃಹ ನಿರ್ಮಾಣ ಮತ್ತು ಹಾಸನ ಪಶು ಆಹಾರ ಘಟಕದಲ್ಲಿ ಗೋದಾಮು ನಿರ್ಮಾಣ ಹಲವಾರು ಮೂಲಭೂತ ಸೌಕರ್ಯ ಬಲವರ್ಧನೆ ಕೆಲಸಗಳನ್ನು ಕೈಗೊಳ್ಳಲಾಗುತ್ತಿದೆ.

- ಹಾಸನ ಹಾಲು ಒಕ್ಕೂಟ ಮತ್ತು ತುಮಕೂರು ಹಾಲು ಒಕ್ಕೂಟಗಳಿಗಾಗಿ ಹಲವಾರು ಮೂಲಭೂತ ಸೌಕರ್ಯವನ್ನು ಕಲ್ಪಿಸುವ ಸಂಬಂಧದ ಕೆಲಸಗಳನ್ನು ನಿರ್ವಹಿಸಲಾಗುತ್ತಿದೆ.

2020-21ನೇ ಸಾಲಿನಲ್ಲಿ ಉದ್ದೇಶಿಸಲಾಗಿರುವ ಕಾರ್ಯಚಟುವಟಿಕೆಗಳು

- ಹಾವೇರಿ ಜಿಲ್ಲೇಯಲ್ಲಿ ಪ್ರತಿನಿತ್ಯ 1 ಲಕ್ಷ ಲೀ. ನಿಂದ 2 ಲಕ್ಷ ಲೀ. ಗೆ ವೃದ್ಧಿಸುವ ಹಾಲು ಸಂಸ್ಕರಣೆ ಸಾಮರ್ಥ್ಯ ಮತ್ತು 50,000 ಲೀ. ಸಾಮರ್ಥ್ಯದ ಯು.ಹೆಚ್.ಟಿ. ಕಾಂಬಿಬ್ಲಾಕ್ ಪ್ಯಾಕಿಂಗ್ ಘಟಕವನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ.
- ಮಾಹೆಯಾನ 800-1000 ಮೆ.ಟನ್ ಸಾಮರ್ಥ್ಯದ ಪೌಚ್ ಫಿಲಂ ಉತ್ಪಾದನಾ ಘಟಕವನ್ನು ಸೂಕ್ತ ಸ್ಥಳದಲ್ಲಿ ಸ್ಥಾಪಿಸಲು ಉದ್ದೇಶಿಸಲಾಗಿರುತ್ತದೆ.
- ಹೈದರಾಬಾದ್ ಕರ್ನಾಟಕ ವ್ಯಾಪ್ತಿಯ ರಾಯಚೂರು ಜಿಲ್ಲೆಯ ದಡೇಸೂಗೂರುನಲ್ಲಿ ನೂತನವಾಗಿ 150 ಮೆ.ಟನ್ ಸಾಮರ್ಥ್ಯದ ಪಶು ಆಹಾರ ಘಟಕವನ್ನು ಅನುಷ್ಠಾನಗೊಳಿಸಲು ಉದ್ದೇಶಿಸಲಾಗಿರುತ್ತದೆ.
- ಕೋಲಾರ ಒಕ್ಕೂಟದ ವ್ಯಾಪ್ತಿಯಲ್ಲಿ 500 ಮೆ.ಟನ್ ಸಾಮರ್ಥ್ಯದ ಪಶು ಆಹಾರ ಘಟಕಗಳನ್ನು ಅಂದಾಜು ರೂ.90 ಕೋಟಿ ವೆಚ್ಚಗಳಲ್ಲಿ ಅನುಷ್ಠಾನಗೊಳಿಸಲು ಉದ್ದೇಶಿಸಲಾಗಿರುತ್ತದೆ.
- ಕಾರೋಗೇಟೆಡ್ ಬಾಕ್ಸ್ ಘಟಕವನ್ನು ಅಂದಾಜು ರೂ.30 ಕೋಟಿ ವೆಚ್ಚಗಳಲ್ಲಿ ಅನುಷ್ಠಾನಗೊಳಿಸಲು ಉದ್ದೇಶಿಸಲಾಗಿರುತ್ತದೆ.
- ನಂದಿನಿ ಪ್ರೀಮಿಯಮ್ ದರ್ಜೆಯ ಚಾಕೋಲೇಟನ್ನು ಕೋ-ಪ್ಯಾಕಿಂಗ್ ಮಾಡಿ ಮಾರುಕಟ್ಟೆಗೆ ಒದಗಿಸುವ ಉದ್ದೇಶಿಸಲಾಗಿರುತ್ತದೆ.
- ಹಾಸನ ಡೇರಿ ವಿಸ್ತರಣೆ 3 ಲಕ್ಷ ಲೀ. ಸಾಮರ್ಥ್ಯದಿಂದ 5 ಲಕ್ಷ ಲೀ. ಸಾಮರ್ಥ್ಯಕ್ಕೆ ವೃದ್ಧಿಸುವ ಇ.ಟಿ.ಪಿ. ಘಟಕದ ವಿಸ್ತರಣೆ ಕೆಲಸಗಳನ್ನು ಅನುಷ್ಠಾನಗೊಳಿಸಲು ಉದ್ದೇಶಿಸಲಾಗಿರುತ್ತದೆ.

S.R. & M.R. ASSOCIATES CHARTERED ACCOUNTANTS BANGALORE

- ಹಾಸನ ಹಾಲು ಒಕ್ಕೂಟಕ್ಕಾಗಿ ಬೀರೂರು ಶೀಥಲೀಕರಣ ಘಟಕದ ಬಲವರ್ಧನೆ, ಕೂಡಿಗೆ ಡೇರಿ ವಿಸ್ತರಣೆ, ಹೊಳೆನರಸೀಪುರ ಅಭಿವೃದ್ಧಿ ಕೆಲಸಗಳನ್ನು ನಿರ್ವಹಿಸಲು ಉದ್ದೇಶಿಸಲಾಗಿದೆ.
- ಬೆಂಗಳೂರಿನ ನಂದಿನಿ ಉತ್ಪನ್ನ ಘಟಕದ ಉನ್ನತೀಕರಣ/ಬಲವರ್ಧನೆ ಕೆಲಸಗಳನ್ನು ನಿರ್ವಹಿಸಲು ಉದ್ದೇಶಿಸಲಾಗಿದೆ.
- ಮೈಸೂರು ಮತ್ತು ಉತ್ತರ ಕರ್ನಾಟಕ ಭಾಗದಲ್ಲಿ ನೂತನ ನಂದಿನಿ ಉತ್ಪನ್ನ ಘಟಕವನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ.

ಕೇಂದ್ರೀಯ ತರಬೇತಿ ಸಂಸ್ಥೆ ಕಹಾಮ ಘಟಕ

2019–20 ನೇ ಸಾಲಿನ ತರಬೇತಿ ಕೇಂದ್ರಗಳಲ್ಲಿ ಆಯೋಜಿಸಲಾದ ತರಬೇತಿ ಕಾರ್ಯಕ್ರಮಗಳ ವಿವರ

ಹಾಲು ಉತ್ಪಾದಕ ಸಹಕಾರಿ ಸಂಘದ ಸಿಬ್ಬಂದಿಗಳು, ಕಾರ್ಯಕಾರಿ ಮಂಡಳಿ ಸದಸ್ಯರುಗಳು ಮತ್ತು ಹಾಲು ಉತ್ಪಾದಕ ಸದಸ್ಯರುಗಳಿಗೆ ಹಾಲು ಉತ್ಪಾದನೆಗೆ ಪೂರಕವಾದ ತಿಳುವಳಿಕೆ, ಜ್ಞಾನ, ತಾಂತ್ರಿಕತೆ ಮತ್ತು ಸಹಕಾರಿ ಸಂಘಗಳನ್ನು ಸಮರ್ಪಕವಾಗಿ ನಡೆಸಲು ಅಗತ್ಯ ಇರುವ ಮಾಹಿತಿಗಳ ಬಗ್ಗೆ ವ್ಯವಸ್ಥಿತವಾಗಿ ತರಬೇತಿಯನ್ನು ನೀಡಲು ಬೆಂಗಳೂರು, ಮೈಸೂರು ಮತ್ತು ಧಾರವಾಡದಲ್ಲಿ ತರಬೇತಿ ಕೇಂದ್ರಗಳನ್ನು ಸ್ಥಾಪಿಸಲಾಗಿರುತ್ತದೆ. ಸಹಕಾರಿ ಸಂಘದ ಸಿಬ್ಬಂದಿ ಹಾಗೂ ಹಾಲು ಉತ್ಪಾದಕ ಸದಸ್ಯರ ತರಬೇತಿ ಕಾರ್ಯಕ್ರಮಗಳ ಚಟುವಟಿಕೆಗಳೊಂದಿಗೆ ಸಂಸ್ಥೆಯ ಅಧಿಕಾರಿ/ಸಿಬ್ಬಂದಿಗಳಿಗೆ ಕಛೇರಿಯಲ್ಲಿ ಸುಗಮವಾಗಿ ಕೆಲಸ ನಿರ್ವಹಿಸಲು, ಮಾನವ ಸಂಪನ್ಮೂಲ ಹಾಗು ತಾಂತ್ರಿಕ ವಿಷಯಗಳಿಗೆ ಸಂಬಂದಿಸಿದಂತೆ ಅಂತರಿಕ ತರಬೇತಿ ಕಾರ್ಯಕ್ರಮಗಳನ್ನು ಕೇಂದ್ರೀಯ ತರಬೇತಿ ಸಂಸ್ಥೆಯಲ್ಲಿ ಆಯೋಜಿಸಲಾಗುತ್ತಿರುತ್ತದೆ.

2019–20 ನೇ ಸಾಲಿನ ಸಮಗ್ರ ವ್ಯಾಪಾರ ಯೋಜನೆಯಡಿಯಲ್ಲಿ ಅಳವಡಿಸಲಾದ 21 ವಿವಿಧ ತರಬೇತಿ ಕಾರ್ಯಕ್ರಮಗಳ ವಾರ್ಷಿಕ ವೇಳಾಪಟ್ಟಿಯ ಪ್ರಕಾರ, ಮೂರು ತರಬೇತಿ ಕೇಂದ್ರಗಳಿಂದ ಒಟ್ಟು 34,305 ಅಭ್ಯರ್ಥಿಗಳ ಗುರಿಯನ್ನು ಹೊಂದಲಾಗಿದ್ದು 34,825 ಅಭ್ಯರ್ಥಿಗಳಿಗೆ ತರಬೇತಿಯನ್ನು ನೀಡಲಾಗಿರುತ್ತದೆ.

ತರಬೇತಿ ಕೇಂದ್ರಗಳಲ್ಲಿ ಆಯೋಜಿಸಲಾಗಿದ್ದ, ಮಾನವ ಸಂಪನ್ಮೂಲ ಹಾಗೂ ತಾಂತ್ರಿಕ ತರಬೇತಿ ಕಾರ್ಯಕ್ರಮಗಳಲ್ಲಿ ಕಹಾಮ ಘಟಕ/ಒಕ್ಕೂಟಗಳ ಒಟ್ಟು 874 ಅಧಿಕಾರಿ/ಸಿಬ್ಬಂದಿಗಳಿಗೆ ತರಬೇತಿಯನ್ನು ನೀಡಲಾಗಿರುತ್ತದೆ.

ಸಹಕಾರಿ ತರಬೇತಿ ಸಂಸ್ಥೆಗಳಾದ IRMA, Fiscal Policy Institute, ICAR-National Dairy Research Institute, Adugodi, Bangalore ಮತ್ತು ಇತರೆ ತರಬೇತಿ ಸಂಸ್ಥೆಗಳಿಗೆ ತಾಂತ್ರಿಕ ತರಬೇತಿ ಕಾರ್ಯಕ್ರಮಗಳಿಗೆ 06 (ಕೇಂದ್ರ ಕಛೇರಿ ಹಾಗು ಘಟಕಗಳು) ಅಧಿಕಾರಿಗಳನ್ನು ತರಬೇತಿಗೆ ನಿಯೋಜಿಸಲಾಗಿರುತ್ತದೆ.

ಧಾರವಾಡ ತರಬೇತಿ ಸಂಸ್ಥೆ:

- ತರಬೇತಿ ಕೇಂದ್ರದಲ್ಲಿ ವಿವಿಧ ತರಬೇತಿ ಕಾರ್ಯಕ್ರಮ ಹಾಗೂ ಕಾರ್ಯಾಗಾರಗಳನ್ನು ಏರ್ಪಡಿಸಿ, ಒಟ್ಟು 52,994 ಮಾನವ ದಿನಗಳ ಗುರಿಗಳಿಗೆ ಒಟ್ಟು 43,737 ಮಾನವ ದಿನಗಳ ಪ್ರಗತಿ ಸಾಧಿಸಿ ಶೇ.82.53 ರಷ್ಟು ಸಾಧನೆ ಮಾಡಿದೆ.
- ಧಾರವಾಡ, ಬೆಳಗಾವಿ, ಶಿವಮೊಗ್ಗ, ಬಳ್ಳಾರಿ ಹಾಗೂ ಕಲಬುರಗಿ ಹಾಲು ಒಕ್ಕೂಟಗಳ ಒಟ್ಟು 85 ಅಧಿಕಾರಿ/ ಸಿಬ್ಬಂದಿಗಳಿಗೆ ಸಂಘಗಳ ಆಡಳಿತ ಹಾಗೂ ಲೆಕ್ಕಪತ್ರ ವಿಶ್ಲೇಷಣಾ ಕಾರ್ಯಾಗಾರವನ್ನು 06 ದಿನಗಳ ಅವಧಿಗೆ ವಿಶೇಷವಾಗಿ ಹಮ್ಮಿಕೊಂಡು ಸಾಧನೆ ಮಾಡಿದೆ.

S.R. & M.R. ASSOCIATES CHARTERED ACCOUNTANTS BANGALORE

- ಧಾರವಾಡ, ಬೆಳಗಾವಿ, ಶಿವಮೊಗ್ಗ, ಬಳ್ಳಾರಿ ಹಾಗೂ ವಿಜಯಪುರ ಹಾಲು ಒಕ್ಕೂಟಗಳ ಒಟ್ಟು 25 ಅಧಿಕಾರಿ/ ಸಿಬ್ಬಂದಿಗಳಿಗೆ ವಿಶೇಷವಾಗಿ ಇನಾಫ್ ಕಾರ್ಯಾಗಾರವನ್ನು ಏರ್ಪಡಿಸಲಾಗಿರುತ್ತದೆ.
- ಶಿವಮೊಗ್ಗ, ಹಾಸನ ಹಾಗೂ ದ.ಕನ್ನಡ ಹಾಲು ಒಕ್ಕೂಟಗಳ ಒಟ್ಟು 102 ಅಧಿಕಾರಿಗಳಿಗೆ ವಿಶೇಷವಾಗಿ ಬಿ.ಎಂ.ಸಿ.ಯೂ ನಿರ್ವಹಣೆ ಕಾರ್ಯಾಗಾರವನ್ನು ಹಮ್ಮಿಕೊಳ್ಳಲಾಗಿರುತ್ತದೆ.
- ಒಕ್ಕೂಟಗಳ ಒಟ್ಟು 58 ಜನ ನಂದಿನಿ ಡೀಲರ್/ ಫ್ರ್ಯಾಂಚೈಸೆದಾರರು/ ಪಾರ್ಲರ್ ನಡೆಸುವವರುಗಳಿಗೆ ವಿಶೇಷವಾಗಿ ಮಾರುಕಟ್ಟೆ ಅಭಿವೃದ್ಧಿ ಕಾರ್ಯಾಗಾರವನ್ನು ತರಬೇತಿ ಕೇಂದ್ರದಲ್ಲಿ ಏರ್ಪಡಿಸಲಾಗಿರುತ್ತದೆ.
- ತರಬೇತಿ ಕೇಂದ್ರದ ಮೂಲಭೂತ ಸೌಕರ್ಯಗಳನ್ನು ಸಂಪೂರ್ಣವಾಗಿ ಬಳಕೆ ಮಾಡಿಕೊಳ್ಳಲು ಇತರೆ ಸರಕಾರಿ ಹಾಗೂ ಅರೆಸರ್ಕಾರಿ ಸಂಘ ಸಂಸ್ಥೆಗಳಿಗೆ ವಿವಿಧ ತರಬೇತಿ/ ಕಾರ್ಯಾಗಾರಗಳಿಗೆ ಅವಕಾಶ ಮಾಡಿಕೊಡಲಾಗಿದೆ.
- ಸದರಿ ವರ್ಷದಲ್ಲಿ ವಿಶೇಷವಾಗಿ ಅಧ್ಯಕ್ಷರು ಹಾಗೂ ಕಾರ್ಯದರ್ಶಿಗಳಿಗೆ ಚೇತನಾ ಶಿಬಿರಗಳನ್ನು ಬೆಳ್ತಂಗಡಿಯಲ್ಲಿರುವ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಸಂಸ್ಥೆಯಲ್ಲಿ ಹಮ್ಮಿಕೊಳ್ಳಲಾಗಿದೆ.

ಮೈಸೂರು ತರಬೇತಿ ಸಂಸ್ಥೆ:

2019-20 ನೇ ಸಾಲಿನಲ್ಲಿ ಹಮ್ಮಿಕೊಳ್ಳಲಾಗಿದ್ದ ತರಬೇತಿ ಕಾರ್ಯಕ್ರಮಗಳ ಸಾಧನೆಯ ವಿವರಗಳು ಈ ಕೆಳಕಂಡಂತಿದೆ.

ಕ್ರ.ಸಂ.	ತರಬೇತಿಯ ಹೆಸರು	ಗುರಿ	ಸಾಧನೆ	%
1	ಹೈನುರಾಸು ನಿರ್ವಹಣಾ ತರಬೇತಿ	7119	7598	106
2	ಆಡಳಿತ ಮಂಡಳಿ ಸದಸ್ಯರ ತರಬೇತಿ	4186	4949	118
3	ಹಾಲು ಪರೀಕ್ಷಕರ ತರಬೇತಿ	450	443	103
3 a)	ಹಾಲು ಪರೀಕ್ಷಕರ ತರಬೇತಿ(ಕಹಾಮ ಐಬಿಪಿ)	-	29	
4	ಪ.ವೈ.ಪ್ರ.ಚಿ.ತ	254	172	74
4a)	ಪ.ವೈ.ಪ್ರ.ಚಿ.ತ (ಕಹಾಮ ಐಬಿಪಿ)	-	18	
5	ಮುಖ್ಯ ಕಾರ್ಯನಿರ್ವಾಹಕರ ತರಬೇತಿ	154	201	146
5a)	ಮುಖ್ಯ ಕಾರ್ಯನಿರ್ವಾಹಕರ ತರಬೇತಿ (ಕಹಾಮ ಐಬಿಪಿ)	-	24	
6	ಮೇವು & ಪಶು ಆಹಾರ ಬಳಕೆ ತರಬೇತಿ	250	492	197
7	ಕೃ.ಗ ತ	27	26	96
8	ಕೃ.ಗ. ಮರು ತ	66	52	79
9	ಫಲ ಪರೀಕ್ಷೆ ತರಬೇತಿ	39	19	49
10	ಬಿ.ಎಂ.ಸಿ.ತ	695	323	46
11	ಕಾರ್ಯದರ್ಶಿ ಲೆಕ್ಕಪತ್ರ ತರಬೇತಿ	225	178	79
12	ಅಧ್ಯಕ್ಷರ ಚೇತನಾ ತರಬೇತಿ	258	201	78
13	ಅಧ್ಯಕ್ಷರಿಗೆ ಲೆಕ್ಕಪತ್ರ ತರಬೇತಿ	48	10	21
14	ಹಾಲು ಮಾರಾಟ ಪ್ರತಿನಿದಿಗಳಿಗೆ ತರಬೇತಿ	60	54	90
15	ಎ.ಎಂ.ಸಿ.ಯು. ತರಬೇತಿ	836	450	54
16	ಸ್ವ-ಸಹಾಯ ಗುಂಪುಗಳ ಪತ್ರಿನಿದಿಗಳಿಗೆ ಲೆಕ್ಕಪತ್ರ	126	146	116

S.R. & M.K. ASSOCIATES CHARTERED ACCOUNTANTS BANGALORE

	ತರಬೇತಿ			
17	ಸಂಘಗಳ ಸಿಬ್ಬಂದಿಗೆ ಬೇಸಿಕ್ ಕಂಪ್ಯೂಟರ್ ತರಬೇತಿ	20	0	
18	ಅಧಿಕಾರಿಗಳಿಗೆ ಮಾ.ಸಂ.ಅ ತ	-	52	
19	ಅಧಿಕಾರಿಗಳಿಗೆ ಹಾಲು ಉತ್ಪಾದಕರ ಸಹಕಾರ ಸಂಘಗಳಲ್ಲಿ ಆಡಳಿತ & ಲೆಕ್ಕಪತ್ರ ನಿರ್ವಹಣೆ ಕಾರ್ಯಾಗಾರ	-	22	
20	ಅಧಿಕಾರಿಗಳಿಗೆ ಕಛೇರಿ ಕಾರ್ಯ ವಿಧಾನ ತರಬೇತಿ ಕಾರ್ಯಾಗಾರ	-	27	
21	ಒಕ್ಕೂಟದ ಅಧಿಕಾರಿ/ಸಿಬ್ಬಂದಿಗಳಿಗೆ ಅಭಿಶಿಕ್ಷಣ ತರಬೇತಿ	-	68	
	ಒಟ್ಟು	**14813**	**15554**	**105**

2019–20 ನೇ ಸಾಲಿನಲ್ಲಿ ಶೇ.105 ಗುರಿ ಸಾಧನೆಯಾಗಿರುತ್ತದೆ. ಸದರಿ ಸಾಲಿನಲ್ಲಿ ಒಕ್ಕೂಟ/ಘಟಕಗಳ ಬೇಡಿಕೆಯನುಸಾರ ಅಧಿಕಾರಿ/ಸಿಬ್ಬಂದಿಗಳಿಗೆ ಮಾನವ ಸಂಪನ್ಮೂಲ ಅಭಿವೃದ್ಧಿ ತರಬೇತಿ, ಹಾಲು ಉತ್ಪಾದಕರ ಸಹಕಾರ ಸಂಘಗಳಲ್ಲಿ ಆಡಳಿತ ಮತ್ತು ಲೆಕ್ಕಪತ್ರ ನಿರ್ವಹಣೆ ಕಾರ್ಯಾಗಾರ, ಕಛೇರಿ ಕಾರ್ಯ ವಿಧಾನ ತರಬೇತಿ, ಅಭಿಶಿಕ್ಷಣ ತರಬೇತಿ ಕಾರ್ಯಾಗಾರಗಳನ್ನು (ಕ್ರ.ಸಂ.18 ರಿಂದ 21 ರವರೆಗೆ) ವಿಶೇಷವಾಗಿ ಹಮ್ಮಿಕೊಳ್ಳಲಾಗಿತ್ತು.

ಮದರ್ ಡೇರಿ ಘಟಕ:

1. 2019–20 ನೇ ಸಾಲಿನಲ್ಲಿ ವಿವಿಧ ಒಕ್ಕೂಟಗಳಿಂದ ದಿನವಹಿ ಖರೀದಿ ಮತ್ತು ಪರಿವರ್ತನೆಗಾಗಿ ಸರಾಸರಿ 6.55 ಲಕ್ಷ ಕೆ.ಜಿ. ಹಾಲನ್ನು ಸ್ವೀಕರಿಸಲಾಗಿದೆ ಹಾಗೂ ಒಟ್ಟಾರೆ 2.08ಲಕ್ಷ ಕೆ.ಜಿ ಹಾಲನ್ನು ಹಾಲಿನ ಪುಡಿಯನ್ನಾಗಿ ಪರಿವರ್ತಿಸಲಾಗಿದೆ.
2. ಸದರಿ 2019–20ನೇ ಸಾಲಿನಲ್ಲಿ 7677.15 ಮೆ.ಟನ್ ಹಾಲಿನಪುಡಿ, 3042.05ಮೆ.ಟನ್ ಬೆಣ್ಣೆ ಹಾಗೂ 1699.99 ಮೆ.ಟನ್ ತುಪ್ಪ, ಪನ್ನೀರ್ 922.72 ಮೆ.ಟನ್ ಹಾಗೂ ಬಾಟಲ್ ಸುವಾಸಿತ ಹಾಲು 973.44 ಲಕ್ಷ ಲೀಟರ್ ಉತ್ಪಾದಿಸಿ ಮಾರುಕಟ್ಟೆಗೆ ವಿತರಿಸಲಾಗಿದೆ.
3. 2019–20 ನೇ ಸಾಲಿನಲ್ಲಿ ಸರಾಸರಿ ಪ್ರತಿ ದಿನಕ್ಕೆ 342965 ಲೀಟರ್ ಹಾಲು ಮತ್ತು 50709 ಕೆ.ಜಿ ಮೊಸರು ಮಾರಾಟ ಮಾಡಲಾಗಿದೆ.
4. ಕೋಲ್ಡ್ ಚೈನ್ ವ್ಯವಸ್ಥೆಯನ್ನು ಕಾಪಾಡಲು ಮಾರುಕಟ್ಟೆ ಅಭಿವೃದ್ಧಿ ಕಾರ್ಯಕ್ರಮದ ಅಡಿಯಲ್ಲಿ ರೀಟೇಲ್/ ರಿಯಾಯತಿದಾರರಿಗೆ ರಿಯಾಯತಿ ದರದಲ್ಲಿ ಬಾಟಲ್‌ಕೂಲರ್, ವಿಸಿ ಕೂಲರ್‌ಗಳನ್ನು ವಿತರಿಸಲಾಗಿದೆ.
5. 2019–20ನೇ ಸಾಲಿನಲ್ಲಿ ವಿವಿಧ ಮಾಧರಿಯ ಹಾಲನ್ನು ದಿನವಹಿ ಸರಾಸರಿ 3.49ಲಕ್ಷ ಲೀಟರ್ ಮತ್ತು ಮೊಸರು 52193 ಕೆಜಿಯನ್ನು ಪ್ಯಾಕ್‌ಮಾಡಿ ಮಾರುಕಟ್ಟೆಗೆ ವಿತರಿಸಲಾಗಿದೆ.
6. ಯು.ಹೆಚ್.ಟಿ ಘಟಕದಲ್ಲಿ 2019–20ನೇ ಸಾಲಿನಲ್ಲಿ ಲಕ್ಷ ಲೀಟರ್ ಗುಡ್ ಲೈಫ್ ಹಾಲು, 13.12 ಲಕ್ಷ ಲೀಟರ್ ಸ್ಮಾರ್ಟ್‌ಮಿಲ್ಕ್, 8.80 ಲಕ್ಷ ಲೀಟರ್ ಸುವಾಸಿತ ಹಾಲು 1.40 ಲಕ್ಷ ಲೀಟರ್ ಮಿಲ್ಕ್‌ಶೇಕ್, 11.05 ಲಕ್ಷ ಲೀಟರ್ ಮಸಾಲೆ ಮಜ್ಜಿಗೆ, 3.47 ಲಕ್ಷ ಲೀಟರ್ ಲಸ್ಸಿ, 2.21 ಸಾವಿರ ಲೀಟರ್ ಮ್ಯಾಂಗೋಲಸ್ಸಿ ಹಾಗೂ 0.095 ಲಕ್ಷ ಲೀಟರ್ ಯು.ಹೆಚ್.ಟಿ ಕ್ರೀಮ್ ಉತ್ಪಾದನೆ ಕೈಗೊಳ್ಳಲಾಗಿದೆ.
7. 2019–20ನೇ ಸಾಲಿನಲ್ಲಿ ಮದರ್ ಡೇರಿ ಹಾಲು ಸಂಸ್ಕರಣಾ ವಿಭಾಗದಲ್ಲಿ 6.55 ಲಕ್ಷ ಕೆ.ಜಿ. ಹಾಲನ್ನು ಸ್ವೀಕರಿಸಿ ವಿವಿಧ ಮಾದರಿಯಲ್ಲಿ ಬೇಡಿಕೆಗೆ ಅನುಸಾರವಾಗಿ ಹಾಲನ್ನು ಸಂಸ್ಕರಿಸಿ ವಿತರಿಸಲಾಗಿದ್ದು ಹಾಲು ಸಂಸ್ಕರಣಾ ಸಾಮರ್ಥ್ಯವನ್ನು ಶೇಕಡ 94 ರಷ್ಟನ್ನು ಬಳಸಿಕೊಳ್ಳಲಾಗಿದೆ.
8. 60 KL ಹಾಲಿನ ಸೈಲೋವನ್ನು ಅಳವಡಿಸಿಕೊಂಡು ಶೇಖರಣಾ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳಲಾಗಿದೆ.

S.R. & M.R. ASSOCIATES CHARTERED ACCOUNTANTS BANGALORE

9. 30 KLPH ಹಾಲಿನ Chiller ಅಳವಡಿಸಿ ಶೀಥಲ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳಲಾಗಿದೆ.
10. 2018–19ನೇ ಸಾಲಿಗೆ ಹೊಲಿಸಿದಾಗ 2019–20 ನೇ ಸಾಲಿನಲ್ಲಿ ಒಟ್ಟು ಯು.ಹೆಚ್.ಟಿ ಯ ಉತ್ಪಾದನೆ 4431576.97 ಲೀಟರ್‌ಗಳಾಗಿದ್ದು ಡಿಸೆಂಬರ್–2019 ರ ಮಾಹೆಯಲ್ಲಿ ಸ್ಮಾರ್ಟ್ ಮಿಲ್ಕ್ ಹಾಗೂ ಗುಡ್‌ಲೈಫ್ ಹಾಲಿನ ದರಗಳನ್ನು ಪರಿಷ್ಕರಿಸಿದ್ದು, ದರ ಪರಿಷ್ಕರಣೆಯ ನಂತರ ಬೇಡಿಕೆ ಕಡಿಮೆಯಾಗಿದ್ದು 9.46% ಕಡಿಮೆಯಾಗಿರುತ್ತದೆ.
11. ಹೊಸ ಉತ್ಪನ್ನಗಳಾದ Greek yoghurt Blueberry, Honey banana ಮತ್ತು Mango ಸ್ವಾಧಗಳಲ್ಲಿ ಮತ್ತು ಸುವಾಸಿತ ಹಾಲು ಬಾಟಲ್‌ಗಳಲ್ಲಿ Litchi ಸ್ವಾಧದಲ್ಲಿ ಉತ್ಪಾದನೆ ಕೈಗೊಂಡು ಮಾರುಕಟ್ಟೆಗೆ ವಿತರಿಸಲಾಗುತ್ತಿದೆ
12. ಸುರಕ್ಷಿತ ನಿರ್ವಹಣೆಗಾಗಿ ತುಪ್ಪವನ್ನು ಹೊಸ ವಿನ್ಯಾಸದ 5ltr IML containers (in mold labelling) ಗಳಲ್ಲಿ ಹೊಸದಾಗಿ ಮಾರುಕಟ್ಟೆಗೆ ಪರಿಚಯಿಸಿದೆ.
13. ಐಸ್ ಕ್ರೀಂನ ಹೂಸ ಉತ್ಪನ್ನಗಳಾದ ನಂದಿನಿ ನ್ಯಾಚುರಲ್ ಮಾವು, ಸಪೋಟ, ಎಳನೀರು, ಹಲಸು, ಸೀಬೆ, ಲೀಚಿ, ಸೀತಾ ಫಲ ಮತ್ತು ಸ್ಟ್ರಾಬೆರಿ ಹಣ್ಣುಗಳನ್ನು ಉಪಯೋಗಿಸಿ ಉತ್ಪಾದಿಸಿದ ಐಸ್ ಕ್ರೀಂಗಳನ್ನು ಉತ್ಪಾದಿಸಿ 125 ಎಂ.ಎಲ್ ಕಂಟೈನರ್ ಗಳಲ್ಲಿ ಪ್ಯಾಕ್ ಮಾಡಿ ಮಾರುಕಟ್ಟೆಗೆ ಬಿಡುಗಡೆ ಮಾಡಲಾಗಿದೆ.
14. 2019–20 ರ ಸಾಲಿನಲ್ಲಿ ಒಟ್ಟು 3195 MT Whole milk powder, 3424 MT Skimmed Milk Powder & 1058 MT Dairy Whitener ನ್ನು ಉತ್ಪಾದಿಸಲಾಗಿದೆ.
15. ಭಾರತೀಯ ರಕ್ಷಣಾ ಇಲಾಖೆಗೆ, ಏಪ್ರಿಲ್ ಹಾಗೂ ಆಗಸ್ಟ್, 2019 ಮಾಹೆಯಲ್ಲಿ ಒಟ್ಟು 320 MT Whole milk powder ನ್ನು 10 ಕೆಜಿ ಟಿನ್‌ಗಳಲ್ಲಿ ಯಶಸ್ವಿಯಾಗಿ ಪೂರೈಸಲಾಗಿದೆ.
16. ಡೇರಿಯ ವಿದ್ಯುತ್ ಸಾಮರ್ಥ್ಯವನ್ನು ಉನ್ನತೀಕರಿಸಿಕೊಳ್ಳುವ/ಹೆಚ್ಚಿಸಿಕೊಳ್ಳುವ ದೃಷ್ಟಿಯಿಂದ ಪ್ರಸ್ತುತ ಚಾಲ್ತಿಯಲ್ಲಿರುವ ವಿದ್ಯುತ್ ಯಾರ್ಡ್ ಪೋಲ್ ಸ್ಟಕ್ಚರ್‌ನ್ನು ವಿಸಿಬಿ ಮತ್ತು ಆರ್‌ಎಂಯು ಹೆಚ್‌ಡಿ ಯಾರ್ಡ್‌ಆಗಿ ಪರಿವರ್ತಿಸಿ ಜೊತೆಗೆ 2000 ಕೆವಿಎ ಟ್ರಾನ್ಸ್‌ಫಾರ್‌ಮರ್ ಜೋಡಣೆ ಮಾಡಿ ಇವುಗಳಿಗೆ ಪೂರಕವಾದ ವಿ.ಸಿ.ಬಿ ಮತ್ತು ಪಿ.ಸಿ.ಸಿಗಳನ್ನು ಅಳವಡಿಸಕೊಳ್ಳಲು ಬೇಕಾದ ಯಂತ್ರಗಳನ್ನು ಖರೀದಿಸಿ ಅಳವಡಿಸಿಕೊಂಡು ಚಾಲನೆ ಮಾಡಿಕೊಳ್ಳಲಾಗಿದೆ.
17. ಹಭೆಯಂತ್ರ ವಿಭಾಗಕ್ಕೆ ಒಂದು ಸಂಖ್ಯೆ 50 ಕೆಎಲ್‌ಪಿಹೆಚ್ softner plant ಅನ್ನು ಖರೀದಿಸಿ ಅಳವಡಿಸಿಕೊಂಡು ಚಾಲನೆ ಮಾಡಿಕೊಳ್ಳಲಾಗಿದೆ.
18. ಮದರ್ ಡೇರಿಯಲ್ಲಿರುವ ಇಟಿಪಿ ಘಟಕದ ಸಾಮರ್ಥ್ಯವನ್ನು 1.5MLD ಯಿಂದ 1.7MLD ಗೆ ಉನ್ನತೀಕರಣಗೊಳಿಸಿಕೊಳ್ಳಲು ಗುತ್ತಿಗೆದಾರರಿಗೆ ಆದೇಶಗಳನ್ನು ನೀಡಲಾಗಿದ್ದು ಸದರಿಯವರು ಯಂತ್ರಗಳ ಸರಬರಾಜು ಹಾಗೂ ಕಾಮಗಾರಿ ಕೆಲಸವನ್ನು ನಿರ್ವಹಿಸಿರುತ್ತಿರುತ್ತಾರೆ.
19. ಮದರ್ ಡೇರಿಯಲ್ಲಿ FSSC 22000 Version 5 ದೃಢೀಕರಣವನ್ನು ಫೆಬ್ರವರಿ 2020 ರಲ್ಲಿ ಪಡೆಯಲಾಗಿದೆ. ಈ ದೃಢೀಕರಣ ಪ್ರಮಾಣ ಪತ್ರವನ್ನು ದೇಶದಾದ್ಯಂತ ಇರುವ ಡೇರಿ ಘಟಕಗಳಲ್ಲಿ ಪ್ರಪಥಮವಾಗಿ ಕಹಾಮದ ಘಟಕವಾದ ಮದರ್ ಡೇರಿಯು ಪಡೆದುಕೊಂಡಿರುವುದು ಹೆಮ್ಮೆಯ ವಿಷಯವಾಗಿರುತ್ತದೆ.
20. ಮದರ್ ಡೇರಿಯಲ್ಲಿ FSSC 22000 ದೃಢೀಕರಣ ಪಡೆದಿರುವುದರಿಂದ, ಖಾಸಗಿ/ಬಹುರಾಷ್ಟ್ರೀಯ ಕಂಪನಿಯಾದ M/s.Unilever ರವರು 800 ಮೆ.ಟನ್ ಕೆನರಹಿತ ಹಾಲಿನ ಪುಡಿಯನ್ನು ಖರೀದಿಸಿರುತ್ತಾರೆ.
21. ತಿರುಪತಿ ತಿರುಮಲ ದೇವಸ್ಥಾನಕ್ಕೆ TTD ತಪಶೀಲಿನಂತೆ ತುಪ್ಪ ತಯಾರಿಸಿ ಗುಣಮಟ್ಟದಲ್ಲಿ ಯಾವುದೇ ವ್ಯತ್ಯಾಸವಿಲ್ಲದೆ, ಸಮರ್ಪಕವಾಗಿ ಸರಬರಾಜು ಮಾಡಲಾಗಿದೆ.
22. ಗುಣಭರವಸೆ ವಿಭಾಗದಲ್ಲಿ ಹೊಸ ತಂತ್ರಜ್ಞಾನದ ಯಂತ್ರವಾದ Milkoscan FT1 ಅನ್ನು ಏಪ್ರಿಲ್ 2020 ರಲ್ಲಿ ಖರೀದಿಸಿ ಕಚ್ಚಾ ಮತ್ತು ಸಂಸ್ಕರಿಸಿದ ಹಾಲನ್ನು ಕಲಬೆರಕೆ ಸೇರಿದಂತೆ ಒಟ್ಟು 32

S.R. & M.R. ASSOCIATES CHARTERED ACCOUNTANTS BANGALORE

ಅಂಶಗಳನ್ನು ಕಡಿಮೆ ಸಮಯದಲ್ಲಿ ನಿಖರವಾಗಿ ಪರೀಕ್ಷಿಸಲು ಅನುಕೂಲವಾಗಿದೆ.

23. ಮದರ್ ಡೇರಿಯ ವಿವಿಧ ವಿಭಾಗಗಳಲ್ಲಿ ಕಾರ್ಯನಿರ್ವಹಿಸುತ್ತಿರುವ 30 ಜನ ಅಧಿಕಾರಿಗಳಿಗೆ FSSAI ಕಾಯ್ದೆಯಡಿಯಲ್ಲಿ FOSTOC ತರಬೇತಿಯನ್ನು ನೀಡಲಾಗಿದೆ ಹಾಗೂ 26 ಜನ ಸಿಬ್ಬಂದಿಗಳಿಗೆ FSSC 22000 Internal Auditor ತರಬೇತಿ ನೀಡಲಾಗಿದೆ.
24. ಮದರ್ ಡೇರಿಯು ಆಗಸ್ಟ್ 2019 ತಿಂಗಳಿನಲ್ಲಿ M/s. NDDB ವತಿಯಿಂದ ನಡೆದ Quality mark ಅಡಿಟ್‌ನಲ್ಲಿ ಉತ್ತಮ ಅಂಕಗಳನ್ನು ಗಳಿಸಿ, Quality mark ದೃಢೀಕರಣವನ್ನು ಪಡೆದಿದ್ದು, ಹೆಮ್ಮೆಯ ವಿಷಯವಾಗಿದೆ.
25. ಕೋವಿಡ್-19 ಹರಡದಂತೆ ನಿಯಂತ್ರಿಸಲು ಡೇರಿಗೆ ಆಗಮಿಸುವ ಎಲ್ಲಾ ಸಿಬ್ಬಂದಿ, ಗುತ್ತಿಗೆದಾರ ಕಾರ್ಮಿಕರು, ಟ್ಯಾಂಕರ್ ಚಾಲಕರು ಮತ್ತು ಹಾಲು ವಿತರಣಾ ವಾಹನಗಳ ಚಾಲಕರು ಹಾಗೂ ಸಂದರ್ಶಕರುಗಳಿಗೆ Thermal screening, Hand sanitizing, Disinfection spray & mask wearing ಕಡ್ಡಾಯಗೊಳಿಸಲು ಸೂಚಿಸಿ ಅದರಂತೆ ಅನುಷ್ಠಾನಗೊಳಿಸಲಾಗಿದೆ.
26. ಘಟಕಕ್ಕೆ ಆಗಮಿಸುವ ಪ್ರತಿಯೊಬ್ಬರೂ Disinfection Tunnel ಮೂಲಕ ಹಾದು ಹೋಗಲು ವ್ಯವಸ್ಥೆ ಕಲ್ಪಿಸಲಾಗಿದೆ.
27. ಆಕ್ಸಿಸ್ ಬ್ಯಾಂಕ್‌ನಲ್ಲಿ ಬಹುತೇಕ ರಿಯಾಯಿತಿದಾರರು ಮಾರಾಟ ಹಣವನ್ನು ಜಮಾ ಮಾಡುತ್ತಿದ್ದು ಜಮಾ ವಿವರಗಳು ಹೆಚ್ ಟು ಹೆಚ್ (Host to Host) ಮತ್ತು CDM (Cash Deposit Machine) ಪದ್ಧತಿಯಲ್ಲಿ ಮದರ್ ಡೇರಿಯ ರಿಯಾಯ್ತಿ Fixed Asset Management Software ಬಳಸಿ ಮದರ್ ಡೇರಿಯ ಸ್ಥಿರಾಸ್ತಿಗಳ ಪಟ್ಟಿಯನ್ನು ವ್ಯವಸ್ಥಿತವಾಗಿ ನಿರ್ವಹಣೆ ಮಾಡಲಾಗುತ್ತಿದೆ.
28. ಪಾವತಿದಾರರ ಖಾತೆಗೆ ನೇರವಾಗಿ ಜಮಾ ಆಗುತ್ತಿದೆ. ಇದರಿಂದ ಸಮಯ ಮತ್ತು ಮಾನವ ಶಕ್ತಿ ಉಳಿತಯ ಹಾಗೂ ರಿಯಾಯಿತಿದಾರರ ಖಾತೆಯ ನಿರ್ವಹಣೆಯಲ್ಲಿ ನಿಖರತೆ ಸಾದಿಸಲಾಗಿದೆ. ಇದೇ ರೀತಿ ಇತರೆ ಬ್ಯಾಂಕ್‌ಗಳಲ್ಲಿ ಜಮಾ ಮಾಡಲಾಗುತ್ತಿರುವ ರಿಯಾಯಿತಿದಾರರ ಮಾರಾಟ ಹಣವನ್ನು online ಮುಖಾಂತರ ಜಮಾ ಮಾಡಿಕೊಳ್ಳಲು ವ್ಯವಸ್ಥೆ ಮಾಡಲಾಗಿರುತ್ತದೆ.
29. ಸದರಿ ಸಾಲಿನಲ್ಲಿ ರೀಟೆಲ್‌ದಾರರಿಗೆ NDC ನೀಡುವ ಪದ್ದತಿಯನ್ನು ಜಾರಿಗೆ ತರಲಾಗಿರುತ್ತದೆ. ಇದರಿಂದ ರೀಟೆಲ್‌ದಾರರ ಆಯಾ ವರ್ಷದ ವ್ಯವಹಾರಗಳನ್ನು ಆಯಾ ವರ್ಷದಲ್ಲಿಯೆ ಪರಿಶೀಲಿಸಿಕೊಂಡು ಲೆಕ್ಕ ಚುಕ್ತಗೊಳಿಸಲು ಅನುಕೂಲವಾಗಿರುತ್ತದೆ ಹಾಗೂ ರೀಟೆಲ್‌ದಾರರಿಗೂ ಸಹ ಅವರ ವ್ಯವಹಾರಗಳ ಬಗ್ಗೆ ನಿಖರವಾದ ಮಾಹಿತಿಯನ್ನು ಹೊಂದಲು ಅನುಕೂಲವಾಗಿರುತ್ತದೆ.

ನಂದಿನಿ ಹಾಲು ಉತ್ಪನ್ನ ಘಟಕ:

ನಂದಿನಿ ಹಾಲು ಉತ್ಪನ್ನ ಘಟಕ ದ ಆರ್ಥಿಕ ಪ್ರಗತಿ ಹಾಗೂ ವಹಿವಾಟು (Turnover)

ತಾತ್ಕಾಲಿಕ ಲೆಕ್ಕಪತ್ರಗಳ ಪ್ರಕಾರ 2019-20 ನೇ ಸಾಲಿನಲ್ಲಿ ಘಟಕವು ರೂ 52.33 ಕೋಟಿ ವಹಿವಾಟು ನಡೆಸಿರುತ್ತದೆ. ಇದರಿಂದ ರೂ. 10.73 ಕೋಟಿ ಲಾಭ ಗಳಿಸಿರುತ್ತದೆ. ಒಟ್ಟು ಸರಾಸರಿ ಶೇಕಡಾ 20.44 ರಷ್ಟು ಹೆಚ್ಚಾಗಿರುತ್ತದೆ. ಕಳೆದ 3 ವರ್ಷಗಳಲ್ಲಿ ಘಟಕದ ವಹಿವಾಟು ಹಾಗೂ ಲಾಭದ ವಿವರ ಈ ಕೆಳಕಂಡಂತಿರುತ್ತದೆ.

ವಿವರ	2017-18	2018-19	2019-20
ವಹಿವಾಟು (ರೂ.ಕೋಟಿಗಳಲ್ಲಿ)	39.21	48.78	52.33
ನಿವ್ವಳ ಲಾಭ (ರೂ.ಕೋಟಿಗಳಲ್ಲಿ)	7.11	9.89	10.73

S.R. & M.R. ASSOCIATES CHARTERED ACCOUNTANTS BANGALORE

ಪ್ರಸ್ತಾವಿತ ವಹಿವಾಟಿನ ಗುರಿ ರೂ. 68.15 ಕೋಟಿಗಳ ಬದಲಾಗಿ ರೂ. 52.33 ಕೋಟಿಗಳ ವಹಿವಾಟು ನಡೆಸಿದ್ದು ಪ್ರಸ್ತಾವಿತ ನಿವ್ವಳ ಲಾಭ ರೂ. 9.52 ಕೋಟಿಗಳ ಬದಲಾಗಿ ರೂ. 10.73 ಕೋಟಿ ನಿವ್ವಳ ಲಾಭ ಗಳಿಸಲಾಗಿದೆ.

2019-20 ನೇ ಸಾಲಿನ ಉತ್ಪನ್ನಗಳ ಉತ್ಪಾದನೆ ಹಾಗೂ ಘಟಕದ ಅಭಿವೃದ್ಧಿ ಕಾರ್ಯಗಳ ವರದಿ:

1. ಘಟಕದಲ್ಲಿ ಹಾಲಿ 01 ಬಾಯ್ಲರ್ ಚಾಲನೆಯಲ್ಲಿರುತ್ತದೆ ಮತ್ತೊಂದು 3 MT ಬಾಯ್ಲರ್ ಅಳವಡಿಸಲು ಕ್ರಮವಿಡಲಾಗಿದೆ. ಹಾಗೂ ಬಾಯ್ಲರ್‌ಗಳಿಗೆ LPG ಇಂಧನ ಬಳಸಲು ಪ್ರಾರಂಭಿಸಿರುತ್ತದೆ ಇದರಿಂದ ವೆಚ್ಚ ಕಡಿಮೆ ಆಗಲಿದೆ.
2. ನಂದಿನಿ ಬ್ರೆಡ್, ಬನ್ ಮತ್ತು ರಸ್ಕ್ ಉತ್ಪನ್ನಗಳ ಉತ್ಪಾದನೆ ಕೈಗೊಳ್ಳಲಾಗಿದೆ.
3. ಸಿರಿಧಾನ್ಯ ಲಡ್ಡು ಮತ್ತು ಸಿರಿಧಾನ್ಯ ಶಕ್ತಿ ಉತ್ಪನ್ನಗಳ ಉತ್ಪಾದನೆ ಪ್ರಾರಂಭಿಸಲಾಗಿದೆ ಮತ್ತು ಮಾರುಕಟ್ಟೆಗೆ ಬಿಡುಗಡೆ ಮಾಡಲಾಗಿದೆ.
4. ಉತ್ಪನ್ನಗಳ ಜೀವಿತಾವಧಿ ಹೆಚ್ಚಿಸುವ ಸಲುವಾಗಿ RETORT ಯಂತ್ರವನ್ನು ಅಳವಡಿಸಲಾಗಿದೆ.
5. ಘಟಕದಲ್ಲಿ 2019-20 ನೇ ಸಾಲಿನಲ್ಲಿ 2058.672 ಮೆ.ಟನ್ ನಂದಿನಿ ಉತ್ಪನ್ನಗಳ ಉತ್ಪಾದನೆಯಾಗಿರುತ್ತದೆ.

ನಂದಿನಿ ಹೈ-ಟೆಕ್ ಪ್ರಾಡಕ್ಟ್ ಪ್ಲಾಂಟ್ ಚನ್ನರಾಯಪಟ್ಟಣ:-

1. ಉತ್ಪಾದನಾ ವಿಭಾಗದ ವತಿಯಿಂದ ಶಾಲೆಗಳಿಗೆ ಮತ್ತು ಅಂಗನವಾಡಿ ಕೇಂದ್ರಗಳಿಗೆ ಕರ್ನಾಟಕ ಸರ್ಕಾರದ ಪ್ರತಿಷ್ಠಿತ ಕ್ಷೀರ ಭಾಗ್ಯಯೋಜನೆಯಡಿಯಲ್ಲಿ ಸಗಟು ಪ್ಯಾಕಿಂಗ್‌ನಲ್ಲಿ 01 kg ಮತ್ತು ½ kg ಪ್ಯಾಕೆಟ್‌ನಲ್ಲಿ ಹಾಲಿನ ಪುಡಿ ಉತ್ಪಾದನೆ ಮಾಡಿ ಸರಬರಾಜು ಮಾಡಲಾಗಿರುತ್ತದೆ.
2. 2019-20 ನೇ ಸಾಲಿನಲ್ಲಿ 123197.09 ಮೆ.ಟನ್ ಹಾಲನ್ನು ಪರಿವರ್ತನೆಗಾಗಿ ಸ್ವೀಕರಿಸಿ ಸಂಸ್ಕರಿಸಿದ್ದು, ಅದರಲ್ಲಿ ಬೆಣ್ಣೆ ಉತ್ಪಾದನೆ 2184.45 ಮೆ.ಟನ್, S.M.P ಉತ್ಪಾದನೆ 2603.49 ಮೆ.ಟನ್, W.M.P ಉತ್ಪಾದನೆ 6826.95 ಮೆ.ಟನ್, ಮತ್ತು ತುಪ್ಪದ ಉತ್ಪಾದನೆ 589.82 ಮೆ.ಟನ್. ಅನ್ನು ಉತ್ಪಾದನೆ ಮಾಡಲಾಗಿರುತ್ತದೆ.
3. ಘಟಕದ ಬೆಣ್ಣೆ ಮತ್ತು ತುಪ್ಪದ ವಿಭಾಗದಲ್ಲಿರಕ್ಷಣಾ ಇಲಾಖೆಗೆ 98.4 ಮೆ.ಟನ್ ತುಪ್ಪವನ್ನು 01 ಲೀಟರ್ ಟಿನ್ ನಲ್ಲಿ ಉತ್ಪಾದನೆ ಮಾಡಿ ಸರಬರಾಜು ಮಾಡಲಾಗಿರುತ್ತದೆ.
4. ಕಳೆದ 2019-20 ನೇ ಸಾಲಿನಲ್ಲಿ ಯು.ಹೆಚ್.ಟಿ. ವಿಭಾಗದಲ್ಲಿ 1,60,16,112 ಲೀ.ಯು.ಹೆಚ್.ಟಿ. ಹಾಲನ್ನು ಉತ್ಪಾದನೆ ಮಾಡಲಾಗಿರುತ್ತದೆ.
5. ಘಟಕದ BIS, Agmark, FSSAI, Export & ISO 22000:2005 ಪರವಾನಗಿಯನ್ನು ಚಾಲ್ತಿಯಲ್ಲಿಡಲಾಗಿದೆ.
6. 2019-20 ನೇ ಸಾಲಿನಲ್ಲಿ 1,62,74,722 ಲೀ. ಗುಡ್ ಲೈಫ್ ಹಾಲನ್ನು ಮಾರಾಟ ಮಾಡಲಾಗಿದೆ. ಇದರಲ್ಲಿ ಆಗಸ್ಟ್-2019 ರ ಮಾಹೆಯಲ್ಲಿ ಗರಿಷ್ಠ ಮಾರಾಟ 15,43,906 ಲೀ.ದಾಖಲಾಗಿದೆ.
7. ಘಟಕದ ಇ.ಟಿ.ಪಿ ವಿಭಾಗದಲ್ಲಿ ಉತ್ಪಾದನೆ ಆಗುವ Bio-Gas ಅನ್ನು canteen ಗೆ ಉಪಯೋಗಿಸಲು Trench works ಮಾಡಿ Pipe line ಅಳವಡಿಸಿದ್ದು, ಇದರಿಂದ ಘಟಕದ ಉಪಹಾರ ಗೃಹದಲ್ಲಿ ಎಲ್.ಪಿ.ಜಿ ಗ್ಯಾಸ್ ಬದಲಿಗೆ Bio-Gas ಅನ್ನು ಉಪಯೋಗಿಸಲಾಗುತ್ತಿದೆ.
8. 10 ವರ್ಷಗಳಿಂದ ನೆನೆಗುದಿಗೆ ಬಿದ್ದಿದ್ದ Express Speeder 66/11KV ಪೂರ್ಣಗೊಂಡು, ಸದರಿ Express Speeder ನಿಂದ power ಪಡೆಯಲಾಗುತ್ತಿದೆ.

S.R. & M.R. ASSOCIATES CHARTERED ACCOUNTANTS BANGALORE

9. 50 KVA ಸಾಮರ್ಥ್ಯದ Bio gas Engine ಅನ್ನು ETP ಯಲ್ಲಿ ಅಳವಡಿಸಿ ಪ್ರತಿ ಮಾಹೆ ರೂ. 90,000/- ಉಳಿತಾಯ ಮಾಡಲು ಸದರಿ ಕಾರ್ಯಕ್ಕಾಗಿ ಟೆಂಡರ್ ಕೈಗೊಂಡು ಆದೇಶ ಹೊರಡಿಸಲಾಗಿದೆ.

10. ಯು.ಹೆಚ್.ಟಿ ಹಾಲಿನ ಉತ್ಪಾದನೆಯನ್ನು ಹೆಚ್ಚಿಸುತ್ತಿರುವುದರಿಂದ ಹಾಗೂ FSSAI/ISO 22000:2005 ನ ಅಗತ್ಯತೆಯಂತೆ ಉತ್ಪಾದನೆಯಾದ Sterilized ಹಾಲನ್ನು 7 ದಿನಗಳ ಕಾಲ incubation ಇಡಬೇಕಾಗಿರುವುದರಿಂದ ಘಟಕದ ಯು.ಹೆಚ್.ಟಿ ಗೋದಾಮಿನ ಸಾಮರ್ಥ್ಯವನ್ನು 3 ಲಕ್ಷ ಲೀ ನಿಂದ 7 ಲಕ್ಷ ಲೀ.ಗೆ ಹೆಚ್ಚಿಸುವ ಕಾರ್ಯ ಪೂರ್ಣಗೊಂಡಿರುತ್ತದೆ.

11. ಸದರಿ ಸಾಲಿನಲ್ಲಿ ಘಟಕವು ಉತ್ಪಾದನೆ/ಹಾಲು ಪರಿವರ್ತನೆಯಿಂದ ರೂ. 142.61 ಕೋಟಿಗಳಷ್ಟು ವಾರ್ಷಿಕ ವಹಿವಾಟು ಮಾಡಲಾಗಿರುತ್ತದೆ. ಇದರಲ್ಲಿ ಈ ವರ್ಷ ರೂ. 7.95 ಕೋಟಿ ನಿವ್ವಳ ಲಾಭ ಗಳಿಸಲಾಗಿರುತ್ತದೆ.

12. ಪ್ರಥಮ ಘಟಕದ ಎನ್.ಡಿ.ಡಿ.ಬಿ. ಸಾಲದ ಬಾಕಿ ಮೊತ್ತ ರೂ. 90.87 ಲಕ್ಷಗಳನ್ನು ಮರುಪಾವತಿಸಲಾಗಿದೆ. ನೂತನ ಹಾಲಿನ ಪುಡಿ ಘಟಕದ ಎನ್.ಡಿ.ಡಿ.ಬಿ. ಸಾಲದ ಮೊತ್ತ ರೂ.21.29 ಕೋಟಿಗಳನ್ನು ಮರು ಪಾವತಿಸಲಾಗಿದೆ.

ನಂದಿನಿ ಹೈಟೆಕ್ ಮೆಗಾ ಪೌಡರ್ ಪ್ಲಾಂಟ್, ಕಣ್ವ, ರಾಮನಗರ:

2019-20ನೇ ಸಾಲಿನಲ್ಲಿ 100 ಎಮ್.ಟಿ ಹಾಲಿನ ಪುಡಿ ಘಟಕವನ್ನು ರಾಮನಗರದಲ್ಲಿ Commissioning ಮಾಡಲಾಗಿದ್ದು ಫೆಬ್ರವರಿ 2020 ರ ಮಾಹೆಯಲ್ಲಿ ಪ್ರಾಯೋಗಿಕವಾಗಿ ಚಾಲನೆ ಮಾಡುವ ಮೂಲಕ ಕೆನೆ ರಹಿತ ಹಾಲನ್ನು, ಹಾಲಿನ ಪುಡಿಯನ್ನಾಗಿ ಪರಿವರ್ತಿಸಲಾಗಿರುತ್ತದೆ.

ಮಾರ್ಚ್-2020 ರ ಮಾಹೆಯಲ್ಲಿ ಘಟಕದ ಹಾಲಿನ ಪುಡಿ/ಸಂಸ್ಕರಣೆ ಮತ್ತು ಬೆಣ್ಣೆ ವಿಭಾಗಗಳನ್ನು ಪ್ರಾಯೋಗಿಕವಾಗಿ ಚಾಲನೆ ಮಾಡಲಾಗಿದೆ.

ನಂದಿನಿ ಪ್ಯಾಕೇಜಿಂಗ್ ಫಿಲಂ ಪ್ಲಾಂಟ್:

- 2019-20 ರ ಉತ್ಪಾದನೆ, ವಾರ್ಷಿಕ 3612 ಮೆಟ್ರಿಕ್ ಟನ್‌ಗಳಾಗಿದ್ದು ಸ್ಥಾಪಿತ ಸಾಮರ್ಥ್ಯ ವಾರ್ಷಿಕ 3000 ಮೆಟ್ರಿಕ್ ಟನ್ ಗಳಿಗೆ ಹೋಲಿಕೆ ಮಾಡಿದಾಗ 612 ಟನ್ ಹೆಚ್ಚುವರಿ ಉತ್ಪಾದನೆ ಆಗಿರುತ್ತದೆ. ಅಂದರೆ ಶೇಕಡ 20.4ರಷ್ಟು ಹೆಚ್ಚುವರಿಯಾಗಿರುತ್ತದೆ.
- ಘಟಕದಲ್ಲಿ ಫಿಲಂ ಮುದ್ರಣ ಮಾಡುವ ಪ್ರಿಂಟಿಂಗ್ ಸಿಲಿಂಡರ್‌ಗಳಿಗೆ Electronic engraving ಮಾಡಿಸಲಾಗುತ್ತಿದ್ದು. ಪ್ರಿಂಟಿಂಗ್ ಗುಣಮಟ್ಟವು ಸಹ ಉತ್ತಮವಾಗಿರುತ್ತದೆ.
- ಘಟಕದಲ್ಲಿ 02 ಸಂಖ್ಯೆ BFP ಯಂತ್ರಗಳು ಚಾಲನೆಯಲ್ಲಿದ್ದು, ಇವುಗಳಲ್ಲಿ ಅಳವಡಿಸಲಾಗಿರುವ Main nip side aluminum roller assembly ಹಾಗೂ Screw barrel ಗಳು ನಿರಂತರ ಚಾಲನೆಯಿಂದ ಸವಕಳಿಯಾಗಿದ್ದು ಹೊಸದಾಗಿ aluminum roller assembly ಮತ್ತು Screw barrel ಗಳು ಬದಲಾವಣೆ ಮಾಡಿಕೊಂಡು ಸರಾಸರಿಉತ್ಪಾದನೆ ಮಾಡಲಾಗುತ್ತಿದೆ.
- ಘಟಕಕ್ಕೆ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ರವರಿಂದ 2010 ರಲ್ಲಿ ಘಟಕದ ಉತ್ಪಾದನಾ ಸಾಮರ್ಥ್ಯ ಮಾಹೆಯಾನ 166 ಮೆಟ್ರಕ್ ಟನ್‌ಗಳಿಗೆ ಅನುಮೊದನೆ ನೀಡಲಾಗಿದ್ದು, ಪ್ರಸ್ತುತ ಘಟಕದ ಉತ್ಪಾದನೆಯನ್ನು ಸಾಂದರ್ಭಿಕವಾಗಿ ಮಾಹೆಯಾನ ಗರಿಷ್ಠ 300 ಮೆಟ್ರಕ್‌ಟನ್ ಮಾಡಬಹುದಾಗಿದ್ದುರಿಂದ, KSPCB ರವರ ಅನುಮೋದನೆಗೋಸ್ಕರ Online ಮುಖಾಂತರ ಅರ್ಜಿ ಸಲ್ಲಿಸಿ ಹೆಚ್ಚುವರಿಯಾಗಿರುವ ಉತ್ಪಾದನೆಗೆ KSPCB ರವರಿಂದ ಮುಂದಿನ 5 ವರ್ಷಗಳ ಅವಧಿಗೆ Consent for expansion ಪ್ರಮಾಣ ಪತ್ರವನ್ನು ಪಡೆಯಲಾಗಿರುತ್ತದೆ.

S.R. & M.R. ASSOCIATES CHARTERED ACCOUNTANTS BANGALORE

- ಘಟಕವು 2018-19 ವರ್ಷದಲ್ಲಿ ISO 9001:2015-QMS,ISO14001:2015-EMS ಪ್ರಮಾಣ ಪತ್ರ ಪಡೆಯಲಾಗಿದ್ದು,2019-20 ನೇ ಸಾಲಿನಲ್ಲಿISO upgradation ಮಾಡಿಸಲಾಗಿದೆ.
- ಜಿಲ್ಲಾ ಹಾಲು ಒಕ್ಕೂಟಗಳು/ ಕಹಾಮ ಘಟಕಗಳಿಗೆ ವರ್ಷ ಪೂರ್ತಿ ನಿಗದಿಪಡಿಸಿರುವ ಪರಿಮಾಣಕ್ಕಿಂತ ಹೆಚ್ಚಾಗಿ ಉತ್ತಮ ಗುಣಮಟ್ಟದ ಪ್ರಿಂಟೆಡ್ ಫಿಲಂ ಅನ್ನು ತೃಪ್ತಿಕರವಾಗಿ ಸರಬರಾಜು ಮಾಡಲಾಗಿರುತ್ತದೆ.
- ಘಟಕಕ್ಕೆ ನಿಗದಿ ಪಡಿಸಿರುವ ಸಿಬ್ಬಂದಿಗಳಿಗಿಂತ ಶೇ.50 ರಷ್ಟು ಕಡಿಮೆ ಸಿಬ್ಬಂದಿಯಿಂದ ಯಾವುದೇ ಅಡಚಣೆ ಇಲ್ಲದೆ ಉತ್ಪಾದನೆ/ಇಂಜಿನಿಯರಿಂಗ್ ಕಾರ್ಯಗಳು ನಿರ್ವಹಣೆ ಮಾಡಲಾಗುತ್ತಿದೆ.

ಪಶು ಆಹಾರ ಘಟಕಗಳ 2019 – 2020 ನೇ ಸಾಲಿನಲ್ಲಿ ಘಟಕದ ಸಾಧನೆಗಳು:

ಧಾರವಾಡ ಪಶು ಆಹಾರ ಘಟಕ:

1. ಕಚ್ಚಾ ಪಧಾರ್ಥಗಳನ್ನು ದಾಸ್ತಾನು ಮಾಡಲು ನೂತನವಾಗಿ 5000 ಮೆ.ಟನ್. ಸಾಮರ್ಥ್ಯಕ್ಕೆ 02 ಸೈಲೋಗಳನ್ನು (ಪ್ರತಿ Silo, 2500 ಮೆ.ಟನ್. ಸಾಮರ್ಥ್ಯ) ಸ್ಥಾಪಿಸಲಾಗಿದೆ.
2. ನೂತನವಾಗಿ ಮತ್ತೊಂದು 2.00 ಟನ್ ಸಾಮರ್ಥ್ಯದ Fuel Briqettes Fired - I.B.R ಬಾಯ್ಲರ್‌ನ್ನು ಸುಮಾರು 98 ಲಕ್ಷದ ವೆಚ್ಚದಲ್ಲಿ ಸ್ಥಾಪಿಸಲಾಗಿದೆ.
3. ಕಡಿಮೆ ಖರ್ಚಿನಲ್ಲಿ ಮತ್ತು ನಿರಂತರವಾಗಿ ಪಶು ಆಹಾರ ಉತ್ಪಾದಿಸಲು ಮಾರ್ಚ್-2020 ಅಂತ್ಯಕ್ಕೆ 34778.19 ಮೆ.ಟನ್ ಕಚ್ಚಾ ಪದಾರ್ಥಗಳನ್ನು ದಾಸ್ತಾನಿಸಲಾಗಿದೆ.
4. ಘಟಕದಲ್ಲಿ ಕನಿಷ್ಠ ಮೊತ್ತವನ್ನು ಖರ್ಚು ಮಾಡಿ ಘಟಕದ ವತಿಯಿಂದ Pre-Grinding ನಿಂದ Post Grinding ಗೆ ಉತ್ಪಾದನೆಯ ರೀತಿಯನ್ನು ಪರಿವರ್ತನೆ ಮಾಡಲಾಗಿದ್ದು, ಇದರಿಂದ ಬಿಡಿ ಭಾಗಗಳ ಖರೀದಿ,ಬೇರಿಂಗ್‌ಗಳ ಬಳಕೆಯಲ್ಲಿ ಪರೋಕ್ಷವಾಗಿ ಉಳಿತಾಯವಾಗಿರುತ್ತದೆ. ಪಶು ಆಹಾರದ ಗುಣಮಟ್ಟವನ್ನು ಇನ್ನೂ ಹೆಚ್ಚಿಗೆ ಸುಧಾರಣೆ ಮಾಡಲಾಗಿದೆ.
5. ಪಶು ಆಹಾರ ಗುಣಮಟ್ಟವನ್ನು ಇನ್ನೂ ಹೆಚ್ಚಿಸುವ ಸಲುವಾಗಿ ಪಶು ಆಹಾರದ ಪೆಲೆಟ್ ಡೈ ಅಳತೆಯನ್ನು 10 mm ನಿಂದ 8 mm ಗೆ ಬದಲಾವಣೆ ಮಾಡಲಾಗಿದೆ.
6. ನೂತನವಾಗಿ 1010 KVA DG Set ನ್ನು 95 ಲಕ್ಷದ ವೆಚ್ಚದಲ್ಲಿ ಅಳವಡಿಸಲಾಗಿದೆ.
7. **"COVID -19"** ಕೊರೋನಾ ವೈರಸ್ ಹರಡುವಿಕೆಯನ್ನು ತಡೆಗಟ್ಟುವ ಸಲುವಾಗಿ ರಾಜ್ಯ ಸರಕಾರದ / ಕ.ಹಾ.ಮ. ದಿಂದ ಬಂದಿರುವ ಎಲ್ಲಾ ರೀತಿಯ ಸಲಹೆ ಸೂಚನೆಯನ್ನು ಚಾಚು ತಪ್ಪದೆ ಪಾಲನೆ ಮಾಡಲಾಗಿದೆ.

ಗುಬ್ಬಿ ಪಶು ಆಹಾರ ಘಟಕ:

2019-20 ನೇ ಸಾಲಿನ ಸಾಧನೆಯ ವಿವರಗಳು:

01.	ಹೊಸದಾಗಿ 300.ಮೆ.ಟನ್. ಸಾಮರ್ಥ್ಯದ ಸ್ಥಾವರ ಮತ್ತು ಅದಕ್ಕೆ ಸಂಬಂದಿಸಿದ ವಿವಿದ ಯಂತ್ರೋಪಕರಣಗಳು	ಗುಬ್ಬಿ ಪಶು ಆಹಾರ ಕಾರ್ಖಾನೆಯಲ್ಲಿ ಚಾಲನೆಯಲ್ಲಿ ಇರುವ 150 ಮೆ.ಟನ್. ಸಾಮರ್ಥ್ಯದ ಉತ್ಪಾದನಾ ಸ್ಥಾವರದಲ್ಲಿ ಬರುತ್ತಿರುವ ಉತ್ಪಾದನೆಯು ರೈತರ ಬೇಡಿಕೆಯನ್ನು ಪೂರೈಸಲು ಸಾದ್ಯವಾಗದ ಕಾರಣ ಹೊಸದಾಗಿ 300.ಮೆ.ಟನ್. ಸಾಮರ್ಥ್ಯದ ಉತ್ಪಾದನಾ ಸ್ಥಾವರದ ನಿರ್ಮಾಣದ ಕೆಲಸವು ಪೂರ್ಣಗೊಂಡು ಉತ್ಪಾದನೆಯನ್ನು ಪ್ರಾರಂಬಿಸಲಾಗಿದೆ ಮತ್ತು ಹೊಸದಾಗಿ ಈ ಸ್ಥಾವರ ಸಂಬಂದಿಸಿದ

S.R. & M.R. ASSOCIATES CHARTERED ACCOUNTANTS BANGALORE

		ಡಿ.ಜಿ.ಯಂತ್ರ, ವಿದ್ಯುತ್ ಪರಿವರ್ತಕಯಂತ್ರ, ಬಾಯ್ಲರ್‌ಗಳನ್ನು ಅಳವಡಿಸಿದೆ,
02.	ಹೊಸದಾಗಿ ಉಪಹಾರ ಗೃಹದ ನಿರ್ಮಾಣ	ಪ್ರಸ್ಥುತವಾಗಿ ಬಳಕೆಯಲ್ಲಿರುವ ಉಪಹಾರ ಗೃಹವು ತುಂಬಾ ಹಳೆಯದಾಗಿರುತ್ತದೆ ಮತ್ತು ಚಿಕ್ಕದಾಗಿರುತ್ತದೆ. ಖಾಯಂ ನೌಕರರಿಗೆ ಮತ್ತು ಗುತ್ತಿಗೆ ಕೆಲಸಗಾರರು ಹೆಚ್ಚಿನ ಸಂಖ್ಯೆಯ ಕೆಲಸಗಾರರು ಇರುವುದರಿಂದ ಊಟದ ಸ್ಥಳಾವಕಾಶ ಇರುವುದಿಲ್ಲ ಮತ್ತು ಹೊಸದಾಗಿ ಪ್ರಾರಂಭವಾಗಿರುವ 300.ಮೆ.ಟನ್. ಸಾಮರ್ಥ್ಯದ ಸ್ಥಾವರದಲ್ಲಿ ಗುತ್ತಿಗೆ ಕಾರ್ಮಿಕರು ಹೆಚ್ಚುಗೆ ಅಗುವುದನ್ನು ಗಮನಿಸಿ ಹೊಸದಾಗಿ ಉಪಹಾರಗೃಹ ನಿರ್ಮಾಣ ಮಾಡಿದೆ.
03.	ಕಾಂಕ್ರೆಟ್‌ರಸ್ತೆ ನಿರ್ಮಾಣ	ಪ್ರಸ್ಥುತವಾಗಿ ತೂಕದ ಕಟ್ಟೆಯಿಂದ ಅಡಳಿತ ಕಛೇರಿ ಮುಂಭಾಗ ಮತ್ತು ಭದ್ರತಾ ಮುಖ್ಯದ್ವಾರದವರೆಗೆ ಟಾರ್‌ರೋಡ್ ಇದ್ದು ಅನೇಕ ಕಡೆ ಗುಂಡಿಗಳು ಬಿದ್ದಿರುತ್ತವೆ ಅದ್ದರಿಂದ ಲಾರಿಗಳು ಚಾಲನೆಯಾಗಲು ಅನುಕೂಲವಾಗುವಂತೆ ಸದ್ಯಕ್ಕೆ ತೂಕದ ಕಟ್ಟೆಯಿಂದ ಆಡಳಿತ ಕಛೇರಿಯ ಮುಂಭಾಗದಿಂದ ಸ್ವಲ್ಪ ಪ್ರಮಾಣದಲ್ಲಿ ಕಾಂಕ್ರೆಟ್‌ರಸ್ತೆ ನಿರ್ಮಾಣ ಮಾಡಿದೆ. ಇದನ್ನು ಮುಂದಿನ ದಿನಗಳಲ್ಲಿ ಭದ್ರಾತಾ ಮುಖ್ಯದ್ವಾರದವರೆಗೆ ಮುಂದುವರಿಸಬೇಕಾಗಿದೆ.

ಹಾಸನ ಪಶು ಆಹಾರ ಘಟಕ:

ಘಟಕ–1

1. 200 ಮೆ.ಟನ್ ಘಟಕದಲ್ಲಿ 2019–20 ನೇ ಸಾಲಿನಲ್ಲಿ ಒಟ್ಟು **89870.210** ಮೆ.ಟನ್ ಪಶು ಆಹಾರ ಉತ್ಪಾದನೆ ಮಾಡಿ **90335.51** ಮೆ.ಟನ್ ಮಾರಾಟ ಮಾಡಲಾಗಿದ್ದು ಕಳೆದ ಸಾಲಿಗೆ ಹೋಲಿಸಿದಾಗ, **327.538** ಮೆ.ಟನ್ ಹೆಚ್ಚಿಗೆ ಪಶು ಆಹಾರ ಹಾಗೂ **1089.11** ಮೆ.ಟನ್ ಹೆಚ್ಚಿಗೆ ಮಾರಾಟ ಮಾಡಲಾಗಿರುತ್ತದೆ.

   2014–15ನೇ ಸಾಲಿನಿಂದಲೂ ಫರ್‌ನೆಷ್ ಆಯಿಲ್ ಬಳಕೆ ಮಾಡಿ ಹಬೆ ಪಡೆಯುವುದನ್ನು ಸ್ಥಗಿತಗೊಳಿಸಿ 300 ಮೆ.ಟನ್ ಘಟಕದ ಹಬೆಯಂತ್ರದಿಂದ ಫ್ಯೂಯಲ್ ಬ್ರಿಕೇಟ್ಸ್ ಬಳಕೆ ಮಾಡಿ 200 ಮೆ.ಟನ್ ಘಟಕದ ಉತ್ಪಾದನೆಗೆ ಹಬೆಯನ್ನು ಪಡೆಯುತ್ತಿರುವುದರಿಂದ, ಘಟಕ–1 ಕ್ಕೆ ಪ್ರತಿ ತಿಂಗಳು ಅಂದಾಜು ರೂ.10 ಲಕ್ಷ ಉಳಿತಾಯವಾಗುತ್ತಿರುತ್ತದೆ.

ಘಟಕ–2

300 ಮೆ.ಟನ್ ಘಟಕದಲ್ಲಿ 2019–20ನೇ ಸಾಲಿನಲ್ಲಿ ಒಟ್ಟು **107419.400** ಮೆ.ಟನ್ ಪಶು ಆಹಾರ ಉತ್ಪಾದನೆ ಹಾಗೂ **107745.200** ಮೆ.ಟನ್ ಮಾರಾಟ ಮಾಡಲಾಗಿದ್ದು, ಕಳೆದ ಸಾಲಿಗೆ ಹೋಲಿಸಿದಾಗ ಒಟ್ಟು **495.650** ಮೆ.ಟನ್ ಹೆಚ್ಚಿಗೆ ಉತ್ಪಾದನೆ ಹಾಗೂ **851.950** ಮೆ.ಟನ್ ಹೆಚ್ಚಿಗೆ ಮಾರಾಟ ಮಾಡಲಾಗಿರುತ್ತದೆ. ಮೇ–2019 ರ ಮಾಹೆಯಲ್ಲಿ **10142.300** ಮೆ.ಟನ್ ಗರಿಷ್ಟ ದಾಖಲೆ ಉತ್ಪಾದನೆ ಮಾಡಲಾಗಿರುತ್ತದೆ.

S.R. & M.R. ASSOCIATES CHARTERED ACCOUNTANTS BANGALORE

2. **ಎಂ.ಎಂ.ಸಿ.ಎಫ್. ಸ್ಥಾವರ:**

300 ಮೆ.ಟನ್ ಘಟಕದಲ್ಲಿ 2019-20ನೇ ಸಾಲಿನಲ್ಲಿ ವಲಯವಾರು ಹಾಗೂ ಚಿಲೇಟೆಡ್ (1 ಕೆ.ಜಿ) ಎಂ.ಎಂ.ಸಿ.ಎಫ್. **1783.700** ಮೆ.ಟನ್ ಉತ್ಪಾದನೆ ಮಾಡಲಾಗಿರುತ್ತದೆ. ಈ ಪರಿಮಾಣವನ್ನು 2018-19 ನೇ ಸಾಲಿಗೆ ಹೋಲಿಸಿದಾಗ **477.720** ಮೆ.ಟನ್ ಹೆಚ್ಚಿಗೆ ಉತ್ಪಾದನೆ ಮಾಡಲಾಗಿರುತ್ತದೆ.

2019-20 ನೇ ವರ್ಷದಲ್ಲಿ 01 ಕೆ.ಜಿ. ಚಿಲೇಟೆಡ್ ಹಾಗೂ 50 ಕೆ.ಜಿ. ಎಂ.ಎಂ.ಸಿ.ಎಫ್ ಒಟ್ಟು ಉತ್ಪಾದನೆ **3806.700** ಮೆ.ಟನ್ ಮಾಡಲಾಗಿರುತ್ತದೆ.

3. 300 ಮೆ.ಟನ್ ಘಟಕದಲ್ಲಿ ಬೈಪಾಸ್ ಪ್ರೋಟಿನ್‌ನ ದಿನವಹಿ 50 ಮೆ.ಟನ್ ಉತ್ಪಾದನಾ ಸಾಮರ್ಥ್ಯವಿದ್ದು, 2019-20 ನೇ ಸಾಲಿನಲ್ಲಿ ಒಟ್ಟು **3217.803** ಮೆ.ಟನ್ ಉತ್ಪಾದನೆ ಮಾಡಿ ಬೇಡಿಕೆಗೆ ಅನುಗುಣವಾಗಿ ಪೂರೈಕೆ ಮಾಡಲಾಗಿದೆ.
4. 2018-19 ನೇ ಸಾಲಿಗೆ ಹೋಲಿಸಿದಾಗ, **1037.000** ಮೆ.ಟನ್ ಹೆಚ್ಚಿಗೆ ಉತ್ಪಾದನೆ ಮಾಡಲಾಗಿರುತ್ತದೆ.
5. ಘಟಕದಲ್ಲಿ 2019-20ನೇ ಸಾಲಿನ ಅಂತ್ಯಕ್ಕೆ 96 ಜನ ಖಾಯಂ ಅಧಿಕಾರಿ/ಸಿಬ್ಬಂದಿಗಳು ಕಾರ್ಯನಿರ್ವಹಿಸುತ್ತಿದ್ದು ಈ ಅಧಿಕಾರಿ/ಸಿಬ್ಬಂದಿಗಳ ಪೈಕಿ ಆಯ್ದ ಸಿಬ್ಬಂದಿಗಳಿಗೆ ಈ ಕೆಳಕಂಡ ತರಭೇತಿ ಕಾರ್ಯಕ್ರಮದಲ್ಲಿ ಭಾಗವಹಿಸಲು ಅನುಕೂಲ ಮಾಡಿಕೊಡಲಾಗಿದೆ.

   A. Energy Conservation

   B. Office procedure

   C. GST Training

6. ಘಟಕದ ಗುಣ ನಿಯಂತ್ರಣ ವಿಭಾಗದಲ್ಲಿ NIR Analyser ನಂತಹ ಆಧುನಿಕ ಯಂತ್ರೋಪಕರಣಗಳನ್ನು ಹೊಂದಲಾಗಿದ್ದು, 2019-20 ಸಾಲಿನಲ್ಲಿ 9583 ಸಂಖ್ಯೆಯ Truck load ಕಚ್ಚಾ ಸಾಮಾಗ್ರಿಗಳನ್ನು ಪರಿಶೀಲಿಸಿ ಸ್ವೀಕರಿಸಲಾಗಿರುತ್ತದೆ. 5319 ಸಂಖ್ಯೆಯ ಕಚ್ಚಾಪದಾರ್ಥಗಳ ಮಾದರಿಗಳನ್ನು ವಿಶ್ಲೇಷಿಸಿ ವರದಿ ನೀಡಲಾಗಿರುತ್ತದೆ. 2118 ಸಂಖ್ಯೆಯ ಸಿದ್ದ ಪಶು ಆಹಾರ ಮಾದರಿಗಳನ್ನು ಹಾಗೂ 106 ಸಂಖ್ಯೆಯ ಖನಿಜ ಮಿಶ್ರಣ ಕಚ್ಚಾಪದಾರ್ಥಗಳನ್ನು ವಿಶ್ಲೇಷಿಸಲಾಗಿರುತ್ತದೆ.
7. ಘಟಕದಲ್ಲಿ ಡೀಸಲ್ ದಾಸ್ತಾನು ಮಾಡಲು ಅವಶ್ಯವಿರುವ ಡೀಸಲ್ ಹೋಲ್ಡಿಂಗ್ ಟ್ಯಾಂಕ್‌ನ್ನು ಮೆ: ಐ.ಒ.ಸಿ.ಎಲ್ ವತಿಯಿಂದ ಅಳವಡಿಸಲಾಗಿದ್ದು, ಸದರಿ ಡೀಸಲ್ ಹೋಲ್ಡಿಂಗ್ ಟ್ಯಾಂಕ್‌ನ ಸುರಕ್ಷತಾ ದೃಷ್ಟಿಯಿಂದ ಡೀಸಲ್ ಹೋಲ್ಡಿಂಗ್ ಟ್ಯಾಂಕ್ ಜಾಗಕ್ಕೆ Fencing, clock Room & Interlocking Blocks for Floor ಕಾಮಗಾರಿ ರೂ. 16,71,000/-ಗಳ ವೆಚ್ಚದಲ್ಲಿ ಪೂರ್ಣಗೊಂಡಿರುತ್ತದೆ.
8. ಘಟಕ-1 ರಲ್ಲಿ 1500ಮೆ.ಟನ್ ಹಾಗೂ ಘಟಕ-2 ರಲ್ಲಿ 1000ಮೆ.ಟನ್ ಸಾಮರ್ಥ್ಯದ ತಲಾ 01 ಸಂಖ್ಯೆಯ ಮೆಲಾಸಸ್ ಟ್ಯಾಂಕ್‌ರ್‌ಗಳ ನಿರ್ಮಾಣ ಕಾಮಗಾರಿಗೆ ಕ್ರಮವಾಗಿ, ಘಟಕ-1 ಕ್ಕೆ ರೂ.1,16,00,000 ಹಾಗೂ ಘಟಕ-2 ಕ್ಕೆ ರೂ.85,93,000-00 ಗಳ ವೆಚ್ಚದಲ್ಲಿ ಕಾಮಗಾರಿ ಪೂರ್ಣಗೊಂಡು ಕಾಕಂಬಿ ದಾಸ್ತಾನು ಮಾಡಿಕೊಳ್ಳಲಾಗುತ್ತಿದೆ.
9. ಘಟಕ-2 ರಲ್ಲಿ ಸಿಬ್ಬಂದಿಗಳ ಹಾಗೂ ಗುತ್ತಿಗೆ ಕಾರ್ಮಿಕರ ವಾಹನಗಳ ನಿಲುಗಡೆಗೆ ವಾಹನ ನಿಲ್ದಾಣ ಕಾಮಗಾರಿಯು ರೂ.7,00,000/- ಗಳ ವೆಚ್ಚದಲ್ಲಿ ಪೂರ್ಣಗೊಂಡು ಅಧಿಕಾರಿ/ಸಿಬ್ಬಂದಿಗಳ ವಾಹನ ನಿಲುಗಡೆ ವ್ಯವಸ್ಥೆ ಮಾಡಲಾಗಿದೆ.
10. ಘಟಕ-1 ರಲ್ಲಿ Auto Batching System Upgrade ಮಾಡುವ ಕೆಲಸ ಪೂರ್ಣಗೊಂಡಿದ್ದು ರೂ.15,43,440/- ಗಳ ವೆಚ್ಚದಲ್ಲಿ ಕಾರ್ಯನಿರ್ವಹಿಸಲಾಗುತ್ತಿದೆ.
11. ಘಟಕಕ್ಕೆ ಅವಶ್ಯವಿರುವ ಕಚ್ಚಾಮಾಲನ್ನು ಸುಗ್ಗಿಯ ಕಾಲದಲ್ಲಿ ಅಗತ್ಯ ಪರಿಮಾಣದ ಕಚ್ಚಾಮಾಲು ದಾಸ್ತಾನು ಮಾಡಿಕೊಳ್ಳಲು ಗೋದಾಮು ನಿರ್ಮಾಣದ ಕಾಮಗಾರಿ ರೂ.6,09,01900/- (ಆರು ಕೋಟಿ

S.R. & M.R. ASSOCIATES CHARTERED ACCOUNTANTS BANGALORE

ಒಂಬತ್ತು ಲಕ್ಷ)ಗಳ ವೆಚ್ಚದಲ್ಲಿ ಪೂರ್ಣಗೊಂಡಿದ್ದು ಸದರಿ ಗೋದಾಮಿನಲ್ಲಿ ಕಚ್ಚಾಮಾಲು ದಾಸ್ತಾನು ಮಾಡಿಕೊಳ್ಳಲಾಗುತ್ತಿದೆ.

12. ಘಟಕದ ಆಡಳಿತ ಕಛೇರಿಯ ವಿಸ್ತೃತ ಕಟ್ಟಡ ಹಾಗೂ ಉಪಹಾರ ಗೃಹದ ವಿಸ್ತೃತ ಕಟ್ಟಡ ರೂ.2,00,00,000/- (ಎರಡು ಕೋಟಿ) ಗಳ ವೆಚ್ಚದಲ್ಲಿ ಕಾಮಗಾರಿಯು ಪ್ರಗತಿ ಹಂತದಲ್ಲಿದೆ.
13. ಘಟಕದ ಅಧಿಕಾರಿ/ಸಿಬ್ಬಂದಿಗಳಿಗೆ ಕುಡಿಯುವ ನೀರಿನ ವ್ಯವಸ್ಥೆಗಾಗಿ ACQUA GUARD WATER PURIFIER ರೂ.92,000/- ಗಳ ವೆಚ್ಚದಲ್ಲಿ ಖರೀದಿ ಮಾಡಿ ವ್ಯವಸ್ಥೆ ಮಾಡಲಾಗಿದೆ.
14. 300 ಮೆ.ಟನ್ ಘಟಕದಲ್ಲಿ ಹಬೆಯಂತ್ರ ವಿಭಾಗದ ಬಳಿ ಕನಿಷ್ಟ 600 ಮೆ.ಟನ್ ಫ್ಯೂಯಲ್ ಬ್ರಿಕೇಟ್ಸ್ ಶೇಖರಣೆ ಮಾಡುವಷ್ಟು ಹೆಚ್ಚುವರಿ Shelter ನಿರ್ಮಿಸುವ ಕಾಮಗಾರಿಗೆ ರೂ.18,00,000/-ಗಳ ವೆಚ್ಚದಲ್ಲಿ ಟೆಂಡರ್ ಪ್ರಕ್ರಿಯೆ ನಡೆದು ಕಾರ್ಯಾದೇಶ ನೀಡಲಾಗಿದೆ.
15. 300 ಮೆ.ಟನ್ ಘಟಕದ ಪೂರ್ವ ಭಾಗದ ಕಚ್ಚಾಮಾಲು ಸ್ವೀಕರಣೆ ಮಾಡುವ ಜಾಗದಲ್ಲಿ Shelter ನಿರ್ಮಿಸುವ ಕಾಮಗಾರಿಗೆ ರೂ.16,00,000/-ಗಳ ವೆಚ್ಚದಲ್ಲಿ ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡು ಕಾರ್ಯಾದೇಶ ನೀಡಲಾಗಿದೆ.
16. 300 ಮೆ.ಟನ್ ಘಟಕದ ಕಚ್ಚಾಮಾಲು ದಾಸ್ತಾನು ಮಾಡುವ ಕ್ಯಾಪ್ ಸ್ಟೋರೇಜ್ ಜಾಗದಲ್ಲಿ Shelter ನಿರ್ಮಿಸುವ ಕಾಮಗಾರಿಯು ರೂ.2,00,00,000/- (ಎರಡು ಕೋಟಿ) ಗಳ ವೆಚ್ಚದಲ್ಲಿ ಟೆಂಡರ್ ಪ್ರಕ್ರಿಯೆ ನಡೆದು ಕಾರ್ಯಾದೇಶ ನೀಡಲಾಗಿದೆ.
17. 300 ಮೆ.ಟನ್ ಘಟಕದಲ್ಲಿ ಎಂ.ಎಂ.ಸಿ.ಎಫ್. ಗೋದಾಮು ನಿರ್ಮಾಣ ಕಾಮಗಾರಿಗೆ ರೂ.1,00,00,000/-(ಒಂದು ಕೋಟಿ) ಗಳ ವೆಚ್ಚದಲ್ಲಿ ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡು ಕಾರ್ಯಾದೇಶ ನೀಡಲಾಗಿದೆ.
18. 200 ಮೆ.ಟನ್ ಘಟಕದ ಕ್ಯಾಪ್ ಸ್ಟೋರೆಜ್‌ನಿಂದ ಗೋದಾಮಿನ ಒಳ ಭಾಗಕ್ಕೆ ಕಚ್ಚಾ ಪದಾರ್ಥಗಳನ್ನು ಸಾಗಾಣಿಕೆ ಮಾಡಿ ಕೊಳ್ಳಲು ರೂ.19.60,000/-ಗಳ ವೆಚ್ಚದಲ್ಲಿ Mobile Conveyor ಅಳವಡಿಸಿಕೊಳ್ಳುವ ಕಾಮಗಾರಿ ಪ್ರಗತಿಯಲ್ಲಿದೆ.
19. 2019-20 ನೇ ಸಾಲಿನಲ್ಲಿ ಘಟಕವು ತಾತ್ಕಾಲಿಕ ಅಂತಿಮ ತ:ಖ್ತೆಯ ಪ್ರಕಾರ **ರೂ. 10.06** ಕೋಟಿ ನಿವ್ವಳ ಲಾಭಗಳಿಸಿದೆ.

ರಾಜಾನುಕುಂಟೆ ಪಶು ಆಹಾರ ಘಟಕ:

- 2019-20 ನೇ ಸಾಲಿನಲ್ಲಿ IBP ಪ್ರಕಾರ ಪ್ರತಿ ತಿಂಗಳು ಸಾಮರ್ಥ್ಯಕ್ಕನುಗುಣವಾಗಿ 6000.00 ಮೆ.ಟನ್ ಪಶು ಆಹಾರ ಉತ್ಪಾದನೆ ಮಾಡಬೇಕಿದ್ದು, ಆದರೆ ಪ್ರತಿ ತಿಂಗಳು ಸರಾಸರಿ 7295.00 ಮೆ.ಟನ್ ಉತ್ಪಾದನೆ ಮಾಡಿದ್ದು, ಸಾಮರ್ಥ್ಯ ಮೀರಿ ಸುಮಾರು 120.00 % ರಷ್ಟು ಉತ್ಪಾದನೆ ಮಾಡಿ ಒಕ್ಕೂಟಗಳಿಗೆ ಬೇಡಿಕೆಗನುಗುಣವಾಗಿ ಪಶು ಆಹಾರ ಸರಬರಾಜು ಮಾಡಲಾಗಿದೆ.
- ಕರುಗಳ ಪ್ರಾರಂಭಿಕ ಪಶು ಆಹಾರ, ಗರ್ಭ ರಾಸುವಿನ ಪಶು ಆಹಾರ, ಕರುಗಳ ಪಶು ಆಹಾರ, ಕರುಗಳ ಬೆಳವಣಿಗೆ ಪಶು ಆಹಾರ, ಖನಿಜ ಮಿಶ್ರಣ ಮತ್ತು ನೆಕ್ಕುಬಿಲ್ಲೆಗಳನ್ನು ಒಕ್ಕೂಟಗಳ ಬೇಡಿಕೆಗನುಗುಣವಾಗಿ ಉತ್ಪಾದನೆ ಮಾಡಿ ಸರಬರಾಜು ಮಾಡಲಾಗಿದೆ.
- 2019-20 ನೇ ಸಾಲಿನಲ್ಲಿ ಮೈಸೂರು ಸಹಕಾರಿ ಹಾಲು ಒಕ್ಕೂಟದ ವ್ಯಾಪ್ತಿಯಲ್ಲಿ NDDB ರವರ ಸಹಯೋಗದೊಂದಿಗೆ ಹೊಸದಾಗಿ ಗರ್ಭ ರಾಸುವಿನ/ ಕರುಗಳ ಬೆಳವಣಿಗೆ ಪಶು ಆಹಾರವನ್ನು ಬೇಡಿಕೆಗನುಗುಣವಾಗಿ ಉತ್ಪಾದನೆ ಮಾಡಿ ಸರಬರಾಜು ಮಾಡಲಾಗಿದೆ.
- ಪ್ರಸ್ತುತ ಘಟಕದಲ್ಲಿ 50 ಕೆ.ಜಿ. ಬ್ಯಾಗ್‌ನ Mineral Mixture Plant ನ್ನು ಚಾಲನೆ ಮಾಡಲಾಗುತ್ತಿದ್ದು, ಪ್ರತಿನಿತ್ಯ ಉತ್ಪಾದನೆಗನುಸಾರವಾಗಿ ಎಂ.ಎಂ.ಸಿ.ಎಫ್ ಉತ್ಪಾದನೆ ಮಾಡಲಾಗುತ್ತಿದೆ.

S.R. & M.R. ASSOCIATES CHARTERED ACCOUNTANTS BANGALORE

- 2019-20 ನೇ ಸಾಲಿನಲ್ಲಿ ಒಕ್ಕೂಟಗಳ ಬೇಡಿಕೆಗೆ ಅನಗುಣವಾಗಿ 1 ಕೆ.ಜಿ Chelated Mineral Mixture 468.940 ಮೆ.ಟನ್ ಮತ್ತು 317.340 ಮೆ.ಟನ್ 1 ಕೆ.ಜಿ Mineral Mixture ಉತ್ಪಾದನೆ ಮಾಡಿ ಸರಬರಾಜು ಮಾಡಲಾಗಿರುತ್ತದೆ.
- ಘಟಕದಲ್ಲಿ ಪ್ರಿಮಿಕ್ಸ್ ತಯಾರಿಸಲು ಹೊಸ ಆಧುನಿಕ ತಂತ್ರಜ್ಞಾನವುಳ್ಳ ಪದ್ಧತಿಯನ್ನು ಅಳವಡಿಸಿ ಕೊಳ್ಳಲಾಗಿದ್ದು, ಪ್ರಸ್ತುತ ಚಾಲನೆಯಲ್ಲಿರುತ್ತದೆ.
- ಘಟಕದಲ್ಲಿ ಬ್ರಿಕೆಟ್ ಬಾಯ್ಲರ್ ಅಳವಡಿಸಿರುವುದರಿಂದ ಹಬೆ ಉತ್ಪಾದನಾ ವೆಚ್ಚ ಕಡಿಮೆ ಮಾಡಲಾಗಿದೆ.
- ಘಟಕದ ಆಕರ್ಷಣೆಯನ್ನು ಹೆಚ್ಚಿಸುವ ಸಲುವಾಗಿ ರಸ್ತೆಯ ಬದಿಗಳಲ್ಲಿ ಹುಲ್ಲುಹಾಸುಗಳನ್ನು (Lawn) ಹಾಕಿಸಿ, ಸ್ವಚ್ಚತೆಯನ್ನು ಕಾಪಾಡಲಾಗಿದೆ. ಇದರಿಂದ ಘಟಕದ ಆವರಣ ನೋಡಲು ಸುಂದರವಾಗಿರುತ್ತದೆ.
- ಅಧಿಕಾರಿ/ಸಿಬ್ಬಂದಿಗಳಿಗೆ ವಿಶೇಷವಾಗಿ ಜೀವನದಲ್ಲಿ ಅಗ್ನಿ ಅನಾಹುತಗಳಿಂದ ಸ್ವಯಂ ಸುರಕ್ಷತೆ ವಿಷಯದ ಬಗ್ಗೆ ಪರಿಣಿತರಿಂದ ಉಪನ್ಯಾಸ ನೀಡಲಾಗಿರುತ್ತದೆ.
